
ಪ್ರಚೋದನೆ


ಲಂಕೇಶ್


ಜುಲೈ 04, 2012 ಪುಟ 20 ರೂ. 14/-



ಆಲ್ದಾಳ ಸೌಹಾರ್ದ ಬದುಕಿನ ಸಂಕೇತ

ಮಗುವನ್ನೇ ಮುಕ್ಕಿದ ಾಸ್ಕಲ್ ರಾಸ್ಕಲ್





ಕಾಂಗ್ರೆ ಮೇಲೆ ಲಿಂಗಾಯತರ ದಾಳಿ

ೀರಶೈವ ಮಹಾಸಭಾ ದಿಕ್ಕೆಟ್ಟ ಚುನಾವಣೆ





ಆರ್ಥಿಕ ಅಪರಾಧಗಳ ತನಿಖೆ ರೆಡ್ಡಿಗೆ ಬೆಂಡ್


ರಾಮುಲು ಮಗಳ ಕಿಡ್ನ್ಯಾಪ್ ಪ್ರಹಸನ

ಸರ ಕದ್ದು ಬಂಗಲೆ ಕಟ್ಟಿಸಿದರು

ಚಾರ್ವಾಕ



• ಶಿವಸುಂದರ್



ಗುಜರಾತ್ ಮೋ'ದರಿ'
ಅಭಿವೃದ್ಧಿಯ ಕೆಲವು ಸತ್ಯಗಳು

ಕಳೆದ ಚುನಾವಣೆಯಲ್ಲಿ ಪಡೆದಷ್ಟು ಸೀಟುಗಳನ್ನು ಈ ಬಾರಿ ಕಾಂಗ್ರೆಸ್ ಆಗಲೀ ಅಥವಾ ಬಿಜೆಪಿಯಾಗಲೀ ಪಡೆಯಲಾರದು ಎಂಬ ದಟ್ಟ ಅಭಿಪ್ರಾಯ ರೂಪುಗೊಳ್ಳುತ್ತಿದ್ದರೂ ಬಿಜೆಪಿಯಲ್ಲಿ ಈಗಾಗಲೇ ಮುಂದಿನ ಪ್ರಧಾನಿ ಗುಜರಾತ್ ಮುಖ್ಯಮಂತ್ರಿ, ನರಹಂತಕ ಮೋದಿಯೇ ಆಗಬೇಕೆಂಬ ಹುಯಿಲನ್ನು ಎಬ್ಬಿಸಲಾಗಿದೆ. ಅದಕ್ಕೆ ಪೂರಕವಾಗಿ ಅವರ ಸಾಧನೆಗಳ ದೊಡ್ಡ ಪಟ್ಟಿಯನ್ನು ಮತ್ತು ವಿಶೇಷವಾಗಿ ಗುಜರಾತನ್ನು ಮೋದಿ ಕಾಲದಲ್ಲಿ ಹೇಗೆ ಧರೆಗಿಳಿದ ಸ್ವರ್ಗವನ್ನಾಗಿ ಮಾಡಲಾಗಿದೆಯೆಂಬ ಬಗ್ಗೆ ದೊಡ್ಡ ರೀತಿಯಲ್ಲಿ ಮೀಡಿಯಾ ಪ್ರಚಾರ ನಡೆಯುತ್ತಿದೆ. ಆದರೆ ವಾಸ್ತವವಾಗಿ ನೋಡಿದರೆ ಗುಜರಾತಿನಲ್ಲೇ ಮೋದಿಯ ವಿರುದ್ಧ ಬಿಜೆಪಿಯ ದೊಡ್ಡ ಬಣ ಬಂಡೆದ್ದಿದೆ. ಕೇಶೂಭಾಯಿ ಪಟೇಲ್ ನೇತೃತ್ವದಲ್ಲಿ ಮೋದಿಯ ಸರ್ವಾಧಿಕಾರಿ ಆಡಳಿತದಿಂದ ಮೂಲೆಗುಂಪಾಗಿರುವ ಅತೃಪ್ತ ಮತ್ತು "ವಂಚಿತ" ಬಿಜೆಪಿ ಹಿರಿಯ ನಾಯಕರುಗಳು ಮೋದಿಯ ವಿರುದ್ಧ ಕತ್ತಿ ಮಸೆಯುತ್ತಿದ್ದಾರೆ. ಜೊತೆಗೆ ಸಂಜಯ್ ಜೋಷಿ ಪ್ರಕರಣ ಮೋದಿ ಸಂತ್ರಸ್ತರಿಗೆ ಇನ್ನಷ್ಟು ಒಗ್ಗೂಡಲು ಅವಕಾಶ ಮಾಡಿಕೊಟ್ಟಿದೆ. ಬಿಜೆಪಿಗೆ ಹೆಚ್ಚು ಎಂಪಿಗಳನ್ನು ತಂದು ಕೊಡಬಲ್ಲ ಕರ್ನಾಟಕದ ಬಿಜೆಪಿ ಈಗಾಗಲೇ ಒಡೆದಮನೆಯಾಗಿದೆ. ಅಲ್ಲದೆ ಬಿಜೆಪಿಯ ಕೇಂದ್ರೀಯ ನಾಯಕತ್ವವೇ ಒಡೆದ ಮನೆಯಾಗಿರುವುದರಿಂದ ಬಿಜೆಪಿ ಬಲವಾಗಿರುವ ರಾಜ್ಯಗಳಲ್ಲೂ ಈ ಒಡಕು ಬರಲಿರುವ ಚುನಾವಣೆಗಳಲ್ಲಿ ಪ್ರಭಾವ ಬೀರಲಿದೆ. ಎಲ್ಲಕ್ಕಿಂತ ಹೆಚ್ಚಾಗಿ ಕಾಂಗ್ರೆಸ್ ಆಗಲೀ, ಬಿಜೆಪಿಯಾಗಲೀ ತಮ್ಮಂತೆ ತಾವೇ ಅಧಿಕಾರಕ್ಕೆ ಬರುವ ಸಾಧ್ಯತೆ ಇಲ್ಲದಿರುವುದರಿಂದ ಸಮ್ಮಿಶ್ರ ರಾಜಕಾರಣದ ತರ್ಕಗಳೇ ಈ ಚುನಾವಣೆಯನ್ನೂ ಅದರ ರಾಜಕೀಯವನ್ನೂ ಪ್ರಭಾವಿಸಲಿವೆ. ಬಿಜೆಪಿ ನೇತೃತ್ವದ ಎನ್‌ಡಿಎ ಪಕ್ಷಗಳು ತಮ್ಮದೇ ಹಿತಾಸಕ್ತಿಗಾಗಿ ಪರಮ ಹಿಂದೂತ್ವವಾದಿ ಮೋದಿಯನ್ನು ಪ್ರಧಾನಿ ಅಭ್ಯರ್ಥಿಯನ್ನಾಗಿ ಒಪ್ಪಿಕೊಳ್ಳಲಾರವು. ಅದರ ಬಗ್ಗೆ ಈಗಾಗಲೇ ಎನ್‌ಡಿಎಯ ಅತಿ ಪ್ರಮುಖ ಮಿತ್ರಪಕ್ಷವಾದ ಜೆಡಿಯುನ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಹೇಳಿಯಾಗಿದೆ. ಈ ಎಲ್ಲಾ ಕಾರಣಗಳಿಂದ ಈ ಬಾರಿ ಎನ್‌ಡಿಎ ಅಧಿಕಾರಕ್ಕೆ ಬರುವುದು ಕಷ್ಟ. ಹಾಗೆಯೇ ಕಾಂಗ್ರೆಸ್ ಹಾದಿಯು ಸುಗಮವಲ್ಲ, ಆದ್ದರಿಂದಲೇ ಮೂರನೇ ರಂಗದ ಚಟುವಟಿಕೆಗಳು ರಾಜ್ಯಮಟ್ಟದಲ್ಲಿ ಪ್ರಭಾವಿಗಳಾಗಿರುವ ದಳ, ಸಮಾಜವಾದಿ, ಟಿಎಂಸಿ ಪಕ್ಷಗಳು ದೆಹಲಿಯತ್ತ ಆಸೆಗಣ್ಣಿಂದ ನೋಡುತ್ತಾ ಅವಕಾಶವಾದಿ ರಾಜಕಾರಣ ಪ್ರಾರಂಭಿಸಿವೆ. ರಾಷ್ಟ್ರೀಯ ಪಕ್ಷಗಳ ಜೊತೆ ಚೌಕಾಸಿ ಪ್ರಾರಂಭಿಸಿವೆ. ರಾಷ್ಟ್ರಪತಿ ಚುನಾವಣೆ ಅದರ ಎಲ್ಲಾ ಆಯಾಮಗಳನ್ನು ಬಿಚ್ಚಿಡುತ್ತಿದೆ. ಅದೇನೇ ಇರಲಿ. ಎನ್‌ಡಿಎ ಅಧಿಕಾರಕ್ಕೆ ಬರುವುದು ಸುಲಭವಲ್ಲ, ಬಂದರೂ ಮೋದಿ ಎನ್‌ಡಿಎ ರಂಗದ ಸಮ್ಮತ ಪ್ರಧಾನಿಯಾಗುವುದಂತೂ ಸಾಧ್ಯವೇ ಇಲ್ಲ ಎನ್ನುವ ಪರಿಸ್ಥಿತಿ ಈಗಂತೂ ಇದೆ. ಅದನ್ನೇ ಮೊನ್ನೆ ವಾಜಪೇಯಿ ಪ್ರಧಾನಿಯಾಗಿದ್ದಾಗ ಅವರ ರಾಜಕೀಯ ಸಲಹೆಗಾರನಾಗಿದ್ದ ಬ್ರಿಜೇಶ್ ಅವರೂ ಹೇಳಿದ್ದಾರೆ. ಅದಕ್ಕಿಂತ ಹೆಚ್ಚಾಗಿ ಪ್ರಧಾನಿ ಅಭ್ಯರ್ಥಿ ಜಾತ್ಯತೀತ ವ್ಯಕ್ತಿಯಾಗಿರಬೇಕು ಎಂಬ ನಿತೀಶ್ ಸಲಹೆಯನ್ನು ಬಿಹಾರದ ಬಿಜೆಪಿ ಅಧ್ಯಕ್ಷ ಸುಶೀಲ್ ಕುಮಾರ್ ಮೋದಿಯೇ ಒಪ್ಪಿಕೊಂಡಿರುವುದು ಮೋದಿ ಪ್ರಧಾನಿಯಾಗುವುದು ಎನ್‌ಡಿಎ ಮಿತ್ರಪಕ್ಷಗಳಿಗೆ ಮಾತ್ರವಲ್ಲ, ಬಿಜೆಪಿಯೊಳಗೇ ಒಂದು ಗುಂಪಿಗೆ ಬೇಕಾಗಿಲ್ಲ ಎಂಬುದನ್ನು ಸಾಬೀತುಪಡಿಸುತ್ತದೆ.

ಅದೇನೇ ಇರಲಿ. ಮೋದಿಯನ್ನು ಹಿಂದೂತ್ವ ಕಟ್ಟಾಳು ಎಂಬ ಕಾರಣಕ್ಕಾಗಿ ಮತ್ತು ಈ ದೇಶವನ್ನು ಹಿಂದೂ ರಾಷ್ಟ್ರ ಮಾಡಬೇಕು ಎಂದು ಯುದ್ಧ ಹೂಡಿರುವ ಹಿಂದೂತ್ವವಾದಿಗಳು ಮೋದಿಯನ್ನು ಪ್ರಧಾನಿಯನ್ನಾಗಿ ಮಾಡಲು ಹತ್ತು ಹಲವು ಪ್ರಚಾರಗಳನ್ನು ಪ್ರಾರಂಭಿಸಿವೆ. ಅದರಲ್ಲಿ ಒಂದು ಗುಜರಾತ್ ರಾಜ್ಯ ದೇಶದಲ್ಲಿ ಅತ್ಯಧಿಕ ಅಭಿವೃದ್ಧಿಯನ್ನು ಸಾಧಿಸಿದೆ ಮತ್ತು ಅದು ಈ ದೇಶಕ್ಕೇ ಮಾದರಿಯೆಂಬ ಪ್ರಚಾರ. ಅದಕ್ಕೆ ಅವರು ಹಲವು ಅರ್ಧ ಸತ್ಯಗಳನ್ನೂ ಮತ್ತು ಹಸಿಸುಳ್ಳುಗಳನ್ನು ಬಿತ್ತರಿಸುತ್ತಿದ್ದಾರೆ. ಅಂಥ ಹಲವು ಸುಳ್ಳುಗಳ ಕಂತೆಯನ್ನು ಇತ್ತೀಚೆಗೆ ರಾಷ್ಟ್ರದ ಕೆಲವು ಪ್ರಮುಖ ವಿದ್ವಾಂಸರು ಬಯಲು ಮಾಡಿದ್ದಾರೆ. ಅವುಗಳಲ್ಲಿ ಕೆಲವು ಹೀಗಿವೆ:

1. ಗುಜರಾತ್ ಇಡೀ ದೇಶದಲ್ಲೇ ಅತಿ ಹೆಚ್ಚು ಅಭಿವೃದ್ಧಿ ಸಾಧಿಸಿರುವ ರಾಜ್ಯ ಎಂದು ಹೇಳಲಾಗುತ್ತದೆ. ಆದರೆ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಗುಜರಾತ್‌ನ ಸಾಧನೆ ಅತ್ಯಂತ ಕಳಪೆಯಾಗಿದೆ. ಉದಾಹರಣೆಗೆ **LEB (life expectancy at birth)**, ಅಂದರೆ ಹುಟ್ಟುವ ಮಕ್ಕಳು ಬದುಕುಳಿಯುವ ಸಾಧ್ಯತೆಗಳ ಪ್ರಮಾಣದಲ್ಲಿ ಗುಜರಾತ್ ದೇಶದಲ್ಲಿ ಇರುವುದು ಮೊದಲನೆಯ ಸ್ಥಾನದಲ್ಲಲ್ಲ, 9 ನೇ ಸ್ಥಾನದಲ್ಲಿ, ಹಾಗೆಯೇ **SLE (school life expectancy)** ಶಾಲೆಯಲ್ಲಿ ಮಕ್ಕಳು ಓದು ಮುಂದುವರೆಸುವ ಸಾಧ್ಯತೆಯ ಪ್ರಮಾಣದಲ್ಲಿ 9 ನೇ ಸ್ಥಾನದಲ್ಲೂ, **MYS (mean years of schooling)** ಅಂದರೆ ಒಟ್ಟು ಸರಾಸರಿ ಆ ವಯೋಮಾನದ ಮಕ್ಕಳು ಎಷ್ಟು ವರ್ಷ ಶಾಲೆಗೆ ಹಾಜರಾಗಿದ್ದಾರೆ ಎಂಬ ಗಣತಿಯಲ್ಲಿ 7ನೇ ಸ್ಥಾನದಲ್ಲೂ ಇದೆ.

2. ಇನ್ನು ಮಾನವ ಅಭಿವೃದ್ಧಿ ಸೂಚ್ಯಂಕ ಎಂಬ ಅಭಿವೃದ್ಧಿಯನ್ನು ಅಳೆಯುವ ಪರ್ಯಾಯ ಮಾನದಂಡವನ್ನು ಕೈಬಿಟ್ಟು ಸರ್ಕಾರಿ ಮಾನದಂಡಗಳನ್ನೇ ಇಟ್ಟುಕೊಂಡರೂ ಗುಜರಾತ್‌ನ ಮೋದಿ ಸರ್ಕಾರ ಹಸಿಸುಳ್ಳುಗಳನ್ನು ಹೇಳುತ್ತಿರುವುದು ಸ್ಪಷ್ಟವಾಗುತ್ತದೆ. ಉದಾಹರಣೆಗೆ ಮೋದಿ ಭಟ್ಟಂಗಿಗಳ ಪ್ರಕಾರ ಮೋದಿ ಅಧಿಕಾರದ ಅವಧಿಯಲ್ಲಿ ಅಂದರೆ **2001-10**ರ ಅವಧಿಯಲ್ಲಿ ಗುಜರಾತ್‌ನ ಸರಾಸರಿ ರಾಜ್ಯ ಒಟ್ಟಾರೆ ಉತ್ಪನ್ನದ ಅಭಿವೃದ್ಧಿಯ ಗತಿ **8.01** ರಿಂದ **8.68**ಕ್ಕೆ ಏರಿತೆಂದೂ ಇದು ದೇಶದ ಯಾವ ರಾಜ್ಯವೂ ಮಾಡದ ಅಭಿವೃದ್ಧಿಯೆಂದೂ ಕೊಂಡಾಡಲಾಗುತ್ತದೆ. ಆದರೆ ಅಂಕಿಅಂಶಗಳನ್ನು ನೋಡಿದರೆ ದೇಶದ ಪ್ರಮುಖ ರಾಜ್ಯಗಳಾದ ಆಂಧ್ರ, ಹರ್ಯಾಣ, ಮಹಾರಾಷ್ಟ್ರ, ತಮಿಳುನಾಡು ಮತ್ತು ಉತ್ತರ ಪ್ರದೇಶಗಳು ಸಹ ಇದೇ ಪ್ರಮಾಣದ ಅಭಿವೃದ್ಧಿ ಗತಿಯನ್ನು ತೋರಿಸಿವೆ. ಹಾಗೆ ನೋಡಿದರೆ ಉತ್ತರಖಂಡ್ **(11.81)** ಮತ್ತು ಹರ್ಯಾಣ **(8.95)** ಗುಜರಾತಿಗಿಂತ ಹೆಚ್ಚಿನ "ಅಭಿವೃದ್ಧಿ" ಗತಿಯನ್ನು ದಾಖಲಿಸಿದೆ. ಇದನ್ನೇ ಅಭಿವೃದ್ಧಿ ಎಂದುಕೊಂಡರೆ ಅತ್ಯಂತ ಹಿಂದುಳಿದ ರಾಜ್ಯಗಳಾದ ಬಿಹಾರ ಮತ್ತು ಒರಿಸ್ಸಾಗಳು ಈ ಅವಧಿಯಲ್ಲಿ ತಮ್ಮ "ಅಭಿವೃದ್ಧಿ" ಗತಿಯನ್ನು ಶೇ.4ರಿಂದ 8.3ಕ್ಕೇ ಏರಿಸಿಕೊಂಡಿವೆ. ಈ ಅಭಿವೃದ್ಧಿಯ ಕಥನಗಳೆಲ್ಲಾ ಜನತೆಯನ್ನು ಅಳಿದುಳಿದ ಸಂಪನ್ಮೂಲಗಳನ್ನು ಕಿತ್ತುಕೊಂಡು ಕೆಲವೇ ಶ್ರೀಮಂತರನ್ನು ಬೆಳೆಸಿದ ಹಗಲು ದರೋಡೆಯ ಕಥನವೇ ಎಂಬುದನ್ನು ಮರೆಯುವಂತಿಲ್ಲ. ಆದರೆ ಇಲ್ಲಿ ಅಂಕಿಅಂಶಗಳನ್ನು ದಾಖಲಿಸಿರುವುದು ಅದರಲ್ಲೂ ಗುಜರಾತ್ ಸರ್ಕಾರ ಎಷ್ಟು ಸುಳ್ಳು ಹೇಳುತ್ತಿದೆ ಎಂಬ ಅಂಶಗಳನ್ನು ಸಾಬೀತು ಪಡಿಸಲು ಮಾತ್ರ!


2. ವಿದೇಶಿ ಬಂಡವಾಳದ ಹರಿವಿನಲ್ಲೂ ಮೋದಿ ಅವಧಿಯಲ್ಲಿ ಅತಿ ಹೆಚ್ಚು ಆಕರ್ಷಿಸಲಾಗಿದೆಯೆಂದೂ ಮೋದಿಯ ಗುಜರಾತ್ ವಿದೇಶಿ ಬಂಡವಾಳಿಗರ ಅತಿ ನೆಚ್ಚಿನ ತಾಣವೆಂದೂ ಕೊಚ್ಚಿಕೊಳ್ಳಲಾಗುತ್ತಿದೆ. ಒಂದು ದೇಶಿ ಅಭಿವೃದ್ಧಿ, ಸುರಾಜ್ಯ, ಸ್ವರಾಜ್ಯ ಎಂದೆಲ್ಲಾ ಬೊಗಳೆ ಹೊಡೆಯುವ ಹಿಂದೂತ್ವವಾದಿಗಳಿಗೆ ಈ ದೇಶದ ಸಂಪನ್ಮೂಲವನ್ನೆಲ್ಲಾ ಲೂಟಿ ಹೊಡೆಯುವ ವಿದೇಶಿ ಬಂಡವಾಳದ ಹರಿವು ಹೇಗೆ ಅಭಿವೃದ್ಧಿಯ ಮಾನದಂಡವಾದೀತು? ಇದೇ ಅವರ ಆಷಾಢಭೂತಿ... ಒಂದು ಉದಾಹರಣೆ. ಆದರೂ ಒಂದುಕ್ಷಣ ... ಅಭಿವೃದ್ಧಿಯ ಮಾನದಂಡವೆಂದು ಇಟ್ಟುಕೊಂ... ಅದರಲ್ಲೂ ಗುಜರಾತ್ ಸರ್ಕಾರ ಎಷ್ಟು ಸ... ಹೇಳುತ್ತಿದೆಯೆಂದು ಈ ಕೆಳಗಿನ ಅಂಕಿಅಂಶಗಳು ಹೇ... ಗುಜರಾತ್ ಸರ್ಕಾರದ ಪ್ರಕಾರ 2006-10ರ ಅವಧಿ... ಗುಜರಾತ್ 5.35 ಲಕ್ಷ ಕೋಟಿ ರೂಪಾಯಿ... ಎಂಒಯು-ಅಂದರೆ ಒಡಂಬಡಿಕೆ ಮಾಡಿಕೊಂ... ಇದರಿಂದ 6.74 ಲಕ್ಷ ಉದ್ಯೋಗ ಸೃಷ್ಟಿಯಾಗ... ಎಂದು ಸರ್ಕಾರ ಹೇಳಿಕೊಳ್ಳುತ್ತಿದೆ. ಕೇವಲ ಅಂಕಿಅಂ... ಇಟ್ಟುಕೊಂಡು ಮಾತನಾಡಿದರೂ ಇದೇ ಅವಧಿ... ಛತ್ತೀಸ್‌ಘಡ 9.5 ಲಕ್ಷ ಕೋಟಿ ರೂಪಾಯಿಗಳ ... ಒರಿಸ್ಸಾ 8 ಲಕ್ಷ ಕೋಟಿ ರೂಪಾಯಿಗಳ ಒ... ಮಾಡಿಕೊಂಡಿವೆ. ಕರ್ನಾಟಕದ ಉದಾಹರಣೆ... ನೋಡುವುದಾದರೆ ಈ ಬಗೆಯ 2010ರ ಬಂಡ... ಹೂಡಿಕೆದಾರರ ಸಮಾವೇಶದಲ್ಲಿ ಒಪ್ಪಂದವಾದದ್ದು ... ಲಕ್ಷ ಕೋಟಿ ರೂಪಾಯಿಗಳದ್ದು. ಈವ... ಸಾಕಾರಗೊಂಡಿದ್ದು 5000 ಕೋಟಿಗಳ ಬಂಡವಾಳ ... ವಿವಿಧ ಹಂತದಲ್ಲಿರುವುದು 23000 ಕೋಟಿ ರೂಪಾ... ಬಂಡವಾಳ ಹೂಡಿಕೆ. ಅಲ್ಲದೆ ಈ ವಿದೇಶಿ ಉದ್ಯಮ... ಈ ನಾಡಿನ ಸಂಪತ್ತನ್ನು ದುಗ್ಗಾಣಿ ಬೆಲೆಗೆ ಕೊಡದ ಹೊ... ಹೂಡಿಕೆ ಮಾಡುವುದಿಲ್ಲ, ಹೀಗಾಗಿ ಹೆಚ್ಚು ಹ... ಎಂಬುದು ಅಭಿವೃದ್ಧಿಯ ಲಕ್ಷಣವಲ್ಲ, ಅಧೋಗ... ಲಕ್ಷಣ. ಅದನ್ನೇ ಒರಿಸ್ಸಾ ಮತ್ತು ಛತ್ತೀಸ್‌ಘಡ... ನೋಡುತ್ತಿದ್ದೇವೆ. ಆದರೂ ಈ ಸುರಾಜ್ಯ-ಸ್ವರಾಜ್ಯದ ಬ... ಬಿಡುವ ಹಿಂದೂತ್ವವಾದಿಗಳು ದೇಶದ ದರೋಡೆ... ಅಭಿವೃದ್ಧಿಯೆನ್ನುತ್ತಾರೆ. ಮೋದಿಯಂತೂ ಆ ಮಾನದ... "ಸಾಧನೆ"ಯಲ್ಲೂ ಹಸಿ ಸುಳ್ಳನ್ನೇ ಹೇಳುತ್ತಿದ್ದಾನೆ.

3. ಇನ್ನು ಜನತೆಯ ಆದಾಯ. ಶಿಕ್ಷಣ ... ಆರೋಗ್ಯವನ್ನು ಮಾನದಂಡವಾಗಿಟ್ಟುಕೊಂಡು ಅಭಿ... ಯನ್ನು ಅಳತೆ ಮಾಡುವ ಮಾನವ ಅಭಿವೃದ್ಧಿ ಸೂಚ್ಯಂ... ಗುಜರಾತ್ ದೇಶದ ಹಲವು "ಹಿಂದುಳಿದ" ರಾ... ಗಿಂತಲೂ ಮತ್ತು ಮುಂದುವರೆದ ರಾಜ್ಯಗಳಿಗಿಂ... ಸಾಕಷ್ಟು ಹಿಂದೆಬಿದ್ದಿದೆ. ಮಾನವ ಅಭಿವೃದ್ಧಿಯ ಸೂಚ್ಯಂ... 2008ರಲ್ಲಿ ಗುಜರಾತ್ ಗಳಿಸಿದ್ದು ಕೇವಲ 0... ಅಂಕವನ್ನು, ಆದರೆ ಗುಜರಾತ್‌ಗಿಂತ ಹಿಂದುಳಿದ ರಾಜ... ಹಿಮಾಚಲ ಪ್ರದೇಶ 0.652 ಅಂಕವನ್ನೂ, ಪಂ... 0.605 ಅಂಕವನ್ನೂ, ಮಹಾರಾಷ್ಟ್ರ 0.572 ... ಹರ್ಯಾಣ 0.552 ಅಂಕವನ್ನು ಪಡೆದುಕೊಂಡಿತ್ತು, ... ಎಲ್ಲಕ್ಕಿಂತ ಹೆಚ್ಚು 0.790 ಅಂಕವನ್ನು ಪಡೆದುಕೊಂ...

ಇದು ಗುಜರಾತ್ ಮಾದರಿ ಅಭಿವೃದ್ಧಿ... ಹಿಂದೂತ್ವವಾದಿಗಳ ಜನವಿರೋಧಿತನದ ಅಸಲೀ ಸ್ವ...

ನೋ ಕಾಮೆಂಟ್ಸ್

"ಕರ್ನಾಟಕದಲ್ಲಿ ಅರಣ್ಯವಾಸಿಗಳು ರಾಷ್ಟ್ರೀಯ ಉದ್ಯಾನವನದ ಹೆಸರಿನಲ್ಲಿ ತಮ್ಮನ್ನು ಒಕ್ಕಲೆಬ್ಬಿಸುವುದನ್ನು ವಿರೋಧಿಸಿದರೆ ಜಾರ್ಖಂಡ್, ಛತ್ತೀಸ್‌ಗಢ,



ಒರಿಸ್ಸಾ ಮುಂತಾದ ರಾಜ್ಯಗಳಲ್ಲಿ ಗಣಿಗಾರಿಕೆಗಾಗಿ ತಮ್ಮ ನೆಲಗಳನ್ನು ವಶಪಡಿಸಿಕೊಳ್ಳುತ್ತಿರುವುದರ ವಿರುದ್ಧ ಅಲ್ಲಿನ ಅರಣ್ಯವಾಸಿಗಳು ಪ್ರತಿಭಟಿಸುತ್ತಿದ್ದಾರೆ. ಸರ್ಕಾರ ಆ ಹೋರಾಟವನ್ನು ಕೂಡಾ ನಕ್ಸಲ್ ಎಂದೇ ಕರೆಯುತ್ತದೆ ಮತ್ತು ಎಡಪಕ್ಷಗಳೂ ಅದನ್ನು ಒಪ್ಪಿಕೊಂಡಿವೆ. ಹೀಗಿರುತ್ತಾ ಬಿ.ವಿ. ಕಕ್ಕಿಲ್ಲಾಯರವರು ತನ್ನ ಕೊನೆ ಗಳಿಗೆಯಲ್ಲಿ ಶಂಕಿತ ನಕ್ಸಲ್ ವಿಠಲನ ಪರವಾಗಿ ದನಿ ಎತ್ತಿದರು ಎನ್ನುವುದು ಅವರ ಘನತೆಗೆ ಒಂದು ಉಜ್ವಲ ನಿದರ್ಶನ. ಆದರೆ ಅವರ ರಾಜಕೀಯ ಮಧ್ಯಪ್ರವೇಶದ ವ್ಯಂಗ್ಯ ಮಾತ್ರ ಅಸಹನೀಯವಾಗಿದೆ."

\- ಜಿ. ರಾಜಶೇಖರ್

"ಮುಂಗಾರು ವೈಫಲ್ಯದ ಹಿನ್ನೆಲೆಯಲ್ಲಿ ಮೋಡ ಬಿತ್ತನೆಯಂತ ಅವೈಜ್ಞಾನಿಕ ಕ್ರಮವನ್ನು ಸರ್ಕಾರ ಕೈ ಬಿಡಬೇಕು. ಈ ಪ್ರಯತ್ನ ಜಗತ್ತಿನ ಯಾವುದೇ ಭಾಗದಲ್ಲೂ ಯಶಸ್ವಿಯಾಗಿಲ್ಲ, ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ ಈಗಾಗಲೇ ಉತ್ತಮ ಮಳೆ ಆರಂಭವಾಗಿದೆ. ಆದ್ದರಿಂದ ಮೋಡ ಬಿತ್ತನೆಯಂಥ ಅವೈಜ್ಞಾನಿಕ ತೀರ್ಮಾನವನ್ನು ಕೈಬಿಟ್ಟು ಸಕಾಲಕ್ಕೆ ರೈತರಿಗೆ ಬಿತ್ತನೆ ಬೀಜ ಮತ್ತು ರಸಗೊಬ್ಬರ ವಿತರಿಸಲು ಮುಂದಾಗಬೇಕು."



\- ಸಿದ್ದರಾಮಯ್ಯ

"ಶಿಕ್ಷಣ ಹಕ್ಕು ಕಾಯ್ದೆ ಪ್ರಕಾರ ದುರ್ಬಲ ವರ್ಗದ ಮಕ್ಕಳಿಗೆ ಮೀಸಲಿದ್ದ ಸ್ಥಾನಗಳಲ್ಲಿ ಶೇ.37ರಷ್ಟನ್ನು ಮಾತ್ರ ಸರ್ಕಾರ ಭರ್ತಿ ಮಾಡಿದೆ. ರಾಜ್ಯಾದ್ಯಂತ ಆರ್‌ಟಿಇ ಅನ್ವಯ ಲಭ್ಯವಿದ್ದ 1.12 ಲಕ್ಷ ಸೀಟುಗಳ ಪೈಕಿ 41 ಸಾವಿರ ಸ್ಥಾನಗಳು ಭರ್ತಿಯಾಗಿವೆ. ಬೆಂಗಳೂರು ಉತ್ತರ, ದಕ್ಷಿಣ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿದ್ದ 39 ಸಾವಿರ ಸೀಟುಗಳಲ್ಲಿ ಕೇವಲ 5 ಸಾವಿರ ಸೀಟುಗಳನ್ನು ಮಾತ್ರ ದುರ್ಬಲ ವರ್ಗದ ಮಕ್ಕಳು ಗಿಟ್ಟಿಸಿಕೊಂಡಿದ್ದಾರೆ."

\- ವರದಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ದೇಶದಲ್ಲಿ ಕುಲಾಂತರಿ ಹತ್ತಿ ಬೆಳೆದ ರೈತರು ನಷ್ಟ ಅನುಭವಿಸಿದ್ದರೆ ಅದು ಬರಗಾಲ, ಪ್ರವಾಹ ಅಥವಾ ಸಾಲದ ಕಾರಣದಿಂದಲೇ ಹೊರತು ಕುಲಾಂತರಿ ಬೆಳೆ ಬೆಳೆದಿದ್ದರಿಂದ ಅಲ್ಲ. ಸಾಮಾನ್ಯ ಹತ್ತಿ ಬೆಳೆಗೆ ಹುಳುಗಳ ಕಾಟ, ರೈತ ಕಾರ್ಮಿಕರ ಕೊರತೆ, ಇಳುವರಿಯ ಏರುಪೇರು, ಹೆಚ್ಚು ಬಿತ್ತನೆ ಬೀಜದ ಅಗತ್ಯದಂಥ ಸಮಸ್ಯೆಗಳಿದ್ದರೆ ಕುಲಾಂತರಿ ಹತ್ತಿ ಬೆಳೆಯಲ್ಲಿ ಈ ಯಾವ ಸಮಸ್ಯೆಗಳೂ ಇಲ್ಲ."

\- ಅಜಯ್ ಜಾಖರ್, ಬಿಕೆಎಸ್ ಅಧ್ಯಕ್ಷ

ರಾಷ್ಟ್ರಪತಿ ಭವನ ಬಿಡುವ ಹೊತ್ತಿನಲ್ಲಾದರೂ ರಾಷ್ಟ್ರ ನೆನಪಿಗೆ ಬಂತಲ್ಲಾ?

"ವಿವಿಧ ಉದ್ಯಮ ಸಂಸ್ಥೆಗಳನ್ನು ಭೇಟಿ ಮಾಡಿದ ನಂತರ ಪತ್ರಕರ್ತರನ್ನುದ್ದೇಶಿಸಿ ಮಾತನಾಡಿದ ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಅವರು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ವಿಷಯ ತಿಳಿದಾಗ ತುಂಬಾ ನೋವಾಗುತ್ತದೆ ಎಂದರು. ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕತೆ ಬೆಳೆದರೆ ಅಭಿವೃದ್ಧಿಯ ಸೌಲಭ್ಯಗಳು ರೈತರಿಗೆ ತಲುಪಲಿದೆ ಎಂದರು."

\-ಪತ್ರಿಕಾ ವರದಿ

ಅಂತಃಕರಣವಿಲ್ಲದವರು ಇನ್ನೇನು ಹೇಳಿಯಾರು?

"ಸನಾತನ ಭಾರತೀಯ ಸಂಸ್ಕೃತಿಯನ್ನು ಮಕ್ಕಳಿಗೆ ತಿಳಿಸಿಕೊಡುವ ಉದ್ದೇಶದಿಂದ ಶಿಕ್ಷಣದಲ್ಲಿ ಕೇಸರೀಕರಣ ಅಗತ್ಯ. ಕೇಸರಿ ಎಂದರೆ ನನ್ನ ಪ್ರಕಾರ ತ್ಯಾಗದ ಸಂಕೇತ. ಸನಾತನ ಭಾರತೀಯ ಸಂಸ್ಕೃತಿಯ ಇತಿಹಾಸ, ಪರಂಪರೆ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಬೇಕಾದ ಅಗತ್ಯವಿದೆ. ಆ ಮೂಲಕ ಮಕ್ಕಳಲ್ಲಿ ರಾಷ್ಟ್ರಾಭಿಮಾನ ಮೂಡಿಸಬೇಕು.



ಈ ಹಿಂದೆ ಕೇಸರೀಕರಣ ಆಗಿರಲಿಲ್ಲ ಅಂತಲ್ಲ. ಹಂತಹಂತವ... ಯತ್ನಿಸಲಾಗುತ್ತಿದೆ. ಆಗಬೇಕಾದ ಪ್ರಮಾಣದಲ್ಲಿ ಬದಲಾವಣೆಯಾಗಿಲ್ಲ. ನ... ಅದನ್ನು ಮಾಡುತ್ತೇವೆ."

\- ವಿಶ್ವೇಶ್ವರ ಹೆಗಡೆ ಕಾಗೇ...

ಇವರೂ ಕೂಡಾ ಸಮಾಜವಾದಿಗಳಾಗಿದ್ದವರು !!

"ಕರ್ನಾಟಕ ಏಕೀಕರಣವಾದರೆ ವೀರಶೈವರ ಪ್ರಾಬಲ್ಯ ಹೆಚ್ಚಾಗು... ಎಂದು ಕೆಂಗಲ್ ಹನುಮಂತಯ್ಯನವರು ಆಗಲೇ ಹೇಳಿದ್ದರು. ಆಗ... ಮಾತು ಅರ್ಥವಾಗಿರಲಿಲ್ಲ."

\-ಬಿ.ಬಿ.. ಚಂದ್ರೇಗ...

ಜಾತಿಗಳನ್ನು ಬಿಟ್ಟು ಇರುವ ಧರ್ಮ ಯಾವುದಯ್ಯ ಭಾರತದಲ್ಲಿ?



"ನಮ್ಮ ದೇಶದಲ್ಲಿ ಯಾವುದೇ ಧರ್ಮವ... ಸ್ವೀಕರಿಸಬಹುದು. ಆದರೆ ಯಾವುದೇ ಜಾತಿಯ... ಸ್ವೀಕರಿಸಲು ಸಾಧ್ಯವಿಲ್ಲ, ಜಾತಿಗಳ ವಿಷಯದಲ್ಲಿ ನ... ದೇಶ ಸಂಕುಚಿತವಾಗಿದೆಯೇ ಹೊರತು ಧರ್ಮ... ವಿಚಾರದಲ್ಲಿ ಅಲ್ಲ."

\- ಪಿ.ಜಿ.ಆರ್. ಸಿಂ...

ಇನ್ನು ಸರ್ಕಾರಿ ಶಾಲೆಗಳನ್ನು ಚಿತ್ರಪಟದಲ್ಲಿ ನೋ...

"ಐವರಿಗಿಂತ ಕಡಿಮೆ ವಿದ್ಯಾರ್ಥಿಗಳು ಇರುವ 617 ಮತ್ತು 10... ಕಡಿಮೆ ಇರುವ 122 ಶಾಲೆಗಳನ್ನು ವಿಲೀನಗೊಳಿಸುವ ಸಂಬಂಧ 201... ಸೆಪ್ಟೆಂಬರ್ 24ರಂದು ಸರ್ಕಾರ ಹೊರಡಿಸಿರುವ ಆದೇಶವನ್ನು ಮ... ನ್ಯಾಯಮೂರ್ತಿ ವಿಕ್ರಮ್‌ಜಿತ್ ಸೇನ್ ಮತ್ತು ನ್ಯಾಯಮೂರ್ತಿ ನಾಗರತ್ನ... ಎತ್ತಿಹಿಡಿದಿದ್ದಾರೆ."

\- ವ...


ಬಡವರ ಬಟ್ಟೆ ಕಸಿದು ಶ್ರೀಮಂತ ದೇಶಗಳ ಕಣ್ಣೀರು ಒರೆಸುವ ಪ್ರಧಾನಿ

ಕಂಡಹಾಗೆ



editorlankesh@gmail.com • ಗೌರಿ ಲಂಕೇಶ್

ಮೆಕ್ಸಿಕೋ ದೇಶದ ಕರಾವಳಿ ಪ್ರದೇಶದಲ್ಲಿರುವ ...ಸ್ ಕಾಬೋಸ್ ಎಂಬ ಐಷಾರಾಮಿ ನಗರದ ಸೌಂದರ್ಯ ...ತ್ತು ಅಲ್ಲಿನ ತಂಪಾದ ವಾತಾವರಣ ನಮ್ಮ ಬಡ ...ತದ ಪ್ರಧಾನಿ ಮನಮೋಹನ್ ಸಿಂಗ್ ...ರ ಮೇಲೆ ಎಂತಹ ಪ್ರಭಾವ ಬೀರಿದೆ ...ರೆ ಅವರು ಸದ್ಯ ಆರ್ಥಿಕ ಸಂಕಷ್ಟ ...ರುವ ಯೂರೋ ದೇಶಗಳ ನೆರವಿಗೆ ...ಮ್ಮ ದೇಶದ ಬೊಕ್ಕಸದಿಂದ ಬರೋಬ್ಬರಿ ...000 ಕೋಟಿ ರೂಪಾಯಿಗಳನ್ನು ...ಕುವುದಾಗಿ ಘೋಷಿಸಿದ್ದಾರೆ.



ಅರೆರೆ, ಇದೆಂತಹ ಅದ್ಭುತ?

...ಅಭಿವೃದ್ಧಿ ಹೊಂದಿರುವ ಯೂರೋ ...ಗಳಿಗೆ ಹಿಂದುಳಿದ ಭಾರತ ದೇಶ ...ಕ ನೆರವನ್ನು ಕೊಡುವುದೆಂದರೆ ...ಮಾನ್ಯವಾ? ಅದೂ ಒಂದು ...ರೋಗೆ ಈಗ 71 ರೂಪಾಯಿಗಳು ಸಮಾನವಾಗಿರು... ? ಲಕ್ಷಾಂತರ ಭಾರತೀಯರು ಸರಿಯಾಗಿ ಎರಡು ...ತ್ತಿನ ಪೌಷ್ಟಿಕ ಆಹಾರವಿಲ್ಲದೆ ನರಳುತ್ತಿದ್ದರೂ ನಮ್ಮ ...ನಿ ಯೂರೋ ಒಕ್ಕೂಟಕ್ಕೆ ಕೋಟ್ಯಾಂತರ ರೂಪಾಯಿ ... ದಾನ ನೀಡುವುದೆಂದರೇನು? ಭಾರತ ಜಾಗತಿಕ ...ದಲ್ಲಿ ಪ್ರಭಾವಿ ದೇಶ ಎನ್ನಿಸಿಕೊಳ್ಳಬೇಕಿದ್ದರೆ ಹೀಗೆ ... ನೀಡಬೇಕು, ಅದರಲ್ಲಿ ತಪ್ಪೇನು? ಎಷ್ಟೋ ವರ್ಷಗಳ ... ಅಭಿವೃದ್ಧಿ ಹೊಂದಿರುವ ದೇಶಗಳ ಮುಂದೆ ಸಾಲಕ್ಕಾಗಿ, ...ಕ್ಕಾಗಿ ಭಿಕ್ಷಾಪಾತ್ರೆ ಹಿಡಿಯುತ್ತಿದ್ದ ಭಾರತ ಇವತ್ತು ...ಹ ದೇಶಗಳ ನೆರವಿಗೆ ಹಣ ನೀಡುತ್ತದೆಂದರೆ ನಮ್ಮ ... ಆರ್ಥಿಕವಾಗಿ ಎಷ್ಟು ಬೆಳೆದಿದೆ ಎಂಬುದನ್ನು ...ರುತ್ತದಲ್ಲವೆ?


ಆದರೆ ವಾಸ್ತವವಾಗಿ ನಮ್ಮ ದೇಶ ಹೀಗೆ ಕೋಟ್ಯಾಂತರ ...ಪಾಯಿಗಳನ್ನು ದಾನ ಮಾಡುವಷ್ಟು ಶಕ್ತಿಯನ್ನು ...ದಿದೆಯೇ? ಅಥವಾ ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ... ಅವರ ಪೇಟಕ್ಕೆ ಮಲ್ಲಿಗೆ ಹೂ ಎಂಬ ಹೊಸ ...ನ್ನುಡಿಯನ್ನು ಇದು ಹುಟ್ಟುಹಾಕಿದೆಯೇ?!

...ಮೊನ್ನೆ ಮೆಕ್ಸಿಕೋ ದೇಶದಲ್ಲಿ ಜರುಗಿದ ಜಿ20 ...ಸಭೆಯಲ್ಲಿ 17 ದೇಶಗಳ ಯೂರೋ ಒಕ್ಕೂಟಕ್ಕೆ ...ಮಿಲಿಯನ್ ಡಾಲರ್‌ಗಳನ್ನು - ಅಂದರೆ 56,000 ...ಟಿ ರೂಪಾಯಿಗಳನ್ನು - ಕೊಡುವುದಾಗಿ ಸಿಂಗ್ ...ಳವಾಗಿ ಘೋಷಿಸಿದ ದಿನವೇ ಭಾರತದಲ್ಲಿ ಇನ್ನೊಂದು ...ಖ ಸಭೆ ನಡೆಯಿತು. 'ಫಸ್ಟ್‌ಪೋಸ್ಟ್' ಎಂಬ ವೆಬ್ ...ಜಿನ್‌ನಲ್ಲಿ ಬಿ.ವಿ.ರಾವ್ ಎಂಬುವವರು ಬರೆದಿರುವಂತೆ ...ಲ್ಲೇ ಭಾರತದ ರಾಷ್ಟ್ರಪತಿ ಆಗಲಿರುವ ಹಾಲಿ ಆರ್ಥಿಕ ... ಪ್ರಣಬ್ ಮುಖರ್ಜಿ ಅವರ ನೇತೃತ್ವದಲ್ಲಿ ಅವತ್ತು ...ಏ ಮುಖ್ಯ ಸಭೆ ಜರುಗಿತು. ಆ ಸಭೆಯ ಉದ್ದೇಶ ...ದಲ್ಲಿ ಹೆಚ್ಚುವರಿಯಾಗಿ ಸಂಗ್ರಹಗೊಂಡಿರುವ ಆಹಾರ ...ಗಳನ್ನು ಏನು ಮಾಡಬೇಕೆಂಬುದಾಗಿತ್ತು.

...ಇವತ್ತು ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ ...ಸಿಐ) ಸಂಸ್ಥೆಯು 82 ಮಿಲಿಯನ್ ಟನ್‌ನಷ್ಟು ...ಗಳನ್ನು ಹೊಂದಿದೆ. ಆದರೆ ಎಫ್‌ಸಿಐ ಸುಪರ್ದಿ...ರುವ ಗೋದಾಮುಗಳಲ್ಲಿ ಕೇವಲ 63 ಮಿಲಿಯನ್ ...ನಷ್ಟು ಧಾನ್ಯಗಳನ್ನು ಸಂಗ್ರಹಿಸಿಡಬಹುದಷ್ಟೆ. ಇದರರ್ಥ ...ಸ್ತಿ ಸುಮಾರು 19 ಮಿಲಿಯನ್ ಟನ್‌ನಷ್ಟು ಧಾನ್ಯಗಳು ...ಐ, ಗಾಳಿ, ಮಳೆಗೆ ತುತ್ತಾಗಿ ಕೊಳೆಯುತ್ತಿವೆ.

ಈ ಕಾರಣಕ್ಕೇ ಇತ್ತೀಚೆಗೆ ರಂಗರಾಜನ್ ಸಮಿತಿಯು ...ಸಿಐ ಸಂಗ್ರಹಿಸಿರುವ ಧಾನ್ಯಗಳಲ್ಲಿ 10 ಮಿಲಿಯನ್ ಟನ್‌ನಷ್ಟು ಧಾನ್ಯಗಳನ್ನು ಪಡಿತರ ಚೀಟಿ ಹೊಂದಿರುವ ಬಡವರಿಗೂ, ಮೂರು ಮಿಲಿಯನ್ ಟನ್‌ನಷ್ಟು ಧಾನ್ಯಗಳನ್ನು ಮುಕ್ತ ಮಾರುಕಟ್ಟೆಗೂ ಬಿಡುಗಡೆ ಮಾಡಬೇಕೆಂದು ಸರ್ಕಾರಕ್ಕೆ ಸೂಚಿಸಿತ್ತು. ಆದರೆ ಯೂರೋ ದೇಶಗಳಿಗೆ 56,000 ಕೋಟಿ ರೂಪಾಯಿಗಳನ್ನು ಪುಕ್ಕಟೆಯಾಗಿ ನೀಡುವ ನಮ್ಮ ಸರ್ಕಾರ ನಮ್ಮ ದೇಶದ ಬಡವರಿಗೇ ಕಡಿಮೆ ದರದಲ್ಲಿ ಧಾನ್ಯವನ್ನು ಬಿಡುಗಡೆ ಮಾಡಲು ಒಪ್ಪಲಿಲ್ಲ!

ಇದಕ್ಕೆ ಸರ್ಕಾರ ನೀಡಿದ ಕಾರಣ ಅಂತಹ ಹೊರೆಯನ್ನು ಹೊರುವ ಆರ್ಥಿಕ ಶಕ್ತಿ ಸರ್ಕಾರಕ್ಕಿಲ್ಲ ಎಂಬುದು. ಕೇಂದ್ರ ಸರ್ಕಾರ ಇಂತಹ ಅಮಾನವೀಯ ನಿರ್ಧಾರವನ್ನು ತೆಗೆದುಕೊಂಡಿರುವುದು ಇದೇ ಮೊದಲಲ್ಲ. ಎರಡು ವರ್ಷಗಳ ಹಿಂದೆಯೂ ಹೀಗೆ ಆಹಾರ ಧಾನ್ಯಗಳು ಬಯಲಿನಲ್ಲಿ ಕೊಳೆಯುತ್ತಿರುವಾಗ ಸುಪ್ರೀಂ ಕೋರ್ಟ್ ಅದನ್ನು ದೇಶದ ಬಡವರಿಗೆ ಉಚಿತವಾಗಿ ವಿತರಿಸಬೇಕೆಂದು ಆದೇಶಿಸಿತ್ತು. ಸುಪ್ರೀಂಕೋರ್ಟಿನ ಆದೇಶವನ್ನು ಧಿಕ್ಕರಿಸಿದ ಕೇಂದ್ರ ಸರ್ಕಾರ ಹಾಗೆ ಮಾಡಿದರೆ ಬೊಕ್ಕಸಕ್ಕೆ 5,000 ಕೋಟಿ ನಷ್ಟವಾಗುತ್ತದೆ ಎಂದು ವಾದಿಸಿತ್ತು.



ಎಲ್ಲಿ ಬಡವರಿಗೆ ಕೊಡಬಹುದಾಗಿದ್ದ 5,000 ಕೋಟಿ ರಿಯಾಯಿತಿ, ಎಲ್ಲಿ ಯೂರೋ ದೇಶಗಳಿಗೆ ಇವತ್ತು ನಮ್ಮ ಪ್ರಧಾನಿ ಕೊಟ್ಟಿರುವ 56,000 ಕೋಟಿ ರೂಪಾಯಿಯ ದಾನ?!

ಹೋಗಲಿ, ಅದು ಎರಡು ವರ್ಷಗಳ ಹಿಂದಿನ ಮಾತು, ಈಗ ಪರಿಸ್ಥಿತಿ ಬದಲಾಗಿದ್ದು ನಮ್ಮ ತೆರಿಗೆ ಹಣದಿಂದ 56,000 ಕೋಟಿಗಳನ್ನು ಯೂರೋಪಿನ ಜನರಿಗೆ ಕೊಡುವಷ್ಟು ಸಾಹುಕಾರ ದೇಶವಾಗಿದೆಯೇ ಎಂದು ನೋಡಿದರೆ ಅಲ್ಲೂ ಕಾಣಸಿಗುವುದು ಇಂತಹದ್ದೇ ವಿಪರ್ಯಾಸಗಳು.


ಪ್ರಣಬ್ ಮುಖರ್ಜಿ ಅವರು ಭಾಗವಹಿಸಿದ್ದ ಸಭೆಯು ಒಂದು ಲೆಕ್ಕಾಚಾರವನ್ನು ಹಾಕಿತು. ಅದರ ಪ್ರಕಾರ ರಂಗರಾಜನ್ ಸಮಿತಿಯು ಶಿಫಾರಸ್ಸು ಮಾಡಿರುವಂತೆ 13 ಮಿಲಿಯನ್ ಟನ್‌ಗಳಷ್ಟು ಆಹಾರ ಧಾನ್ಯವನ್ನು ಪಡಿತರ ಚೀಟಿ ಹೊಂದಿರುವ ಬಡವರಿಗೆ ಕಡಿಮೆ ದರದಲ್ಲಿ ವಿತರಿಸಿದರೆ ಸರ್ಕಾರಕ್ಕೆ 17,000 ಕೋಟಿ ವೆಚ್ಚ ತಗುಲುತ್ತಿತ್ತು. ಆದ್ದರಿಂದ 13 ಮಿಲಿಯನ್ ಟನ್ ಬದಲಾಗಿ ಕೇವಲ 8 ಮಿಲಿಯನ್ ಟನ್‌ಗಳನ್ನು ಬಿಡುಗಡೆ ಮಾಡಲು ನಿರ್ಧರಿಸಿತು. ಹಾಗೆ ಮಾಡುವುದಕ್ಕೂ 10,000 ಕೋಟಿ ತಗಲುತ್ತದೆ ಎಂದು ಗೊಣಗಿತು ಮುಖರ್ಜಿ ತಂಡ! (ಅಂದಹಾಗೆ 13 ಮಿಲಿಯನ್ ಟನ್‌ಗಳ ಬದಲಾಗಿ 8 ಮಿಲಿಯನ್ ಟನ್‌ಗಳನ್ನು ವಿತರಿಸಲು ಒಪ್ಪಿದ್ದಕ್ಕೆ ಸರ್ಕಾರ ಉಳಿಸಿದ್ದು 7,000 ಕೋಟಿ ರೂಪಾಯಿಗಳನ್ನು ಮಾತ್ರ)

ಅಂದರೆ ನಮ್ಮ ದೇಶದಲ್ಲಿ ಜನರು ಹಸಿವೆಯಿಂದ ಸಾಯುತ್ತಿದ್ದರೂ 17,000 ಕೋಟಿ ವೆಚ್ಚವಾಗುತ್ತದೆ ಎಂಬ ಕಾರಣಕ್ಕೆ ಆಹಾರ ಧಾನ್ಯ ಕೊಳೆತರೂ ಪರವಾಗಿಲ್ಲ, ಅದನ್ನು ಕಡಿಮೆ ದರದಲ್ಲಿ ಬಿಡುಗಡೆ ಮಾಡಲು ಹಿಂದೆಮುಂದೆ ನೋಡುವ ಸರ್ಕಾರ ಶ್ರೀಮಂತ ಯೂರೋ ದೇಶಗಳಿಗೆ ಅದಕ್ಕಿಂತಲೂ ಹೆಚ್ಚು ಕೋಟಿ ರೂಪಾಯಿಗಳನ್ನು ಹಿಂದುಮುಂದೆ ಯೋಚಿಸದೆ ನೀಡುತ್ತದೆ.

ಸರ್ಕಾರದ ನೇಮಿಸಿದ್ದ ತೆಂಡೂಲ್ಕರ್ ಸಮಿತಿಯ ಪ್ರಕಾರ ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 29.9 ಜನ ಬಡತನರೇಖೆಗಿಂತ ಕೆಳಗೆ ಜೀವಿಸುತ್ತಿದ್ದಾರೆ. ಅಂದರೆ 33 ಕೋಟಿ ಬಡಜನ ನಮ್ಮ ದೇಶದಲ್ಲಿದ್ದಾರೆ. (ಆದರೆ ವಾಸ್ತವವಾಗಿ ಆ ಸಂಖ್ಯೆ ಇನ್ನೂ ಹೆಚ್ಚಿನದಾಗಿದೆ. ಉದಾಹರಣೆಗೆ ಸಕ್ಸೇನಾ ಸಮಿತಿಯ ಪ್ರಕಾರ ನಮ್ಮ ದೇಶದ ಶೇ 50 ಜನ - ಅಂದರೆ 60 ಕೋಟಿ ಜನ- ಬಡತನದಲ್ಲಿ ಜೀವಿಸುತ್ತಿದ್ದಾರೆ).

ಹೋಗಲಿ, ಸರ್ಕಾರ ನೀಡುತ್ತಿರುವ ಅಂಕಿಅಂಶಗಳೇ ಸರಿ ಎಂದು ಒಂದು ಕ್ಷಣ ನಂಬಿದರೂ ಅದು ಯುರೋಪಿನ ದೇಶಗಳಲ್ಲಿರುವ 'ಬಡ' ಜನರಿಗಿಂತ ಹೆಚ್ಚಿನ ಸಂಖ್ಯೆಯಾಗಿದ್ದು ನಮ್ಮವರಿಗೆ ಆಹಾರ, ಆರೋಗ್ಯ ಮತ್ತು ಆರ್ಥಿಕ ನೆರವು ಈಗ ಹೆಚ್ಚಿನ ಅಗತ್ಯವಾಗಿದೆ ಎಂದು ಯಾವ ಪ್ರಜ್ಞಾವಂತನೂ ಒಪ್ಪಿಕೊಳ್ಳುತ್ತಾನೆ ಸಿಂಗ್ ಮತ್ತು ಮುಖರ್ಜಿ ತರಹದ ಮೂರ್ಖರನ್ನು ಹೊರತುಪಡಿಸಿ.

ಸಿಂಗ್, ಮುಖರ್ಜಿ ಮತ್ತು ಮಾಂಟೆಕ್ ಸಿಂಗ್ ಆಹ್ಲುವಾಲಿಯಾ ತರಹದ ಭಾರತರ ಆರ್ಥಿಕ 'ತಜ್ಞರ'ಜ್ಞಾನ ಯಾವ ಮಟ್ಟದ್ದೆಂದು ಹೋದವರ್ಷ ಸಾಬೀತಾಗಿತ್ತು. ಆಗ ಸಿಂಗ್ ಚೇರ್ಮನ್ ಆಗಿರುವ ಮತ್ತು ಆಹ್ಲುವಾಲಿಯಾ ಉಪ ಚೇರ್ಮನ್ ಆಗಿರುವ ಪ್ಲಾನಿಂಗ್ ಆಯೋಗವು ಸುಪ್ರೀಂಕೋರ್ಟಿಗೆ ಒಂದು ಅಫಿಡವಿಟ್ಟನ್ನು ಸಲ್ಲಿಸಿ, ಅದರಲ್ಲಿ ದೇಶದ ನಗರ ಪ್ರದೇಶಗಳಲ್ಲಿ ದಿನಕ್ಕೆ 32 ರೂಪಾಯಿಗಳನ್ನು ದುಡಿಯುತ್ತಿರುವವರು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ದಿನಕ್ಕೆ 22 ರೂಪಾಯಿಗಳನ್ನು ದುಡಿಯುತ್ತಿರುವವರನ್ನು ಬಡತನರೇಖೆಗಿಂತ ಕೆಳಗಿರುವವರು ಎಂದು ಪರಿಗಣಿಸಲಾಗುವುದಿಲ್ಲ ಎಂದಿತ್ತು. ಆದರೆ ಇತ್ತೀಚೆಗೆ ಪಿ. ಸಾಯಿನಾಥ್ ಅವರು ತಮ್ಮ ಅಂಕಣದಲ್ಲಿ ಬರೆದಿರುವಂತೆ ಇದೇ ಆಹ್ಲುವಾಲಿಯಾ ಆರು ತಿಂಗಳಲ್ಲಿ ಹಲವಾರು ಬಾರಿ ವಿದೇಶಕ್ಕೆ ಪ್ರಯಾಣ ಮಾಡಿದಾಗ ದಿನಕ್ಕೆ ಸರಾಸರಿಯಾಗಿ ತಗುಲಿದ್ದ ವೆಚ್ಚ ಎರಡು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚು. ಆಹ್ಲುವಾಲಿಯಾದ ವಿದೇಶ ಪ್ರಯಾಣಕ್ಕೆ ಹಣ ವೆಚ್ಚವಾಗಿದ್ದು ಮತ್ತೆ ನಮ್ಮ ಸರ್ಕಾರದ ತಿಜೋರಿಯಿಂದಲೇ ಹೊರತು ಆತನ ಅಪ್ಪ ಮಾಡಿಟ್ಟಿರುವ ಆಸ್ತಿಯಿಂದಲ್ಲ.



ಅಂದಹಾಗೆ ಇದೇ ಆಹ್ಲುವಾಲಿಯಾ ಇತ್ತೀಚೆಗೆ ತನ್ನ ಕಚೇರಿಯಲ್ಲಿರುವ ಹತ್ತು ಟಾಯ್ಲೆಟ್‌ಗಳ ರಿಪೇರಿಗೆಂದು ವೆಚ್ಚ ಮಾಡಿದ್ದು ಬರೋಬ್ಬರಿ 27 ಲಕ್ಷ ರೂಪಾಯಿಗಳನ್ನು. ಅಂದರೆ ಒಂದು ಟಾಯ್ಲೆಟ್ ರಿಪೇರಿಗೆ ಸುಮಾರು ಮೂರು ಲಕ್ಷ ರೂಪಾಯಿ. ದೇಶದ ಗ್ರಾಮೀಣ ಪ್ರದೇಶದಲ್ಲಿ ದಿನಕ್ಕೆ ಕೇವಲ 22 ರೂಪಾಯಿಗಳಲ್ಲಿ ಜೀವನ ಮಾಡಬೇಕೆಂದು ಹೇಳುವ ಆಹ್ಲುವಾಲಿಯಾ ತನ್ನ ಕಕ್ಕಸುರೂಮಿಗೆ ತೆರಿಗೆದಾರರ ಲಕ್ಷಾಂತರ ರೂಪಾಯಿಗಳನ್ನು ವ್ಯಯಿಸುತ್ತಾನೆ.

ಬಡವರಿಗೆ ಒಂದು ನೀತಿ, ಉಳ್ಳವರಿಗೆ ಮತ್ತೊಂದು ನೀತಿ ಎಂಬುದು ನಮ್ಮ ಸರ್ಕಾರದ ಧೋರಣೆಯಾಗಿದೆ.

ನೊಬೆಲ್ ಪ್ರಶಸ್ತಿ ವಿಜೇತ ಖ್ಯಾತ ಆರ್ಥಿಕ ತಜ್ಞರಾದ ಅಮರ್ತ್ಯ ಸೇನ್ ಅವರು ಹೇಳಿರುವಂತೆ "ಆಹಾರ ಖಾತರಿ ಯೋಜನೆಗೆ 27,000 ಕೋಟಿ ರೂಪಾಯಿ ವೆಚ್ಚವಾಗುತ್ತದೆ ಎಂದು ಸರ್ಕಾರ ಹಿಂದೇಟು ಹಾಕುತ್ತಿದೆ. ಆದರೆ ಇದೇ ಸರ್ಕಾರ ಹೇಳುವಂತೆ ವಜ್ರ, ಚಿನ್ನ ಮತ್ತು ವೈಢೂರ್ಯಗಳ ಆಮದಿನ ಮೇಲಿನ ಸುಂಕಕ್ಕೆ ವಿನಾಯಿತಿ ನೀಡಿರುವುದರಿಂದ ಬೊಕ್ಕಸಕ್ಕೆ ಬರಬೇಕಿದ್ದ 50,000 ಕೋಟಿ ರೂಪಾಯಿಗಳು ಪ್ರತಿವರ್ಷ ತಪ್ಪುತ್ತಿದೆ." ಅಂದಹಾಗೆ ಯಾವ ಬಡವನೂ ವಜ್ರವನ್ನು, ಚಿನ್ನವನ್ನು, ವೈಢೂರ್ಯವನ್ನು ಆಮದು ಮಾಡಿಕೊಳ್ಳುವುದಿಲ್ಲ. ಅಂದರೆ ಆಹಾರ ಖಾತರಿ ಯೋಜನೆಯಡಿ ಬಡವರಿಗೆ ಕೊಡಬಹುದಾದ 27,000 ಕೋಟಿ ರೂಪಾಯಿಗಳ ವಿನಾಯಿತಿಯನ್ನು ನಿರಾಕರಿಸುವ ಸರ್ಕಾರ ಉಳ್ಳವರು ತಮ್ಮ ಶೋಕಿಗಾಗಿ ಆಮದು ಮಾಡಿಕೊಳ್ಳುವ ಚಿನ್ನ, ವಜ್ರ ಮತ್ತು ವೈಢೂರ್ಯದ ಮೇಲೆ ಸುಂಕವನ್ನು ಮಾಫಿ ಮಾಡುತ್ತದೆ!

ಪಿ. ಸಾಯಿನಾಥ್ ಅವರು ತಮ್ಮ ಇನ್ನೊಂದು ಲೇಖನದಲ್ಲಿ ಹೇಳಿರುವಂತೆ 2009ರ ಬಜೆಟ್ ಒಂದರಲ್ಲೇ ಕೇಂದ್ರ ಸರ್ಕಾರವು ಕಾರ್ಪೊರೇಟ್ ಕಂಪನಿಗಳು ಕಟ್ಟಬೇಕಿದ್ದ ಆದಾಯ ತೆರಿಗೆಯಲ್ಲಿ ನಾಲ್ಕು ಲಕ್ಷ ಕೋಟಿಗಳನ್ನು ಮಾಫಿ ಮಾಡಿದೆ. ಅದೇ ಹೊತ್ತಿಗೆ ಉದ್ಯೋಗ ಖಾತರಿ ಯೋಜನೆ ಸೇರಿದಂತೆ ಬಡವರ ಬದುಕಿನ ಬವಣೆಯನ್ನು ಸ್ವಲ್ಪ ಮಟ್ಟಿಗಾದರೂ ಕಡಿಮೆ ಮಾಡುವ ಹಲವಾರು ಯೋಜನೆಗಳಿಗೆ ಕತ್ತರಿ ಹಾಕಿದೆ.

ಅಷ್ಟೇ ಅಲ್ಲ, ಕಳೆದ ಎಂಟು ವರ್ಷಗಳಲ್ಲಿ ಆದಾಯ ತೆರಿಗೆ, ಕಸ್ಟಮ್ಸ್ ತೆರಿಗೆ ಮತ್ತು ಎಕ್ಸೈಸ್ ತೆರಿಗೆ ಆದಿ ಕೇಂದ್ರ ಸರ್ಕಾರ ಕಾರ್ಪೊರೇಟ್ ಕಂಪನಿಗಳಿಗೆ ಕೊಟ್ಟಿರುವ ವಿನಾಯಿತಿಯ ಒಟ್ಟು ಮೊತ್ತ ಬರೋಬ್ಬರಿ 25.7 ಲಕ್ಷ ಕೋಟಿ ರೂಪಾಯಿಗಳು. ಈ ಮೊತ್ತ ಸಾಮಾನ್ಯ ಜನರಿಗೆ ಊಹಿಸಲೂ ಅಸಾಧ್ಯವಾದ್ದರಿಂದ ಸಾಯಿನಾಥ್ ಒಂದು ಅಂದಾಜಿನ ಲೆಕ್ಕವನ್ನು ಕೊಟ್ಟಿದ್ದಾರೆ.

ಆ ಲೆಕ್ಕದ ಪ್ರಕಾರ ಕಾರ್ಪೊರೇಟ್ ಕಂಪನಿಗಳಿಗೆ ಕೊಟ್ಟಿರುವ ವಿನಾಯತಿಯ ಮೊತ್ತ 2 ಜಿ ಹಗರಣದಲ್ಲಿ ಕಳೆದು ಹೋಗಿದೆ ಎಂದು ಅಂದಾಜಿಸಲಾಗಿರುವ ಮೊತ್ತಕ್ಕಿಂತ 15 ಪಟ್ಟು ಹೆಚ್ಚು!

ಹೀಗೆ ಹಿಂದಿನಿಂದಲೂ ಉಳ್ಳವರ ಪರವಾಗಿ, ಬಡವರ ವಿರುದ್ಧವಾಗಿ ನಡೆದುಕೊಂಡು ಬಂದಿರುವ ಕೇಂದ್ರ ಸರ್ಕಾರ ಒಂದೇ ದಿನ ಅತ್ತ ಯೂರೋ ಒಕ್ಕೂಟಕ್ಕೆ 56,000 ಕೋಟಿ ರೂಪಾಯಿಗಳನ್ನು ದಾನವಾಗಿ ನೀಡಿದ್ದು, ಇತ್ತ ನಮ್ಮ ದೇಶದ ಬಡವರ ಹಸಿವನ್ನು ಇಂಗಿಸುವ ಆಹಾರ ಧಾನ್ಯಗಳನ್ನು ಕೊಡಲು ನಿರಾಕರಿಸಿದ್ದು ಪ್ರಜ್ಞಾವಂತರಲ್ಲಿ ಮಾತ್ರ ಆಘಾತವನ್ನು ಹುಟ್ಟಿಸುತ್ತಿರುವುದು ನಮ್ಮ ದೇಶದ ದುರಂತ....

ದಿಕ್ಕೆಟ್ಟಿರುವ ವೀರಶೈವ ಮಹಾಸಭಾ ಚುನಾವಣೆ

ಕರ್ನಾಟಕದಲ್ಲಿ ಒಂದು ಪ್ರಬಲ ಜಾತಿಯಾಗಿರುವ ವೀರಶೈವ ಮಹಾಸಭಾಗೆ ಜೂನ್ 24ರಂದು ಚುನಾವಣೆ ನಡೆಯಲಿದೆ. ರಾಜ್ಯ ಅಧ್ಯಕ್ಷ ಹುದ್ದೆಗಾಗಿ ಭೀಮಣ್ಣ ಖಂಡ್ರೆ, ವಾಗೀಶ್ ಪ್ರಸಾದ್, ಎಸ್.ಎಸ್.ಪಾಟೀಲ್ ಹಾಗೂ ಚಂದ್ರಕಾಂತ ಬೆಲ್ಲದ್ ಬಣಗಳು ಅಖಾಡದಲ್ಲಿದ್ದು ತಂತ್ರ-ಪ್ರತಿತಂತ್ರದಲ್ಲಿ ತೊಡಗಿವೆ.

ಅಖಿಲ ಭಾರತ ವೀರಶೈವ ಮಹಾಸಭಾ ಎಂಬ 108 ವರ್ಷಗಳಷ್ಟು ಹಳೆಯದಾದ ಈ ಸಂಸ್ಥೆಗೆ ಈಗಾಗಲೇ ತಾಲೂಕು ಹಾಗೂ ಜಿಲ್ಲಾ ಮಟ್ಟದ ಚುನಾವಣೆಗಳು ನಡೆದಿದ್ದು ಈಗ ರಾಜ್ಯ ಮಟ್ಟದ ಪದಾಧಿಕಾರಿಗಳನ್ನು ಆಯ್ಕೆ ಮಾಡುವ ಚುನಾವಣೆ ನಡೆಯಲಿದೆ. ಈ ಬಾರಿಯ ಚುನಾವಣೆಯ ಕಣದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ವೀರಶೈವರು ತೊಡೆ ತಟ್ಟಿ ಕಣಕ್ಕಿಳಿದಿದ್ದಾರೆ.

ಉತ್ತರ ಕರ್ನಾಟಕದ ಪ್ರಭಾವಿ ಲಿಂಗವಂತ ಕಾಂಗ್ರೆಸ್ಸಿಗ ಭೀಮಣ್ಣ ಖಂಡ್ರೆ ಕಳೆದ 12 ವರ್ಷಗಳಿಂದ ರಾಜ್ಯಾಧ್ಯಕ್ಷನ ಹುದ್ದೆಯಲ್ಲಿ ಗೂಟ ಹೊಡಕೊಂಡು ಕೂತುಬಿಟ್ಟಿದ್ದ. ಇನ್ನೂ ವಿಚಿತ್ರವೆಂದರೆ ನಾನಾ ಅಕ್ರಮಗಳಲ್ಲಿ ಮುಳುಗಿದ್ದ ಖಂಡ್ರೆ ಗುಂಪು ನಿಗದಿತ ಅವಧಿಗೆ ಚುನಾವಣೆ ನಡೆಸಿದರೆ ಮತ್ತೆ ಗೆಲ್ಲುವ ಖಾತ್ರಿಯಿಲ್ಲದೆ ಚುನಾವಣೆಗಳನ್ನೇ ಮುಂದೂಡುತ್ತಾ ಬಂತು. ಖಂಡ್ರೆಯ ಇಂಥಾ ಹೀನಚಾಳಿಯಿಂದ ಬೇಸತ್ತ ಇತರ ಆಕಾಂಕ್ಷಿಗಳು ಹೈಕೋರ್ಟ್ ಮೆಟ್ಟಿಲೇರಿದರು.

ದುರಂತ ಹೇಗಿದೆ ನೋಡಿ; ಮಾನಮರ್ಯಾದೆ ಬಿಟ್ಟು ಒಂದು ಗುಂಪು ಅಧಿಕಾರದಲ್ಲಿ ಮುಂದುವರೆಯಲು ಹವಣಿಸಿದರೆ, ಮತ್ತೊಂದು ಗುಂಪು ಅದೇ ನೆಪ ಮಾಡಿಕೊಂಡು ಅಧಿಕಾರ ಲಪಟಾಯಿಸಿತು. ಇಂಥಾ ನೆಪಕ್ಕಾಗಿ ಕಾಯುತ್ತಿದ್ದ ಯಡ್ಡಿ-ಚಡ್ಡಿ ಪಡೆ ಮತ್ತೊಂದು ರೀತಿಯ ಆಟ ಆಡಿಬಿಟ್ಟರು. ಮಹಾಸಭಾದ ಆಡಳಿತವನ್ನು ನೇರವಾಗಿ ಸರ್ಕಾರದ ಕೈವಶ ಮಾಡಿಕೊಂಡುಬಿಟ್ಟರು. ಕಳೆದ ಜನವರಿ ಯಿಂದ ಇಲ್ಲಿಯವರೆಗೆ ಲಿಂಗವಂತರ ಪ್ರತಿಷ್ಠಿತ ಸಂಘದ ಆಡಳಿತ ಸರ್ಕಾರದ ವಶದಲ್ಲಿದೆ. ಪಾಪ! ಲಿಂಗಾಯತರ ಸಂಘಕ್ಕೆ ಇಂಥಾ ದುರ್ಗತಿ ಬರಬಾರದಿತ್ತು!

ಬಿಜೆಪಿ ಸರ್ಕಾರದ ಈ ಕ್ರಮವನ್ನು ಪ್ರಶ್ನಿಸಿ ಮತ್ತೊಂದು ಗುಂಪು ಕೋರ್ಟ್‌ನಲ್ಲಿ ದಾವೆ ಹೂಡಿದ ಪರಿಣಾಮ ಈಗ ಚುನಾವಣೆ ನಡೆಸಬೇಕಾದ ಅನಿವಾರ್ಯತೆ ಉಂಟಾಗಿದೆ. ಒಟ್ಟಾರೆ ಈ ಎಲ್ಲಾ ಬೆಳವಣಿಗೆಗಳು ನೀತಿವಂತ ಲಿಂಗಾಯತರಿಗೆ ಹೇಸಿಗೆ ಹುಟ್ಟಿಸಿಬಿಟ್ಟಿದೆ.

ಬೀದಿಗೆ ಬಿದ್ದ ಕಚ್ಚಾಟ

ವಾಸ್ತವದಲ್ಲಿ ಈ ಸಂಘದ ಅಧಿಕಾರಕ್ಕಾಗಿ ಜಂಗೀಕುಸ್ತಿ ಶುರುವಾಗಿದ್ದು ಇಲ್ಲಿಗೆ 14 ತಿಂಗಳ ಹಿಂದೆ, ಅಂದರೆ ಕಳೆದ ವರ್ಷದ ಏಪ್ರಿಲ್‌ನಲ್ಲಿ. ಆಗ ವೀರಶೈವ ಮಹಾಸಭಾದ ಅದ್ದೂರಿ ಸಮಾವೇಶವೊಂದು ಸುತ್ತೂರಿನಲ್ಲಿ ನಡೆದಿತ್ತು ನೋಡಿ; ಆ ಸಮಾವೇಶದ ವೇದಿಕೆಯ ಮೇಲೆ ಹಲವು ವೀರಶೈವ ಮಠಾಧೀಶರ ಸಮ್ಮುಖದಲ್ಲೇ ಈ ರಾಜಕೀಯದ ಜಂಗೀಕುಸ್ತಿ ಶುರುವಾಗಿತ್ತು. ಲೋಕಾಯುಕ್ತ ಕೇಸಿನ ಹಿನ್ನೆಲೆಯಲ್ಲಿ ತನ್ನನ್ನು ಪದಚ್ಯುತಗೊಳಿಸುವ ಉತ್ಸಾಹದಲ್ಲಿದ್ದ ತಮ್ಮ ವಿರೋಧಿಗಳ ಬಾಯಿಮುಚ್ಚಿಸಲು ಯಡ್ಡಿ ಈ ಲಿಂಗವಂತರ ಸಮಾವೇಶವನ್ನು ಒಂದು ಗುರಾಣಿಯಾಗಿ ಬಳಸಿಕೊಂಡಿದ್ದ. ಆದ್ದರಿಂದಲೇ ಯಡ್ಡಿ ಪಟಾಲಂನವರು ಸುತ್ತೂರು ಸಮಾವೇಶವನ್ನು ಬಹಳ ಅದ್ದೂರಿಯಾಗಿ ಸಂಘಟಿಸಿದ್ದರು.

ಯಡ್ಡಿಯನ್ನು ಬೆಂಬಲಿಸಿ, ಆವರ ವಿರೋಧಿಗಳಿಗೆ ಸವಾಲೆಸೆಯುವುದೇ ಸಮಾವೇಶದ ಅಘೋಷಿತ ಅಜೆಂಡಾವಾಗಿದ್ದರಿಂದ ಸಹಜವಾಗಿಯೇ ತೀವ್ರ ವಿರೋಧ ಎದುರಾಗಿತ್ತು. ಮಠಗಳಿಗೆ ಯಡಿಯೂರಪ್ಪ ಹರಿಸಿದ ಹಣದ ಹೊಳೆಯಿಂದ ಪುಳಕಿತರಾಗಿದ್ದ ವಿವಿಧ ಮಠಾಧೀಶರು ಯಡ್ಡಿಗೆ ಬೇಷರತ್ ಬೆಂಬಲ ಘೋಷಿಸಿದ್ದನ್ನು ವೀರಶೈವ ಮುಖಂಡರೇ ಕಟುವಾಗಿ ಖಂಡಿಸಿದ್ದರು. "ಕೆಲವು ಮಠಾಧೀಶರು ತೆರೆಮರೆಯಲ್ಲಿ ರಾಜಕೀಯ ಮಾಡುವುದನ್ನು ಬಿಟ್ಟು ಕಾವಿ ಕಳಚಿಟ್ಟು ನೇರವಾಗಿ ಸಕ್ರಿಯ ರಾಜಕಾರಣಕ್ಕೆ ಇಳಿಯಲಿ" ಎಂದು ಮಾಜಿ ಸಚಿವ ಬಸವರಾಜ ಹೊರಟ್ಟಿ ಹಾಕಿದ ಸವಾಲಿಗೆ ಸರಿಯಾದ ಜವಾಬು ನೀಡುವಷ್ಟು ನೈತಿಕಶಕ್ತಿ ಆ ಕಾವಿಧಾರಿಗಳಿಲ್ಲದೆ ಹೋಗಿದ್ದು ಈ ನಾಡಿನ ಒಂದು ದುರಂತವೇ ಸರಿ. "ಮಹಾಸಭಾ ಭ್ರಷ್ಟ ಯಡ್ಡಿಗೆ ಬೆಂಬಲ ಘೋಷಿಸುವುದಾದರೆ ನಾವು ಅನಿವಾರ್ಯವಾಗಿ ಪರ್ಯಾಯ ವೇದಿಕೆ ಕಟ್ಟುತ್ತೇವೆ" ಎಂದು ಬಸನಗೌಡ ಪಾಟೀಲ್ ಯತ್ನಾಳ್ ನೇರವಾಗಿ ಧಮಕಿ ಹಾಕಿದ್ದರು. ಹೀಗೆ ಸಮಾವೇಶ ಕುಸ್ತಿಯ ಅಖಾಡವಾಗಿ ಮಾರ್ಪಟ್ಟಿತ್ತು.

ಚುನಾವಣಾ ಕಣದಲ್ಲಿ

ಅಂತೂಇಂತೂ ಈಗ ಅನಿವಾರ್ಯವಾಗಿ ಎಲೆಕ್ಷನ್ ಬಂದುನಿಂತಿದೆ. ಈ ಚುನಾವಣೆ ನಡೆಯುತ್ತಿರುವ ರೀತಿ ಮತ್ತು ಅಖಾಡದಲ್ಲಿರುವ ಕ್ಯಾಂಡಿಡೇಟುಗಳನ್ನು ಗಮನಿಸಿದರೆ, ಒಂದುಕಾಲದಲ್ಲಿ ಬಹಳ ಗೌರವಘನತೆಗಳನ್ನು ಹೊಂದಿದ್ದ ಅಖಿಲ ಭಾರತ ವೀರಶೈವ ಮಹಾಸಭಾ ಎಂಬ ಸಂಸ್ಥೆಗೆ ಎಂಥಾ ಪೀಡೆಗಳು ವಕ್ಕರಿಸಿದ್ದಾರೆ ಎಂಬ ಆತಂಕಕಾರಿ ಸಂಗತಿ ತಿಳಿಯುತ್ತದೆ.

ಬಿಜೆಪಿ ಗುಂಪನ್ನೇ ತೆಗೆದುಕೊಳ್ಳಿ. ಧಾರವಾಡದ ಶಾಸಕ ಚಂದ್ರಕಾಂತ ಬೆಲ್ಲದ ಎಂಬ ಯಡ್ಡಿ ಗುಂಪಿನ ಅಪ್ಪಟ ಪುಢಾರಿ ವೀರಶೈವ ಮಹಾಸಭಾದ ರಾಜ್ಯಾಧ್ಯಕ್ಷನ ಸೀಟಿನ ಮೇಲೆ ಕಣ್ಣಿಟ್ಟು ಕಣಕ್ಕಿಳಿದಿದ್ದಾನೆ. ಈ ಹಿಂದೆ ಒಮ್ಮೆ 6 ವರ್ಷಗಳ ಅವಧಿಗೆ ರಾಜ್ಯಾಧ್ಯಕ್ಷನ ಪಟ್ಟದಲ್ಲಿ ವಕ್ಕರಿಸಿದ್ದ ಈತ ಕಡಿದು ಗುಡ್ಡೆ ಹಾಕಿದ್ದು ಏನೂ ಇಲ್ಲ. ಹೀಗಿದ್ದರೂ ಯಡ್ಡಿ ಗುಂಪಿನ ಎಂಎಲ್‌ಎಗಳು ಈತನ ಬೆಂಬಲಕ್ಕೆ ನಿಂತಿದ್ದಾರೆ. ಹಾಗೊಂದು ವೇಳೆ ಈತ ಮತ್ತೆ ಗದ್ದುಗೆ ಹಿಡಿದುಬಿಟ್ಟರೆ ಮಹಾಸಭಾದ ಗತಿ ಏನಾಗಬಹುದು ಎಂಬುದನ್ನು ಅರ್ಥಮಾಡಿಕೊಳ್ಳಲು ಈ ಕೆಳಗಿನ ಒಂದೇ ಒಂದು ಉದಾಹರಣೆ ಸಾಕು.

ಯಡ್ಡಿ ಅಧಿಕಾರದಲ್ಲಿದ್ದಾಗ ತೆರಿಗೆದಾರರ ಕೋಟ್ಯಾಂತರ ರೂಪಾಯಿಗಳನ್ನು ಮಠ-ಮಾನ್ಯಗಳಿಗೆ ಸುರಿದಿದ್ದು ಎಲ್ಲರಿಗೂ ಗೊತ್ತು. ಆದೇರೀತಿ ಧಾರವಾಡದಲ್ಲಿ ಲಿಂಗಾಯತಭವನ ನಿರ್ಮಾಣಕ್ಕೆಂದು 2 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದ. ಹಣದ ವಾಸನೆ ಸಿಕ್ಕಿದ್ದೇ ತಡ, ಶಾಸಕ ಬೆಲ್ಲದ್‌ನ ಖಾಸಾ ತಮ್ಮ ಶಿವಣ್ಣ ಬೆಲ್ಲದ್ ಅಕ್ರಮ ಸಂಚು ರೂಪಿಸಿ ಮಹಾಸಭಾ ಅಕೌಂಟ್‌ನಿಂದ ಬರೋಬ್ಬರಿ 75 ಲಕ್ಷಗಳನ್ನು ಲಪಟಾಯಿಸಿಬಿಟ್ಟ! ಇಂಥಾ ಧರ್ಮೋದ್ಧಾರ ಕಾರ್ಯದಲ್ಲಿ ಶಾಸಕ ಬೆಲ್ಲದ್ ಖುದ್ದು ಪಾಲುದಾರ!

ಬೆಲ್ಲದ್ ಸಹೋದರರ ಈ ನೀಚತನವನ್ನು ಕಂಡು ಕೆರಳಿದ ಸ್ಥಳೀಯ ಲಿಂಗವಂತರು ಬೀದಿಗಿಳಿದರು; ಜಿಲ್ಲಾಧಿಕಾರಿಗೆ ದೂರು ಕೊಟ್ಟರು; ಅಂತಿಮವಾಗಿ ಜಿಲ್ಲಾಧಿಕಾರಿ ಶಿವಣ್ಣ ಬೆಲ್ಲದ್‌ಗೆ ನೋಟಿಸ್ ನೀಡಿ ಒಂದು ವಾರದ... ಹಣವನ್ನು ವಾಪಸ್ ಮಹಾಸಭಾದ ಅಕೌಂಟ್‌ಗೆ ಪಾ... ಬೇಕೆಂದು ಸೂಚಿಸಿದರು. ಬೆಲ್ಲದ್ ಈ ನೋಟಿಸ್‌ಗೆ ... ಕಿಮ್ಮತ್ತೂ ಕೊಡದಿದ್ದಾಗ ಈ ವಿಷಯವನ್ನು ಲೋಕಾ... ತನಿಖೆಗೆ ವಹಿಸುವ ಪ್ರಯತ್ನಗಳು ನಡೆದಾಗಲೇ ... ಲಿಂಗದ್ರೋಹಿಗಳು ತಹಬಂದಿಗೆ ಬಂದದ್ದು!

ಈಗ ಹೇಳಿ. ಇಂಥಾ ಹೆಗ್ಗಣಗಳಿಗೆ ರಾಜ್ಯಾಧ್ಯಕ್ಷ... ಸಿಕ್ಕಿಬಿಟ್ಟರೆ ಏನಾಗಬಹುದು?

ಈಗ ಮತ್ತೊಂದು ಗುಂಪಿನ ಜಾತಕ... ಪರಿಶೀಲಿಸೋಣ. ಮಾಜಿ ಸಹಕಾರಿ ಸಚಿವನಾಗಿದ್ದ ಎಸ್... ಪಾಟೀಲ್ ನಾಯಕತ್ವದಲ್ಲಿ ಮತ್ತೊಂದು ಕ... ಹುಟ್ಟಿಕೊಂಡಿದೆ. ಈತ ಎಂಥಾ ಐನಾತಿ ಆಸಾಮಿಯೆ... ಹೆತ್ತವರ ಮನೇಲೂ ಸತ್ತವರ ಮನೇಲೂ ಎರಡೂ ಕ... ಮೇಂಟೈನ್ ಮಾಡುತ್ತಾನೆ. ಈಗ ಅಸ್ತಿತ್ವದಲ್ಲಿರುವ ... ರಾಜಕೀಯ ಪಕ್ಷಗಳಿಗೂ ಒಂದು ರೌಂಡ್ ಹೊ... ಮುಗಿಸಿ ಎರಡನೇ ರೌಂಡ್‌ಗೆ ರೆಡಿಯಾಗಿದ್ದಾನೆ. ಅ... ಹಿಂದೆ ಜೆಎಚ್ ಪಟೇಲ್, ಬೊಮ್ಮಾಯಿ ಮುಂತಾ... ಜೊತೆ ಜನತಾ ಪರಿವಾರದಲ್ಲಿದ್ದ ಈತ ನಂತರ ಕಾಂಗ್... ನೆಗೆದು ಸಹಕಾರಿ ಸಚಿವನೂ ಆಗಿದ್ದ. ಆಗ ತನ್ನ ಮಗ... ಮುಂದಿಟ್ಟು ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಮು... ಸಾವಿರಾರು ಲಿಂಗಾಯತ ರೈತರಿಗೆ ಉಂಡೆನಾಮ ... ನಂತರ ಜೆಡಿಎಸ್ ಜೊತೆ ಚಕ್ಕಂದ ಶುರುಮಾಡಿ ... ಮಗ ಶಿವಕುಮಾರ ಪಾಟೀಲನನ್ನು ಜೆಡಿಎಸ್‌ನ ಕ್ಯಾಂಡಿ... ಮಾಡಿಸಿಬಿಟ್ಟ. ಯಡಿಯೂರಪ್ಪ ಗದ್ದುಗೆ ಹಿಡಿದ ... ಯಡ್ಡಿ "ನಾಯಕತ್ವಕ್ಕೆ ಮನಸೋತು" ಬಿಜೆಪಿ ಸೇರಿ... ಅಲ್ಲಿ ಹೆಚ್ಚೇನೂ ಗಿಟ್ಟಲಿಲ್ಲವಾದ್ದರಿಂದ ಬಿಜೆಪಿಯಿಂದ... ಕಾಲು ಹೊರಗಿಟ್ಟದ್ದಾನೆ. ಈಗ ಹಾಲಿ ರಾಜಕೀ... ನಿರುದ್ಯೋಗಿ. ಇಂಥಾ ಪರಿಸ್ಥಿತಿಯಲ್ಲಿ ಮಹಾಸಭಾದ ... ಈತನ ಕಣ್ಣು ಬಿದ್ದಿದೆ.


ಎಂ.ಎಸ್. ನಾಗೇಂದ್ರ ಎಂಬ ನಿವೃತ್ತ ಅಧಿಕಾರಿ... ಬಣದ ಅಧ್ಯಕ್ಷ ಅಭ್ಯರ್ಥಿ. ಅಂತೆಗೆ ತಕ್ಕ ಬೊಂತೆಯಂ... ಈತ ಪಾಟೀಲ್‌ನಿಗೆ ಸರಿಯಾಗಿ ಹೇಳಿಮಾಡಿಸಿದ ಜೋ... ಈತ ಬಿಡಿಎ ಅಧಿಕಾರಿಯಾಗಿದ್ದಾಗ ಮಾಡಿದ ಅಕ್ರಮ... ಲೆಕ್ಕವಿಲ್ಲ. ಆ ಕಾರಣಕ್ಕಾಗಿಯೇ ಎರಡು ಸಲ ಸ... ಕೂಡ ಆಗಿದ್ದ. ನಂತರ ಬೆಂಗಳೂರು ಮೆಟ್ರೋ ರೈ... ಕಾರ್ಯನಿರ್ವಾಹಕ ನಿರ್ದೇಶಕನಾಗಿ ಅಲ್ಲೂ ತನ್ನ ಕೈ... ತೋರಿಸಿ, ಸ್ವಯಂನಿವೃತ್ತಿ ತೆಗೆದುಕೊಂಡಿದ್ದಾನೆ. ... ಮಠಾಧೀಶರು, ರಾಜಕೀಯ ಮುಖಂಡರ ಜೊತೆ ಫೋ... ತೆಗೆಸಿಕೊಂಡಿರುವುದಷ್ಟೇ ಈತನ ದೊಡ್ಡ ಸಾಧನೆ... ಎಲ್ಲಾ ಫೋಟೋಗಳನ್ನೇ ತನ್ನ ಸಾಧನೆಯೆಂಬಂತೆ ಕರಪ... ಮುದ್ರಿಸಿ ಹಂಚುತ್ತಿರುವ ಬಾವಿಕಪ್ಪೆಯನ್ನು ಹೋ... ಈ ಮನುಷ್ಯನಿಗೆ ಮರ್ಯಾದಸ್ಥ ಲಿಂಗಾಯತರೇ ... ಬುದ್ಧಿ ಹೇಳಿದರೆ ಒಳ್ಳೆಯದು.

ಇನ್ನು ಈ ಗುಂಪಿನಲ್ಲಿರುವ ಇತರರನ್ನು ನೋಡಿ... ಆಲಿಬಾಬನ ತಂಡದ ನೆನಪಾಗುತ್ತದೆ. ವೀರಶೈವ ವಿದ್ಯಾ... ಸಂಸ್ಥೆಯೊಂದನ್ನು ಹುಟ್ಟುಹಾಕಿ; ನಂಬಿದ ಲಿಂಗಾಯ... ಪಂಗನಾಮ ಎಳೆದು ಅದನ್ನು ತನ್ನ ಖಾಸಗಿ ಸ್ವತ್ತನ್ನಾಗಿಸಿಕೆ...

ಸಂಸ್ಥೆಯ ಪರಂಪರೆ ಎಂಥಾದ್ದು?



ಇಲ್ಲಿಗೆ 108 ವರ್ಷ ತುಂಬಿರುವ ಈ ವೀರಶೈವ ಮಹಾಸಭಾದ ಸಂಸ್ಥಾಪಕರು ಹಾನಗಲ್ಲು ಮಠದ ಶ್ರೀ ಕುಮಾರಸ್ವಾಮಿಗಳು. ತೀರಾ ಬಡತನದ ಹಿನ್ನೆಲೆಯಲ್ಲಿ ಹುಟ್ಟಿದ ಶ್ರೀಗಳು ನಾಡಿನಾದ್ಯಂತ ಸುತ್ತಾಡಿ ಹತ್ತಾರು ಮಠಗಳಲ್ಲಿ ಸೇವಾಕಾರ್ಯ ಕೈಗೊಂಡು ಹಲವಾರು ಜಗದ್ಗುರುಗಳ ಬಳಿ ಶಿಷ್ಯವೃತ್ತಿ ಮಾಡಿ ಜ್ಞಾನಾರ್ಜನೆ ಮಾಡಿದವರು. ವೀರಶೈವ ತತ್ವಗಳನ್ನು ಪ್ರಚಾರ ಮಾಡುವ ಹಾಗೂ ವೀರಶೈವ ಸಮಾಜವನ್ನು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮೇಲೆ ತರುವ ಮಹದುದ್ದೇಶದಿಂದ 1904ರಲ್ಲಿ ವೀರಶೈವ ಮಹಾಸಭಾ ಸ್ಥಾಪಿಸಿದರು. ಬಡರೋಗಿಗಳ ಗೋಳನ್ನು ಕಂಡು ಸ್ವತಃ ಆಯುರ್ವೇದವನ್ನು ಅಭ್ಯಾಸ ಮಾಡಿ ಬಡರೋಗಿಗಳ ಸೇವೆಗೆ ನಿಂತ ಮಹನೀಯರು. ಹುಟ್ಟುಕುರುಡರಾಗಿದ್ದರೂ ಸಂಗೀತ ಕ್ಷೇತ್ರದಲ್ಲಿ ದೇಶಾದ್ಯಂತ ಖ್ಯಾತರಾಗಿರುವ ಮಹಾನ್ ಕಲಾವಿದ ಪಂಚಾಕ್ಷರಿ ಗವಾಯಿಯವರ ಬಗ್ಗೆ ನಾವೆಲ್ಲಾ ಕೇಳಿದ... ಆ ಪಂಚಾಕ್ಷರಿಯವರಿಗೆ ಸಂಗೀತ ಶಿಕ್ಷಣ ಕೊಡಿಸಿ, ಮಹಾ ಸಂಗೀತಗಾರರನ್ನಾಗಿ ಮಾಡಿದ ಖ್ಯಾತಿ ಕುಮಾರಸ್ವಾಮಿಯವರದು. ಇಂಥಾ ಮಹಾಸಭಾದ ಏಳ್ಗೆಗಾಗಿ ಹಲವು ಸೇವಾಕರ್ತರು ದುಡಿದಿದ್ದಾರೆ. ಸರ್ ಕೆ.ಪಿ.ಪು... ಚೆಟ್ಟಿ, ಸರ್ ಸಿದ್ದಪ್ಪ ಕಂಬಳಿ, ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ, ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮಿ... ಮುಂತಾದವರು ಇದರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಇಂಥಾ ಪರಂಪರೆಯಿರುವ ಸಂಸ್ಥೆ ಇಂದು ಗುಂಪುಗಾರಿಕೆ... ತೊಡಗಿರುವ ಕಳ್ಳಕಾಕರ ಪಾಲಾಗಿರುವುದನ್ನು ಕಂಡು ಕುಮಾರಸ್ವಾಮಿಯವರ ಆತ್ಮ ಸಮಾಧಿಯಲ್ಲೇ ಕೊರಗು...



ಭೀಮಣ್ಣ ಖಂಡ್ರೆ




ಶಾಮನೂರು ಶಿವಶಂಕರಪ್ಪ




ಎನ್. ತಿಪ್ಪಣ್ಣ




ಅರವಿಂದ ಜತ್ತಿ




ಎಸ್.ಎಸ್. ಪಾಟೀಲ




ಲೀಲಾದೇವಿ ಆರ್. ಪ್ರಸಾದ



ಬಿ.ಎಸ್. ಪರಮಶಿವಯ್ಯ




ಹೆಚ್.ವಿ. ನಾಗೇಂದ್ರಪ್ಪ



ಎಂ.ಎಸ್. ನಾಗೇಂದ್ರ

ಹೆಂಗಿದ್ದ ಸಂಸ್ಥೆ ಹೆಂಗಾಯ್ತು ನೋಡಿ




ವಿಶಾಲ ಧ್ಯೇಯ ಹಾಗೂ ಭವ್ಯ ಪರಂಪರೆ ಹೊಂದಿದ್ದ ಸಂಸ್ಥೆ ಇಂದು ಕಳ್ಳ ಖದೀಮರ ಆಶ್ರಯತಾಣವಾಗಿದೆ. ಎಲ್ಲಾ ಪಕ್ಷಗಳ ಚೋರರು ಮಹಾಸಭಾವನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಇನ್ನಿಲ್ಲದ ಒಳಸಂಚಿನಲ್ಲಿ ತೊಡಗಿದ್ದಾರೆ. ಕೆಲ ಉದಾಹರಣೆ ನೋಡಿ.

ಯಡ್ಡಿ ಸಿಎಂ ಆಗುತ್ತಿದ್ದಂತೆ ತನ್ನ ಕುಟುಂಬ ರಾಜಕೀಯವನ್ನು ಮಹಾಸಭಾಕ್ಕೂ ವಿಸ್ತರಿಸಿಬಿಟ್ಟರು ಯಡ್ಡಿ ಮಗ ರಾಘವೇಂದ್ರ ಯುವ ಘಟಕದ ಅಧ್ಯಕ್ಷ. ಮಗಳು ಅರುಣಾದೇವಿ ಮಹಿಳಾ ಘಟಕದ ಕಾರ್ಯದರ್ಶಿ. ಮಕ್ಕಳಿಗೆ ಮಾತ್ರ ಪೋಸ್ಟ್ ಕೊಡಿಸಿದರೆ ಸಾಕೆ? ಬೀಗರಿಗೂ ಗೌರವ ಕೊಡಬೇಕಲ್ಲವೆ? ಹಾಗಾಗಿ ಯಡ್ಡಿಯ ಬೀಗತಿ ಅಂದರೆ ಅಳಿಯ ಸೋಹನ್‌ಕುಮಾರ್‌ನ ತಾಯಿ ವಿನೋದಾ ನಟರಾಜ್‌ಗೆ ಮಹಿಳಾ ಘಟಕದ ಗೌರವಾಧ್ಯಕ್ಷೆ ಪಟ್ಟ ಕಟ್ಟಲಾಗಿದೆ. ಆದರೆ ಇವರು ಸೇವೆ ಮಾಡುವುದಿರಲಿ, ಮಹಾಸಭಾದ ಕಡೆ ತಲೆಹಾಕಿಯೂ ನೋಡಿಲ್ಲ.

ಇನ್ನು ಚುನಾವಣೆಯಲ್ಲಿ ಸುಲಭವಾಗಿ ಗೆಲ್ಲುವ ಮಾರ್ಗವನ್ನು ಹುಡುಕುತ್ತಿದ್ದ ಭೀಮಣ್ಣ ಖಂಡ್ರೆ ಕೆಲ ತಿಂಗಳ ಹಿಂದೆ ತನ್ನ ಕಡೆಯ ಸುಮಾರು 2900 ಜನರಿಗೆ ಸದಸ್ಯತ್ವ ಮಾಡಿಸಿದ್ದಾನೆ. ಇದೇ ಐಡಿಯಾ ಬೆನ್ನು ಹತ್ತಿದ ಶಾಮನೂರು ತನ್ನ ಕಡೆಯ ಸುಮಾರು 2700 ಮಂದಿಗೆ ಸದಸ್ಯತ್ವ ಗಿಟ್ಟಿಸಿದ್ದಾರೆ. ಹೀಗೆ ತಮ್ಮ ತಮ್ಮ ಗುಂಪುಗಳನ್ನು ಬಲಪಡಿಸಿಕೊಳ್ಳಲು ಈ ಪ್ರಭೃತಿಗಳು ಹೆಣಗುತ್ತಿರುವಾಗಲೇ ಈ ಹೊಸ ಸದಸ್ಯರನ್ನು ಈಗ ನಡೆಯುತ್ತಿರುವ ಚುನಾವಣಾ ಪ್ರಕ್ರಿಯೆಯಿಂದ ಹೊರಗಿಡಬೇಕೆಂದು ಕೋರಿ ಕೆಲವರು ಕೋರ್ಟಿನ ಮೆಟ್ಟಿಲು ಹತ್ತಿದ್ದಾರೆ.

ಬಸವಣ್ಣನಿಗೆ ಅವಮಾನವಾಯಿತು ಎಂದು ಕೆಲವು ಕೃತಿಗಳನ್ನು ನಿಷೇಧಿಸುವಂತೆ ಆಗ್ರಹಿಸಿ ಇದೇ ಮಹಾಸಭಾದ ಮುಖಂಡರು ಓರಾಟ ಮಾಡಿದ್ದರು. ಆದರೆ ಬಸವಣ್ಣ ಮತ್ತು ಇತರ ವಚನಕಾರರ ವಿಚಾರಗಳಿಗೆ ಮಸಿಬಳಿಯುವ ಕೆಲಸವನ್ನೇ ತಮ್ಮ ಕಾಯಕ ಮಾಡಿಕೊಂಡಿರುವ ಈ ಧೂರ್ತರಿಗೆ ಬುದ್ಧಿ ಹೇಳುವವರಾರು ಎಂಬುದೇ ಪ್ರಶ್ನೆ.



ಬಸವ ತತ್ವಕ್ಕೆ ಸವಾಲಾಗಿರುವ ಮತ್ತೊಂದು ಪ್ರಮುಖ ಸಂಗತಿ ಈ ಚುನಾವಣಾ ಪ್ರಕ್ರಿಯೆಯಲ್ಲಿದೆ. ಸಂಘದಲ್ಲಿ 80 ಸಾವಿರಕ್ಕೂ ಹೆಚ್ಚು ಸದಸ್ಯರಿದ್ದರೂ ಎಲ್ಲರಿಗೂ ಮತ ಹಾಕುವ ಹಕ್ಕು ನೀಡಲಾಗಿಲ್ಲ. ಅದನ್ನು ಆಯಾ ವ್ಯಕ್ತಿಗಳ ಹಣ ಚೆಲ್ಲುವ ಸಾಮರ್ಥ್ಯದ ಜೊತೆ ಸಮೀಕರಿಸಲಾಗಿದೆ. ಅಂದರೆ 500 ರೂ. ಸದಸ್ಯತ್ವ ಪಡೆದವರು ತಾಲೂಕು ಮಟ್ಟದಲ್ಲಿ, 1000 ರೂ. ಸದಸ್ಯತ್ವ ಪಡೆದವರು ಜಿಲ್ಲಾ ಮಟ್ಟದಲ್ಲಿ, 2500 ರೂ. ಸದಸ್ಯತ್ವ ಪಡೆದವರು ರಾಜ್ಯ ಮಟ್ಟದಲ್ಲಿ ನಡೆಯುವ ಚುನಾವಣೆಗಳಲ್ಲಿ ಮತ ಚಲಾಯಿಸಬಹುದು. ಇನ್ನು ರಾಜ್ಯ ವರ್ಕಿಂಗ್ ಕಮಿಟಿಗೆ ಮತ ಹಾಕುವವರು ಕನಿಷ್ಠ ಒಂದು ಲಕ್ಷ ರೂಪಾಯಿ ಮೌಲ್ಯದ ಸದಸ್ಯರಾಗಿರಬೇಕು! ಹಾಗೇ ಅಖಿಲ ಭಾರತ ಕಮಿಟಿಗೆ ಮತ ಹಾಕಲು ಅರ್ಹತೆ ಪಡೆಯಬೇಕೆಂದರೆ ಕನಿಷ್ಠ 10 ಲಕ್ಷ ಮೌಲ್ಯದ ಸದಸ್ಯರಾಗಿರಬೇಕು!

ಇಂಥಾ ಮೌಲ್ಯಗಳನ್ನು ಅಳವಡಿಸಿಕೊಂಡಿರುವ ಮಹಾಸಭಾ ಬಸವಣ್ಣನ ತತ್ವಗಳಿಗೆ ತಿಲಾಂಜಲಿ ಇಟ್ಟುಬಿಟ್ಟಿದೆ. ಅಷ್ಟು ಮಾತ್ರವಲ್ಲ; ವೀರಶೈವ ಸಮುದಾಯದಲ್ಲಿ ಬಹುಸಂಖ್ಯಾತರಾಗಿರುವ ಬಡರೈತಾಪಿಯನ್ನು ಹೀಗೆ ದೂರ ಮಾಡಿ, ಅವಮಾನ ಮಾಡುತ್ತಿದ್ದಾರೆ. ಹಾಗಾದರೆ ಈ ಅಖಿಲ ಭಾರತ ವೀರಶೈವ ಮಹಾಸಭಾ ಇರುವುದು ಯಾರ ಹಿತಕ್ಕಾಗಿ?!


ಲಿಕ್ಕರ್ ಸಾಮ್ರಾಜ್ಯದಲ್ಲಿ ಸಂಸಾರ ಕ್ಷೋಭೆ

ರಾಮುಲು ಮಗಳ ಕಿಡ್ನ್ಯಾಪ್ ಡ್ರಾಮಾ!

ಮೊದಲು ಅಶೋಕ್ ಗುತ್ತೇದಾರ್ ಹತ್ಯೆ ನಡೆದು ಪದ್ಮಾವತಿ ಜೈಲು ಪಾಲಾಗುವ ಮೂಲಕ ಲಿಕ್ಕರ್ ...ಕೆ ಮಾಂಬಳ್ಳಿ ಪಾಪೇಗೌಡರ ಬುದಕ್ಕೆ ಬೆಂಕಿ ಬಿತ್ತು. ...ಕಯ್ಯ ಗುತ್ತೇದಾರರ ಮತ್ತೊಬ್ಬ ಖಾಸಾ ತಮ್ಮ ...ಕ್ ಗುತ್ತೇದಾರನಿಗೆ ಆತನ ಮನೆ ನಾಯಿಯೇ ...ರೇಬಿಸ್‌ನಿಂದಾಗಿ ಸತ್ತೇ ಹೋದ. ಅಫಜಲಪೂರದ ...ಗಾರ ವೆಂಕಯ್ಯ ಗುತ್ತೇದಾರ್‌ರನ್ನು ಕಾಯಿಲೆ ನುಂಗಿ ...ತು. ಈಗ ಲಿಕ್ಕರ್ ಸಾಮ್ರಾಜ್ಯದ ಹಳೇ ತಲೆ ಮತ್ತು ...ಳದ ಮಾಜಿ ಸಂಸದ ಎಚ್.ಜಿ. ರಾಮುಲು ಮನೆ ...ಕು ಹೊರಬಿದ್ದಿದೆ.

...ರಾಮುಲು ಮಗಳು ವಿಷ್ಣುವಂದನಾಳ ಕಿಡ್ನ್ಯಾಪ್ ಮತ್ತು ...ೇಯ ಹತ್ತೆಯ ರಾದ್ಧಾಂತದ ಸುತ್ತ ಪೊಲೀಸರು, ...ಿಯಾ, ಲಿಕ್ಕರ್ ಸಾಮ್ರಾಜ್ಯದ ಲೆಕ್ಕಾಚಾರವೇನೇ ಇರಲಿ. ...ರಾಮ, ಲಿಕ್ಕರ್ ದಂಧೆಯ ರೊಕ್ಕ, ಅಧಿಕಾರ ಮತ್ತು ...ಸೆಗಳೆಲ್ಲದರ ಮರೆಯಲ್ಲಿ ನರಳುವ ದೊರೆಗಳ ...ನವೀಯತೆಯಿದೆಯಲ್ಲ; ಬಹುಶಃ ಈ ಕಾರಣಕ್ಕೇ ... ದೊರೆಗಳ ಹೆಣ್ಣುಮಕ್ಕಳ ಬದುಕು ಹೈರಾಣಾಗಿ ...ೇ?

...ಗಂಡನನ್ನೇ ಪ್ರಿಯಕರನ ಮೂಲಕ ಕೊಲ್ಲಿಸಿ ...ಪಾಲಾದ ಗುತ್ತೆದಾರ್‌ನ ಪತ್ನಿ ಪದ್ಮಾವತಿಗೂ ಈಗ ...ರ್ ಫಜೀತಿಗೆ ಬಿದ್ದಿರುವ ವಿಷ್ಣುವಂದನಾಳಿಗೂ ದೊಡ್ಡ ...ವೇನಿಲ್ಲ. ವಿಷ್ಣುವಂದನಾಳ ತಂದೆ ಎಚ್.ಜಿ. ರಾಮುಲು ...ಲ್ಲಿ ಮೂರು ಬಾರಿ ಕೊಪ್ಪಳಕ್ಕೆ ಸಂಸದರಾಗಿದ್ದವರು. ...ಕೇಳಿ ಲಿಕ್ಕರ್ ದೊರೆ. ಗಂಗಾವತಿಯ ಹಳೇ ಲಿಕ್ಕರ್ ... ರಾಮಪ್ಪನವರ ಮೂವರು ಮಕ್ಕಳ ಪೈಕಿ ...ಪ್ಪನವರೇ ಸಂಸದ ರಾಮುಲುಗೆ ...ಯಾದರೆ, ಕರ್ನಾಟಕದ ಈಡಿಗರ ...ಗೆ ಪಿತಾಮಹ ಸದೃಶರಾದ ...ಆರ್. ಬಸವರಾಜಪ್ಪ ಸಂಸದ ...ಲುಗೆ ಖಾಸಾ ಚಿಕ್ಕಪ್ಪ. ಅಂದರೆ ... ರಾಮುಲು ತಂದೆ ಗವಿಯಪ್ಪ ... ಈಡಿಗರ ಸಂಘದ ಸಂಸ್ಥಾಪಕ ...ರಾಜಪ್ಪ ಇಬ್ಬರೂ ಅಣ್ಣತಮ್ಮಂದಿರು; ...ಎಚ್.ಆರ್. ಬಸವರಾಜಪ್ಪನವರನ್ನು ...ಡನೆಯೇ ವರನಟ ರಾಜ್‌ಕುಮಾರ್


ಬಾಳೇಗೌಡ


... ಎದ್ದು ನಿಂತು ಕೈಮುಗಿಯುವ ಕಾಲವೊಂದಿತ್ತು. ...ರಾಜಪ್ಪನವರ ಮಗ ನಾರಾಯಣ ಸ್ವಾಮಿಯವರ ಪುತ್ರ ಪವನ್‌ಕುಮಾರ್ ಮದುವೆಯಾಗಿದ್ದು ಮಾಜಿ ...ಮಂತ್ರಿ ಬಂಗಾರಪ್ಪನವರ ಕೊನೇ ಮಗಳು ...ರನ್ನು. ಮೂಲತಃ ಬಳ್ಳಾರಿಯ ಹೀರೇಹಾಳ್‌ನ ...ಯಿ ಉದ್ದಿಮೆದಾರ ಈಡಿಗರ ಕುಟುಂಬ ...ತರದಲ್ಲಿ ಡಿಸ್ಟಿಲ್ಲರಿಗಳನ್ನು ಸ್ಥಾಪಿಸಿತು. ರಾಜಕೀಯ ...ರ ಹಿಡಿಯಿತು. ದುಡ್ಡು, ಕೀರ್ತಿ, ಅಧಿಕಾರ, ಅಂತಸ್ತು ... ಈ ಕುಟುಂಬಗಳ ಪಾಲಿಗೆ ಯಥೇಚ್ಛವಾಗಿತ್ತು. ...ದೇನು ವಿಕಟವೋ ಗೊತ್ತಿಲ್ಲ, ಇಂಥ ಅನೇಕ ಲಿಕ್ಕರ್ ...ಗಳಿಗೆ ಒಂದಲ್ಲ ಇಬ್ಬರು ಪತ್ನಿಯರು. ಮಾಜಿ ಸಂಸದ ...ಲುರ ಹಿರಿಯ ಪತ್ನಿ ಸರೋಜಮ್ಮನವರಿಗೆ ಒಂಭತ್ತು ...ಾದರೆ ಕಿರಿಯ ಪತ್ನಿ ಸ್ವರೂಪಮ್ಮನಿಗೆ ಇಬ್ಬರು ...ಳು. ಹಿರಿಯ ಪತ್ನಿಯ ಮಗ ಶ್ರೀನಾಥ್ ಕಾಂಗ್ರೆಸ್ ...ಕರಾಗಿ ಎಮ್ಮೆಲ್ಸಿಯಾದರು. ಮತ್ತೊಬ್ಬ ಮಗ ...ಶವನನ್ನು ಬೆಂಗಳೂರಿನ ಬಲಾಢ್ಯ ಲಿಕ್ಕರ್ ದೊರೆ ...ಕ್ ಸಿಂಧ್ಯೆಯ ಮಗಳಿಗೆ ಕೊಟ್ಟು ಮದುವೆ ...ದ್ದಾರೆ. ಪೂರ್ಣಿಮಾ, ಶೋಭಾ, ಯಶೋದಾ, ...ಕ್ಷಿ ಇತ್ಯಾದಿ ಹಿರಿಯ ಹೆಂಡತಿಯ ಮಕ್ಕಳಿಗೂ ... ರಾಮುಲು ಅನುಕೂಲಸ್ಥ ಲಿಕ್ಕರ್ ದೊರೆಗಳ ಮಕ್ಕಳನ್ನೇ ನೋಡಿ ಮದುವೆ ಮಾಡಿದ್ದಾರೆ. ಎರಡನೇ ಪತ್ನಿ ಸ್ವರೂಪಮ್ಮನ ಇಬ್ಬರು ಮಕ್ಕಳ ಪೈಕಿ ಈಗ ಕಿಡ್ನಾಪಾಗಿರುವ ವಿಷ್ಣುವಂದನಾಳೇ ದೊಡ್ಡಾಕೆ. ಅಷ್ಟಕ್ಕೂ ಹಿರಿಹೆಂಡತಿ ಸರೋಜಮ್ಮ ಮತ್ತು ಕಿರಿಯ ಹೆಂಡತಿ ಸ್ವರೂಪಮ್ಮ ಖಾಸಾ ಅಕ್ಕತಂಗಿಯರು!

ವಿಷ್ಣುವಂದನಾಳನ್ನು ಹೈದರಾಬಾದಿನ ಆಗರ್ಭ ಶ್ರೀಮಂತನೊಬ್ಬನ ಮಗ ರವಿಕುಮಾರ್‌ಗೆ ಸಂಸದರಾಗಿದ್ದಾಗಲೇ ಮದುವೆ ಮಾಡಿಕೊಟ್ಟಿದ್ದ ರಾಮುಲು ವರದಕ್ಷಿಣೆಯಾಗಿ ಪ್ರತಿಷ್ಠಿತ ಬಂಜಾರಾ ಹಿಲ್ಸ್‌ನಲ್ಲಿ ಐಷಾರಾಮಿ ಹೋಟೆಲೊಂದನ್ನು ಖರೀದಿಸಿ ಕೊಟ್ಟಿದ್ದರು. ಮದುವೆಯ ಪ್ರಯುಕ್ತ ವಿಷ್ಣುವಂದನಾಳಿಗೆಂದೇ 60 ಲಕ್ಷದ ಚಿನ್ನಾಭರಣಗಳನ್ನೂ, ಅಳಿಯನಿಗೆ ಉಡುಗೊರೆಯಾಗಿ ಬೆಂಜ್ ಕಾರನ್ನೂ ಕೊಟ್ಟರು. ಮಗಳ ಮೇಲಿನ ಪ್ರೀತಿ ಅವರನ್ನು ಹೈದರಾಬಾದಿನ ಪ್ರತಿಷ್ಠಿತ ಈಡಿಗ ಕುಟುಂಬದ ಜೊತೆ ಸಂಬಂಧ ಬೆಳೆಸುವ ಮಟ್ಟಕ್ಕೊಯ್ದಿತ್ತು. ಆದರೆ ಸುಖ, ಸಂಪತ್ತು ಇದ್ದಲ್ಲಿ ನೆಮ್ಮದಿಯೂ ಇರಬೇಕಲ್ಲ?

ರವಿಕುಮಾರ್-ವಿಷ್ಣುವಂದನಾ ದಂಪತಿಗಳ ಇಬ್ಬರು ಮಕ್ಕಳ ಪೈಕಿ ಮಗಳು ಭವಾನಿಯನ್ನು ಶ್ರೀಮಂತರ ಮನೆಗೇ ಕೊಟ್ಟಿದ್ದಾರೆ. ಭವಾನಿ ಈಗ ಹಾಂಕಾಂಗ್‌ನಲ್ಲಿ ಗಂಡನ ಜೊತೆಗಿದ್ದಾಳೆ. ಮಗ ಹೈದರಾಬಾದಿನಲ್ಲಿ ಉದ್ದಿಮೆ ನಡೆಸುತ್ತಾನೆ. ಅದೇನು ಖಿನ್ನತೆಯೋ, ಮನೋವೈಕಲ್ಯವೋ ಗೊತ್ತಿಲ್ಲ, ವಿಷ್ಣುವಂದನಾ ಆಗಾಗ ಇದ್ದಕ್ಕಿದ್ದಂತೆ ಮನೆ ಬಿಟ್ಟು ದಿಕ್ಕುದೆಸೆಯಿಲ್ಲದೆ ಹೋಗಿಬಿಡುತ್ತಿದ್ದರು. ಇದೇ ಕಾರಣಕ್ಕೆ ಗಂಡ ರವಿಕುಮಾರ್ ಮತ್ತು ಆಕೆಯ ಮಧ್ಯೆ ಜಗಳವಾಗುತ್ತಿತ್ತು.

ಅದು ಗಂಡ ತನಗೆ ಖರ್ಚಿಗೆ ಹಣ ಕೊಡುತ್ತಿಲ್ಲ ಎಂಬ ಕಾರಣಕ್ಕೋ ಅಥವಾ ಹಣ ಕೊಟ್ಟರೆ ಪತ್ನಿ ಎಲ್ಲಿ ಸುತ್ತಾಟಕ್ಕೆ ಹೋಗಿಬಿಡುತ್ತಾಳೆಂಬ ಭೀತಿಗೋ ಬಲ್ಲವರ್ಯಾರು? ಅಂತೂ ವಿಷ್ಣುವಂದನಾ ಅವಕಾಶ ಸಿಕ್ಕಾಗೆಲ್ಲ ಎರಡು ವರ್ಷಕ್ಕೋ ಮೂರು ವರ್ಷಕ್ಕೋ ಒಮ್ಮೆ ಇದ್ದಕ್ಕಿದ್ದಂತೆ ನಾಪತ್ತೆಯಾಗುವುದು, ಮನೆಯವರೆಲ್ಲ ಸೇರಿ ಎಲ್ಲೆಲ್ಲಿಂದಲೋ ಹುಡುಕಿ ತರುವುದು ನಡೆದೇ ಇತ್ತು. ಇನ್ನೂ ಕೆಲವರ ಪ್ರಕಾರ ಗಂಡ ರವಿಕುಮಾರ್ ಪಕ್ಕಾ ಜಿಪುಣ, ಮಾವ ಶ್ರೀರಾಮುಲು ಅಷ್ಟೆಲ್ಲ ಆಸ್ತಿ-ಪಾಸ್ತಿ ಕೊಟ್ಟಿದ್ದರೂ ಪತ್ನಿಯ ಪಾಲಿಗೆ ಮನೆಯನ್ನೇ ಜೈಲನ್ನಾಗಿ ಮಾಡಿದ್ದರ ಫಲವಿದು.

ಈ ಮಧ್ಯೆ ಸಂಬಂಧಿಕರ ಮದುವೆಗೆಂದು ಬೆಂಗಳೂರಿಗೆ ಬಂದಿದ್ದ ವಂದನಾ ರವಿಕುಮಾರ್ ಜೂನ್ 18ರ ಸೋಮವಾರ ಡಾಲಿ ಎಂಬ ತಮ್ಮ ಸಂಬಂಧಿಯೊಂದಿಗೆ ಜಯನಗರದ ಶಾಪಿಂಗ್ ಕಾಂಪ್ಲೆಕ್ಸಿಗೆ ಬಂದಿದ್ದಾರೆ. ರಾತ್ರಿ ಬಸ್ಸಲ್ಲಿ ಹೈದರಾಬಾದಿಗೆ ಹೋಗಬೇಕಿತ್ತು. ಒಂದಷ್ಟು ಹಣ್ಣು-ಹೂವು ಖರೀದಿಸಲೆಂದು ಜಯನಗರಕ್ಕೆ ಬಂದ ಗಂಡಹೆಂಡತಿ ಏನೋ ಖರೀದಿಯ ನೆಪದಲ್ಲಿ ಬೇರೆಬೇರೆ ಅಂಗಡಿ ಹೊಕ್ಕಿದ್ದಾರೆ. ವರಸೆಯಲ್ಲಿ ಡಾಲಿ ವಂದನಾಗೆ ತಂಗಿಯಾಗಬೇಕು. ಏನೋ ಖರೀದಿಸುತ್ತೇನೆಂದು ಯಾವುದೋ ಅಂಗಡಿ ಹೊಕ್ಕ ವಂದನಾ ಇದ್ದಕ್ಕಿದ್ದಂತೆ ನಾಪತ್ತೆ. ಆಗ ಸಂಜೆ ಏಳೂವರೆಯ ಹೊತ್ತು. ಎಲ್ಲೆಂದು ಹುಡುಕುತ್ತಿದ್ದಂತೆಯೇ ಪತಿ ರವಿಕುಮಾರ್ ಮೊಬೈಲಿಗೆ ವಂದನಾಳ ಮೊಬೈಲಿನಿಂದ ಕರೆ ಬಂದಿದೆ. "ಅಯ್ಯೋ ಯಾರೋ ನನ್ನನ್ನು ಕಿಡ್ನಾಪ್ ಮಾಡಿದ್ದಾರೆ. ಜೊತೆಗೆ ಒಬ್ಬ ಗಂಡಸು ಮತ್ತು ಹೆಂಗಸು ಇದ್ದಾರೆ. ನನ್ನನ್ನು ಬಿಡಬೇಕು ಅಂದ್ರೆ 30 ಲಕ್ಷ ಕೊಡಬೇಕಂತೆ. ನೋಡಿ ನನ್ನ ಮೊಬೈಲು ಕಿತ್ತುಕೊಳ್ಳುತ್ತಿದ್ದಾರೆ..." ಎಂದಿದ್ದೇ ಫೋನ್ ಕಟ್ ಆಗಿದೆ. ಜಯನಗರ ಶಾಪಿಂಗ್ ಕಾಂಪ್ಲೆಕ್ಸ್‌ನಿಂದ ಒಬ್ಬ ಪುರುಷ ಮತ್ತೋರ್ವ ಮಹಿಳೆ ಆಕೆಯನ್ನು ಅಪಹರಿಸಿದ್ದೇ ಆದಲ್ಲಿ ನೆರೆದಿದ್ದ ಜನಜಂಗುಳಿಯಲ್ಲಿ ಯಾರಾದರೂ


ರಾಮುಲು

ಅದನ್ನು ನೋಡಿರಬೇಕಿತ್ತು, ಇಡೀ ಕಾಂಪ್ಲೆಕ್ಸ್ ಸುತ್ತಮುತ್ತ ಪೊಲೀಸರೇ ಅಳವಡಿಸಿದ್ದ ಸೀಸಿ ಟೀವಿ ಕ್ಯಾಮರಾಗಳಿದ್ದವು. ಪತಿ ರವಿಕುಮಾರ್ ಮತ್ತು ಡಾಲಿ ಜಯನಗರ ಪೊಲೀಸ್ ಠಾಣೆಗೆ ಬಂದು ಕಿಡ್ನಾಪ್ ಕತೆಯ ದೂರು ದಾಖಲಿಸುತ್ತಿದ್ದಂತೆಯೇ ಇನ್ಸ್‌ಪೆಕ್ಟರ್ ಉಮೇಶ್‌ಗೆ ಅನ್ನಿಸಿದ್ದು ಇದರಲ್ಲಿ ಬೇರೇನೋ ಮರ್ಮವಿದೆ!

ವಂದನಾ ಮಾಜಿ ಸಂಸದ ರಾಮುಲು ಮಗಳು. ಇತ್ತೀಚೆಗೆ ಲಿಕ್ಕರ್ ದಂಧೆಯಲ್ಲದೆ ಮೈನಿಂಗ್‌ಗೂ ರಾಮುಲು ಕೈಹಾಕಿದ್ದರು. ಒತ್ತೆ ಹಣಕ್ಕಾಗೇ ಕಿಡ್ನಾಪ್ ನಡೆದಿದ್ದರೆ ಹೆಂಗಸು ಮತ್ತೊಬ್ಬ ಗಂಡಸು ಸೇರಿ ಏಕೆ ಅಪಹರಿಸುತ್ತಿದ್ದರು? ಹಾಗೊಮ್ಮೆ ಅಪಹರಿಸಿದ್ದೇ ನಿಜವಾಗಿದ್ದರೆ ಜನಜಂಗುಳಿಯಲ್ಲಿ ವಂದನಾ ಕಿರುಚಿಕೊಳ್ಳಬೇಕಿತ್ತು. ಕಿರುಚಿಕೊಂಡಿದ್ದೇ ಆಗಿದ್ದರೆ ಜನರೇ ನೆರವಿಗೆ ಬರುತ್ತಿದ್ದರು ಅಥವಾ ಒಂದಲ್ಲಾ ಒಂದು ಟ್ರಾಫಿಕ್ ಸಿಗ್ನಲ್ಲಿನಲ್ಲಿ ಅಪಹರಿಸಿದ ಕಾರು ಸಿಕ್ಕಿಬೀಳಲೇಬೇಕಿತ್ತು. ಸೀಸಿ ಟೀವಿಯಲ್ಲೂ ಅಂಥ ಲಕ್ಷಣಗಳಿಲ್ಲ. ಕಿರುಚಾಡಿದ, ಹೆಂಗಸೊಬ್ಬಳನ್ನು ಬಲಾತ್ಕಾರವಾಗಿ ಎಳೆದೊಯ್ದ ಯಾವ ಲಕ್ಷಣಗಳೂ ಇರಲಿಲ್ಲ.

ವಂದನಾಳ ಮೊಬೈಲ್‌ನ ಟವರ್ ಟ್ರ್ಯಾಕ್ ಪ್ರಕಾರ ಅದು ಕಲಾಸಿಪಾಳ್ಯದಲ್ಲೊಮ್ಮೆ ಆನಂತರ ಮತ್ತೆ ಪತ್ತೆಯಾಗಿದ್ದು ಚೆನ್ನೈನಲ್ಲಿ. ಮರುದಿನ ಹೀಗೆಯೇ ಮತ್ತೆ ಪತಿಯ ಮೊಬೈಲಿಗೆ ಫೋನ್ ಮಾಡಿದ ವಂದನಾ ತನ್ನನ್ನು ಕಿಡ್ನಾಪ್ ಮಾಡಿ ಎಲ್ಲಿಗೋ ಕರೆತಂದಿದ್ದಾರೆ, 30 ಲಕ್ಷ ಕೇಳುತ್ತಿದ್ದಾರೆ ಎಂದು


ಜಯನಗರ ಶಾಪಿಂಗ್ ಕಾಂಪ್ಲೆಕ್ಸ್

ಹೇಳಿ ಫೋನ್ ಅನ್ನು ಸ್ವಿಚ್ ಆಫ್ ಮಾಡಿದ್ದಳು. ಆ ಹೊತ್ತಿಗಾಗಲೇ ಡಿಸಿಪಿ ಸೋನಿಯಾ ನಾರಂಗ್ ಪತ್ತೆಗೆಂದು ಮೂರು ತಂಡಗಳನ್ನು ರಚಿಸಿದ್ದರು. ಆಕೆಯ ಮೊಬೈಲಿನ ಟವರ್ ಪತ್ತೆಹಚ್ಚಿದ ಬಾಳೇಗೌಡರ ತಂಡ ಚೆನ್ನೈನ ರೈಲ್ವೇ ಸ್ಟೇಷನ್ನಿನಲ್ಲಿ ಒಬ್ಬಂಟಿಯಾಗಿ ಓಡಾಡುತ್ತಿದ್ದ ಆಕೆಯನ್ನು ಪತ್ತೆಹಚ್ಚಿದ್ದು ಮಂಗಳವಾರ ಅಂದರೆ ಮರುದಿನ ಬೆಳಿಗ್ಗೆಯೇ. ಕಿಡ್ನಾಪ್(!) ಆದ 20 ಗಂಟೆಯೊಳಗೇ ಪೊಲೀಸರು ವಂದನಾಳನ್ನು ಕರೆತಂದು ಬಿಟ್ಟಿದ್ದರು.

ಮಾನಸಿಕವಾಗಿ ಬಳಲಿದಂತೆ ಕ್ಷಣಕ್ಕೊಂದು ಕತೆ ಹೇಳುತ್ತಿದ್ದ ಆಕೆಯ ವಿವರಣೆಗಳು ಒಂದಕ್ಕೊಂದು ತಾಳೆಯಾಗುತ್ತಿರಲಿಲ್ಲ. ಮೊದಲು ತನ್ನನ್ನು ಅಪಹರಿಸಿದವರು ಕೆ.ಆರ್. ಮಾರ್ಕೆಟ್ ಏರಿಯಾಕ್ಕೆ ಕರೆತಂದು ಅಲ್ಲಿಂದ ಬಸ್ಸಿನಲ್ಲಿ ಚೆನ್ನೈಗೆ ಕರೆತಂದರೆಂದು ಹೇಳಿದರು. ಬಸ್ಸಿನಲ್ಲಿ ಏಕೆ ಕೂಗಿಕೊಳ್ಳಲಿಲ್ಲ ಎಂದರೆ ಎಲ್ಲಿ ಕೊಂದು ಹಾಕುತ್ತಾರೋ ಎಂಬ ಭಯ ಎಂದಳು. ಹಾಗಾದರೆ ರೈಲ್ವೇ ಸ್ಟೇಷನ್ನಿನಲ್ಲೇಕೆ ಅವರು ಜೊತೆಗಿರಲಿಲ್ಲ ಎಂದರೆ ನಿಮ್ಮನ್ನು ನೋಡಿದ್ದೇ ಪರಾರಿಯಾದರು ಎಂದಳು. ಇನ್ನೂ ಬಾಯಿಬಿಡಿಸಹೋದರೆ ಇದ್ದಕ್ಕಿದ್ದಂತೆ ಅಳಲಾರಂಭಿಸುತ್ತಿದ್ದಳು. ಅಲ್ಲಿಗೆ ಕಿಡ್ನಾಪ್ ಡ್ರಾಮಾದ ಕಾರಣಕರ್ತೆಯೇ ವಂದನಾ ಎಂದು ಪೊಲೀಸರಿಗೆ ಖಚಿತವಾಗಿತ್ತು. ನೇರವಾಗಿ ಪೊಲೀಸರೇ ಆಕೆಯ ಮನೆಗೊಯ್ದು ಬಿಟ್ಟರು.

ಹಕೀಕತ್ತೇನೆಂದರೆ ಜಯನಗರ ಶಾಪಿಂಗ್ ಕಾಂಪ್ಲೆಕ್ಸಿನಿಂದ ಪತಿ ರವಿಕುಮಾರ್ ಕಣ್ಣುತಪ್ಪಿಸಿ ಆಟೋ ಹತ್ತಿದ ವಂದನಾ ನೇರವಾಗಿ ಕಲಾಸಿಪಾಳ್ಯಕ್ಕೆ ಬಂದು ಚೆನ್ನೈ ಬಸ್ಸು ಹತ್ತಿದ್ದಳು. ಚೆನ್ನೈನಲ್ಲಿ ದಿಕ್ಕುತೋಚದೆ ರೈಲ್ವೇ ಸ್ಟೇಷನ್ನಿಗೆ ಬಂದು ಮತ್ತೆ ಪತಿಗೆ ಫೋನ್ ಮಾಡಿದ್ದಳು. ಪೊಲೀಸರಿಗೆ ಆಕೆ ರೈಲ್ವೇ ಸ್ಟೇಷನ್ನಿನಲ್ಲಿ ಸಿಕ್ಕಿಬಿದ್ದಾಗ ಧರಿಸಿದ ಒಡವೆಗಳು, ಪರ್ಸು, ಅದರೊಳಗಿದ್ದ ಒಂದೂವರೆ ಸಾವಿರ ರೂಪಾಯಿ ಹಾಗೇ ಇತ್ತು. ದುಡ್ಡಿಗಾಗಿ ಅಪಹರಿಸಿದವರು ಕನಿಷ್ಠ ಪರ್ಸು ಮತ್ತು ಒಡವೆಗಳನ್ನು ಕಿತ್ತುಕೊಳ್ಳದೆ ಬಿಟ್ಟು ಕಳಿಸುವುದುಂಟಾ? ಅಪಹರಿಸಿದ್ದೇ ನಿಜವಾಗಿದ್ದರೆ ಅಪಹರಣಕಾರರ ಪೈಕಿ ಯಾರಾದರೂ ಒಬ್ಬರು ಮಾತಾಡಬೇಕಿತ್ತಲ್ಲವೆ?

ತನ್ನನ್ನು ಅಪಹರಿಸಿದವರ ಬಗ್ಗೆ ಪೊಲೀಸರಿಗೆ ದೂರು ನೀಡದೆ 30 ಲಕ್ಷ ತೆತ್ತು ಬಿಡಿಸಿಕೊಳ್ಳಬಹುದೆಂದೂ, ಸಲೀಸಾಗಿ 30 ಲಕ್ಷದ ಮೊತ್ತ ಹೊಡೆಯಬಹುದೆಂದೂ ವಂದನಾ ಹಾಕಿದ ಹುನ್ನಾರ ಆಕೆಗೇ ಮುಳುವಾಗಿತ್ತು!

ಶ್ರೀಮಂತಿಕೆ, ಸುಪ್ಪತ್ತಿಗೆ, ಐಷಾರಾಮ ಎಲ್ಲಾ ಇದ್ದೂ ಲಿಕ್ಕರ್ ದೊರೆ ಮತ್ತು ಮಾಜಿ ಸಂಸದ ರಾಮುಲು ಕುಟುಂಬದ ಮಗಳೊಬ್ಬಳಿಗೆ ಅದೇನು ಕ್ಷೋಭೆಯಿರಬಹುದು? ಮನೆಯೇ ಜೈಲಾಗಿದ್ದರ ಪ್ರತಿಫಲ ವಾಗಿ ಹಣ-ಆಸ್ತಿಯೊಂದೇ ಜೀವನ ಮೌಲ್ಯ ವಾದ ದುಷ್ಪರಿಣಾಮವಾ? ಅಥವಾ ಸುಖಭೋಗಕ್ಕೆ ರೋಸತ್ತ ಮಾನವೀಯ ತುಡಿತವಾ? 47 ವರ್ಷದ ಹೆಂಗಸೊಬ್ಬಳು ಇಂಥಾ ದುಸ್ಸಾಹಸಕ್ಕಿಳಿಯುತ್ತಾಳೆಂದರೆ ಆಕೆಯ ಬೇಗುದಿ ಏನಿದ್ದೀತು?

• ರಾ.ಸೋಮನಾಥ್

...ತಿಯ ಬಿಎಸ್ ಪರಮಶಿವಯ್ಯ ಈ ತಂಡದ ಮತ್ತೊಬ್ಬ ...ಾ. ವೀರಶೈವ ಕೋ ಆಪರೇಟಿವ್ ಬ್ಯಾಂಕ್‌ನ್ನು ...ವಲ್ಲಿಟ್ಟುಕೊಂಡು ಈತ ನಡೆಸಿದ ಅವ್ಯವಹಾರಗಳಿಗಾಗಿ ...ರು ಕೇಸುಗಳು ಬಿದ್ದಿವೆ. ಅಲ್ಲದೆ ಈ ಬ್ಯಾಂಕನ್ನು ...ೆ ಎರಡು ಬಾರಿ ಸೂಪರ್‌ಸೀಡ್ ಮಾಡಿತ್ತು. ಹೀಗೆ ... ಅಪಗುಣಗಳನ್ನು ಮೈಗೂಡಿಸಿಕೊಂಡಿರುವ ಈ ... ಅಮಾಯಕ ಲಿಂಗಾಯತರನ್ನು ನಂಬಿಸಿ ...ಸುವುದರಲ್ಲಿ ಎತ್ತಿದ ಕೈ. ಇನ್ನು ಅಖಿಲ ಭಾರತ ...ಪ್ರಧಾನ ಕಾರ್ಯದರ್ಶಿಯಾಗಿದ್ದ ಎಚ್‌ವಿ ನಾಗೇಂದ್ರಪ್ಪ ...ಖದೀಮನ ಕತೆಯನ್ನಂತೂ ಕೇಳಲೇಬೇಡಿ. ವೀರಶೈವ ... ನಿರ್ಮಾಣದ ಜಾಗ ಖರೀದಿಯಿಂದ ಹಿಡಿದು ... ನಿರ್ಮಾಣದವರೆಗೆ ಎಲ್ಲ ಹಂತಗಳಲ್ಲೂ ಗೋಲ್ ... ಮಾಡಿದ ಕುಖ್ಯಾತಿ ಈತನದು. ಈ ಗುಂಪಿನ ... ಹೆಜ್ಜೆ ಹಾಕುತ್ತಿರುವ ಮಹಿಳಾಮಣಿಯೆಂದರೆ ಮಾಜಿ ... ಲೀಲಾದೇವಿ ಪ್ರಸಾದ್. ಸಿಕ್ಕಸಿಕ್ಕ ವೇದಿಕೆಗಳಲ್ಲೆಲ್ಲಾ ...ಮಹಾದೇವಿಯ ವಚನಗಳನ್ನು ಪಠಣ ಮಾಡಿದ್ದನ್ನು ... ಈ ಮಹಾತಾಯಿ ವೀರಶೈವರಿಗಾಗಲಿ, ಸಮಾಜ ... ನೀಡಿದ ಕೊಡುಗೆ ಏನು ಎಂದು ಹಲವಾರು ... ಕಾರ್ಯಕರ್ತರೇ ಪ್ರಶ್ನಿಸುತ್ತಿದ್ದಾರೆ.

...ಟ್ಟಾರೆಯಾಗಿ ಈ ಆಲಿಬಾಬಾ ಗುಂಪನ್ನು ...ರದಿಂದ ದೂರ ಇಡುವುದೇ ಲಿಂಗವಂತರಿಗೆ ...ಸ್ಥವ.

... ಎಲ್ಲರಿಗಿಂತಲೂ ಪ್ರಭಾವಶಾಲಿಯಾದ ಗುಂಪೆಂದರೆ ... ಭೀಮಣ್ಣ ಖಂಡ್ರೆಯ ಗುಂಪು. ಆತನ ಜೊತೆ ಶಾಮನೂರು ಶಿವಶಂಕರಪ್ಪ ಕೂಡ ಕೈ ಜೋಡಿಸಿರುವುದರಿಂದ ಈ ಗುಂಪಿನ ಚರಿಶ್ಮಾ ಇನ್ನಷ್ಟು ಹೆಚ್ಚಿದೆ. ಬಸವ ಸಮಿತಿಯ ಅಧ್ಯಕ್ಷನಾಗಿರುವ ಬಿ.ಡಿ. ಜತ್ತಿಯ ಮಗ ಅರವಿಂದ ಜತ್ತಿಯೂ ಈ ಬಣದೊಂದಿಗಿದ್ದಾರೆ. ಆದರೆ ವಿಪರ್ಯಾಸ ಹೇಗಿದೆ ನೋಡಿ. ವೀರಶೈವ ಮಹಾಸಭಾದ ಮಾನಮರ್ಯಾದೆಯನ್ನು ಹರಾಜಿಗಿಟ್ಟು, ವಿವಾದ ಕೋರ್ಟಿನ ಮೆಟ್ಟಿಲೇರುವಂತೆ ಮಾಡಿ ಸರ್ಕಾರ ಮಹಾಸಭಾದ ಅಧಿಕಾರವನ್ನು ಕಸಿಯುವಂತಾಗಲೂ ಮೂಲಕಾರಣ ಪುರುಷನೇ ಈ ಖಂಡ್ರೆ.

ಭವನ ನಿರ್ಮಾಣದ ಹೆಸರಿನಲ್ಲಿ ಖಂಡ್ರೆ ಬಾಚಿದ್ದೆಷ್ಟು ಎಂಬುದಕ್ಕೆ ಸರಿಯಾದ ಲೆಕ್ಕವೇ ಇಲ್ಲ. ಈ ಖಂಡ್ರೆ ಎಂಥಾ ಪಾಖಂಡಿಯೆಂದರೆ ಹಿಂದೆ ಸಾರಿಗೆ ಸಚಿವನಾಗಿದ್ದ ಕಾಲದಲ್ಲಿ ನಕಲಿ ಟಿಕೆಟ್ ಪ್ರಿಂಟ್ ಮಾಡಿಸಿ ವಿತರಣೆ ಮಾಡಿಸಿದ್ದ ವಿವಾದವನ್ನು ಲಿಂಗಾಯತರು ಅಷ್ಟು ಸುಲಭವಾಗಿ ಮರೆಯುವಂತಿಲ್ಲ.

ಒಂದುಕಡೆ ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪನ ಮೂಗಿಗೆ ತುಪ್ಪ ಸವರುತ್ತಲೇ ಮತ್ತೊಂದುಕಡೆ ಹೇಗಾದರೂ ಮಾಡಿ ಮತ್ತೊಮ್ಮೆ ಅಖಿಲ ಭಾರತ ಅಧ್ಯಕ್ಷ ಸ್ಥಾನಕ್ಕೇರಲು ಖಂಡ್ರೆ ಎಲ್ಲಾ ಮಸಲತ್ತುಗಳನ್ನು ನಡೆಸಿದ್ದಾನೆ. ಅದರ ಭಾಗವಾಗಿಯೇ ರಾಜ್ಯಾಧ್ಯಕ್ಷ ಸ್ಥಾನಕ್ಕೆ ತಮ್ಮ ಬಣದ ಅಭ್ಯರ್ಥಿಯಾಗಿ ಈ ಹಿಂದೆ ಜೆಡಿಎಸ್ ಅಧ್ಯಕ್ಷನಾಗಿದ್ದ ಹಾಲಿ ಎಂಎಲ್‌ಸಿಯಾಗಿರುವ ತಿಪ್ಪಣ್ಣನನ್ನು ಮುಂದೆ ತರುತ್ತಿದ್ದಾನೆ. ಈ ತಿಪ್ಪಣ್ಣ ಎಂಥಾ ದಮ್ಮಿ ಕ್ಯಾಂಡಿಡೇಟು ಅಂತಾ ಹೆಚ್ಚು ವಿವರಿಸುವ ಅಗತ್ಯವಿಲ್ಲ. ಜೆಡಿಎಸ್ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ದೇವೇಗೌಡ ಅಂಡ್ ಸನ್ಸ್‌ಗೆ ನೆಚ್ಚಿನ ಸೇವಕನಾಗಿದ್ದ ತಿಪ್ಪಣ್ಣ ತೋರಿದ ಬದ್ಧತೆ ನಿಷ್ಠೆಗಳು ಒಂದು ಸರ್ವಕಾಲಿಕ ದಾಖಲೆಯೆನ್ನಬಹುದು. ದೇವೇಗೌಡ ತೋರಿಸಿದ ಕಡೆ ಮರುಮಾತಾಡದೆ ಸಹಿ ಹಾಕುವುದಷ್ಟೆ ತನ್ನ ಕಾಯಕ ಎಂದು ಭಾವಿಸಿ ತನ್ನ ಅಧ್ಯಕ್ಷ ಪದವಿಯನ್ನು ಸಾರ್ಥಕಪಡಿಸಿಕೊಂಡ ಸಾಧನೆ ಈ ಮಹಾನುಭಾವನದು. ಈಗ ಬರೋಬ್ಬರಿ 84 ವರ್ಷ ತುಂಬಿರುವ ವಯೋವೃದ್ಧ ತಿಪ್ಪಣ್ಣನಿಗೆ ಎದ್ದರೆ ಕೂಡಲಾಗದ, ಕೂತರೆ ಏಳಲಾಗದ ಸ್ಥಿತಿ. ಜೊತೆಗೆ ಕಣ್ಣು ಕಿವಿ ಎರಡೂ ಮಂಜಾಗಿವೆ. ತಿಪ್ಪಣ್ಣನ ಇಂಥಾ ವಿಶೇಷ ಗುಣಗಳನ್ನು, ಸಾಮರ್ಥ್ಯಗಳನ್ನು ಮೆಚ್ಚಿಯೇ ಖಂಡ್ರೆ ಆತನನ್ನು ರಾಜ್ಯಾಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿ ಮಾಡಿ ತನ್ನ ಕಾರ್ಯ ಸಾಧಿಸುವ ತಂತ್ರ ಹೂಡಿದ್ದಾನೆ.

ಈ ಎಲ್ಲಾ ಬೆಳವಣಿಗೆಗಳಿಂದ ಪ್ರಾಮಾಣಿಕ ಸದಸ್ಯರು, ಕಾರ್ಯಕರ್ತರು ಬೇಸತ್ತಿದ್ದಾರೆ. ಇಂಥಾ ಸನ್ನಿವೇಶದಲ್ಲಿ ಮತ್ತೊಬ್ಬ ಅಭ್ಯರ್ಥಿಯ ಎಂಟ್ರಿಯಾಗುವ ಎಲ್ಲಾ ಲಕ್ಷಣಗಳೂ ಗೋಚರಿಸುತ್ತಿವೆ. ಬಿ.ಎಸ್. ವಾಗೀಶ್ ಪ್ರಸಾದ್ ಎಂಬ ಈ ಕ್ಯಾಂಡಿಡೇಟ್ ರಾಜ್ಯ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಸ್ಪಷ್ಟ ನಿರ್ಧಾರ ತೆಗೆದುಕೊಂಡಿರುವುದಾಗಿ ಮಹಾಸಭಾದಲ್ಲಿ ಸುದ್ದಿ ಹರಡಿದೆ. ಈ ಹಿಂದಿನ ಅವಧಿಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಎಲೆಮರೆಕಾಯಿಯಂತೆ ದುಡಿದಿರುವ ವಾಗೀಶ್ ಕೆಲಸದ ವೈಖರಿಯ ಬಗ್ಗೆ ಹಲವರು ಮೆಚ್ಚುಗೆಯ ಮಾತಾಡುತ್ತಾರೆ. ಮಹಾಸಭಾದ ಚಟುವಟಿಕೆಗಳಲ್ಲಿ ದಶಕಕ್ಕೂ ಹೆಚ್ಚಿನ ಕಾಲ ಸಕ್ರಿಯವಾಗಿರುವ, ಶ್ರೀಮಂತ ಹಿನ್ನೆಲೆಯ ವಾಗೀಶ್ ಯಾವುದೇ ರಾಜಕೀಯ ಪಕ್ಷದ ಜೊತೆ ಗುರುತಿಸಿಕೊಂಡಿಲ್ಲ ಎಂಬ ವಿಷಯವೇ ಒಂದು ಆಶ್ಚರ್ಯದ ಸಂಗತಿ. ಮಹಾಸಭಾದ ಅಕೌಂಟಿನಿಂದ ನಯಾಪೈಸೆಯನ್ನು ಪಡೆಯದೆ ತನ್ನ ಸ್ವಂತ ಖರ್ಚಿನಲ್ಲಿ ರಾಜ್ಯಾದ್ಯಂತ ಸುತ್ತಾಡಿ ಸಂಘದ ಚಟುವಟಿಕೆಗಳನ್ನು ನಡೆಸುತ್ತಿರುವ ವಾಗೀಶ್ ಬಗ್ಗೆ ಅಭಿಮಾನ ಹೊಂದಿರುವ ಅವರ ಬೆಂಬಲಿಗರು ಅವರನ್ನು ಅಧ್ಯಕ್ಷ ಸ್ಥಾನಕ್ಕೆ ತರಲು ದಿಟ್ಟ ನಿರ್ಧಾರ ಮಾಡಿದ್ದಾರೆಂಬ ಸುದ್ದಿ ಇದೆ. ಆದರೆ ಅದಕ್ಕೆ ಅಡ್ಡಿಯಾಗಿ ನಿಂತಿರುವುದು ಇದೇ ಖಂಡ್ರೆ ಅಂಡ್ ಕಂಪನಿ. ಅದಕ್ಕೆ ಇನ್ನೊಂದು ಆಯಾಮವೂ ಇದೆ. ಏನೆಂದರೆ ಖಂಡ್ರೆ ಈ ಮೊದಲಿನಿಂದಲೂ ಮೈಸೂರು ಪ್ರಾಂತ್ಯದವರನ್ನು ಮಹಾಸಭಾದಲ್ಲಿ ಮೂಲೆಗುಂಪು ಮಾಡುತ್ತಾ ಪ್ರಾದೇಶಿಕ ರಾಜಕೀಯವನ್ನೂ ನಡೆಸಿಕೊಂಡು ಬಂದಿದ್ದಾರೆ ಎಂಬ ಆರೋಪವಿದೆ;

ಈ ನಡುವೆ ಶಾಮನೂರು ಶಿವಶಂಕರಪ್ಪನವರ ಗುಂಪು ವಾಗೀಶ್ ಪ್ರಸಾದ್‌ಗೆ ಬೆಂಬಲ ಸೂಚಿಸುವ ಸುದ್ದಿಯೂ ಕೇಳಿಬರುತ್ತಿದೆ.

ಒಟ್ಟಿನಲ್ಲಿ ಹಳೇ ಭ್ರಷ್ಟರು ಹಾಗೂ ಹೊಸ ನಿಷ್ಠುರ ನಡುವಿನ ಕದನವಾಗಿ ಈ ಬಾರಿಯ ವೀರಶೈವ ಮಹಾಸಭಾದ ಚುನಾವಣೆ ನಡೆಯಲಿದೆ.

ಬಸವಣ್ಣ ಕನಸು ಕಂಡಂತೆ ಇಡೀ ಮನುಕುಲವನ್ನು ಉದ್ಧಾರ ಮಾಡುವ ಮಾತು ಹಾಗಿರಲಿ, ತಮ್ಮ ವೀರಶೈವ ಮಹಾಸಭಾದ ಘನತೆ ಗೌರವ ಉಳಿಸಿಕೊಳ್ಳುವ ಬಗ್ಗೆಯಾದರೂ ಸಂಘದ ಮತದಾರರು ಗಂಭೀರವಾಗಿ ಆಲೋಚಿಸುವುದು ಒಳ್ಳೆಯದು.

• ದೊಡ್ಡಿಪಾಳ್ಯ ನರಸಿಂಹಮೂರ್ತಿ



ಆರ್ಥಿಕ ಅಪರಾಧಗಳ ತನಿಖೆ ರೆಡ್ಡಿಗೆ ಬೆಂಡ್

ಗಾಲಿ ಜನಾರ್ದನ ರೆಡ್ಡಿ ಹತಾಶನಾಗಿ ಹೋಗಿದ್ದಾನೆ.

ಅವನು ಜೈಲು ಪಾಲಾಗಿ ಒಂಭತ್ತು ತಿಂಗಳಾಯಿತು. ಜಾಮೀನು ಪಡೆದು ಆಚೆ ಬರಲು ಕುದುರಿಸಿದ ದೀಲು ಹೊರಬಂತೆ ಏನಃ ರೆಡ್ಡಿ ಹೊರಬರಲಾಗುತ್ತಿಲ್ಲ. ಖದೀಮ ರೆಡ್ಡಿಗೆ ಜಾಮೀನು ಕೊಡಿಸಲು ಸಾಕ್ಷಾತ್ ಸಿಬಿಐ ನ್ಯಾಯಾಧೀಶನೊಬ್ಬ ರೌಡಿ ಜೊತೆಗೆ ಕುದುರಿಸಿದ ಡೀಲುಗಳು, ದುಡ್ಡು ತಿಂದು ಹೊಗಳಿದವರ ಹಾರೈಕೆಗಳಾವುವೂ ರೆಡ್ಡಿಯನ್ನು ಕಾಪಾಡುತ್ತಿಲ್ಲ.

ರೆಡ್ಡಿ ಜೈಲಿನಲ್ಲೇ ಇರಬೇಕಾಗಿ ಬಂದಿದೆ... ಇನ್ನೂ ಬಹಳ ಕಾಲ!

ಇಷ್ಟು ಸಾಲದೆಂಬಂತೆ ರೆಡ್ಡಿಗೀಗ ಇನ್ನೂ ಕಷ್ಟಕಾಲ ಶುರುವಾಗಿದೆ. ಅದು **Enforcement Directorate (ED)** ಅರ್ಥಾತ್ ಜಾರಿ ನಿರ್ದೇಶನಾಲಯದ ತನಿಖೆ. ಆರ್ಥಿಕ ಅಪರಾಧಗಳಿಗೆ ಸಂಬಂಧಿಸಿದ ತನಿಖೆ ಇದು.

ಈ ರೆಡ್ಡಿಗಳ ಗಣಿ ಹಗರಣ, ಆಪರೇಷನ್ ಕಮಲ, ಯಡ್ಡಿಯ ಭಿನ್ನಮತ, ನಿತ್ಯಾನಂದನ ನಿತ್ಯ ರಗಳೆಗಳಲ್ಲಿ ಬಹುತೇಕರು ಮರೆತುಹೋಗಿರಬಹುದಾದ ಒಂದು ತನಿಖೆ ಇನ್ನು ಬಾಕಿ ಇದೆ.

ಅದು 2010ರ ಅಕ್ಟೋಬರ್ 25 ರಂದು ರೆಡ್ಡಿ ಮೇಲೆ ನಡೆದಿದ್ದ ಇನ್‌ಕಮ್ ಟ್ಯಾಕ್ಸ್ ದಾಳಿ ಪ್ರಕರಣ!

ಅದಕ್ಕೂ ಮುನ್ನ 2007ರ ಅಕ್ಟೋಬರ್‌ನಲ್ಲಿ ಒಂದು ದಾಳಿ ರೆಡ್ಡಿ ಮನೆ ಮೇಲೆ ಆಗಿತ್ತು. ಆದರೆ ಆಗ ರಾಜಕೀಯವಾಗಿ ಭಾರಿ ಖದರ್‌ನಲ್ಲಿದ್ದ ರೆಡ್ಡಿ ಆ ದಾಳಿಯನ್ನು ಜೀರ್ಣಿಸಿಕೊಂಡಿದ್ದ. ಇನ್ನೂ ಸರಿಯಾಗಿ ಹೇಳಬೇಕೆಂದರೆ ರೆಡ್ಡಿಯ ಗಣಿ ಲೂಟಿ 2008 ರಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರವೇ ಜಾಸ್ತಿ ವೇಗ ಪಡೆದುಕೊಂಡಿತ್ತು. ಅದಿರು ರಫ್ತಿನ ವ್ಯವಹಾರದಲ್ಲಿ ರೆಡ್ಡಿ ಸಾವಿರಾರು ಕೋಟಿ ರೂಪಾಯಿ ಲೂಟಿ ಹೊಡೆದಿದ್ದ. ಕೈಲಿ ಅಧಿಕಾರ ವಿತ್ತಾದ್ದರಿಂದ ಇಡೀ ಬಿಜೆಪಿ ರಾಜ್ಯ ಸರ್ಕಾರದ ಜೊತೆಗೆ ಪಕ್ಕದ ಆಂಧ್ರದ ಕಾಂಗ್ರೆಸ್ ಸರ್ಕಾರವೂ ಸಹಕರಿಸಿತ್ತಾದ್ದರಿಂದ ರೆಡ್ಡಿ ಮನಸೋ ಇಚ್ಛೆ ಅದಿರು ಲೂಟಿ ನಡೆಸಿದ್ದ.

ಆಗಲೇ ಇನ್‌ಕಮ್ ಟ್ಯಾಕ್ಸ್ ದಾಳಿಯಾದದ್ದು.

ದಾಳಿಯಾದಾಗ ಸುಮಾರು ಐದು ಇನ್ನೋವಾ ಕಾರುಗಳನ್ನು ತುಂಬುವಷ್ಟು ದಾಖಲೆಗಳನ್ನು ವಶಪಡಿಸಿಕೊಂಡಿದ್ದ ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳು ಇಷ್ಟು ದಿನ ಅದನ್ನೆಲ್ಲಾ ಸ್ಟಡಿ ಮಾಡಿ ಸರಿ-ತಪ್ಪುಗಳನ್ನೆಲ್ಲ ಅರ್ಥೈಸಿಕೊಂಡು ಈಗ ರೆಡ್ಡಿಯನ್ನು ವಿಚಾರಣೆಗೆ ಒಳಪಡಿಸಲು ಬಂದಿಳಿದಿದ್ದಾರೆ.

ಕೋರ್ಟ್ ಆದೇಶದಂತೆ ಈ ವಿಚಾರಣೆಯು ಹಾಲಿ ರೆಡ್ಡಿಯ ನೆಲೆಯಾಗಿರುವ ಪರಪ್ಪನ ಅಗ್ರಹಾರದ ಜೈಲಿನೊಳಗೆ ನಡೆಯಲಿದೆ.

ಮನಿ ಲಾಂಡ್ರಿಂಗ್ ಕೇಸ್

ಕೇಂದ್ರ ಸರ್ಕಾರದ ಜಾರಿ ನಿರ್ದೇಶನಾಲಯವು ರೆಡ್ಡಿ ವಿರುದ್ಧ **Prevention of Money Laundering Case** (ಕಪ್ಪು ಹಣವನ್ನು ಬಿಳಿ ಹಣವನ್ನಾಗಿ ಪರಿವರ್ತಿಸುವ ದಂಧೆ) ಅನ್ನು ದಾಖಲಿಸಿಕೊಂಡಿದೆ.

ಇದರಲ್ಲಿ ರೆಡ್ಡಿಯ ಅಸೋಸಿಯೇಟೆಡ್ ಮೈನಿಂಗ್ ಕಂಪೆನಿಯ ಪಾತ್ರ ಹೆಚ್ಚಿನದಾಗಿದೆ. ಜೊತೆಗೆ ಡೆಕನ್ ಮೈನಿಂಗ್ ಸಿಂಡಿಕೇಟ್ ಪಾತ್ರವೂ ಇದೆ.

2007ರಲ್ಲಿ ಮೊದಲ ಬಾರಿಗೆ ಇನ್‌ಕಮ್ ಟ್ಯಾಕ್ಸ್ ರೇಡ್ ನಡೆದಾಗ ರೆಡ್ಡಿ 86.42 ಕೋಟಿ ರೂಪಾಯಿ ತೆರಿಗೆ ವಂಚಿಸಿದ್ದು ಬೆಳಕಿಗೆ ಬಂದಿತ್ತು. ಆದರೆ 2010ರ ಅಕ್ಟೋಬರ್ ದಾಳಿ ನಡೆದಾಗ ಈ ವಂಚನೆಯ ಮೊತ್ತ 400 ಕೋಟಿ ರೂಪಾಯಿ ಆಗಿತ್ತು.


ಈ ತೆರಿಗೆ ವಂಚನೆಯ ಕಾರ್ಯಾಚರಣೆಯನ್ನು ರೆಡ್ಡಿ ಬಹಳ ಜಾಣತನದಿಂದ ನಡೆಸಿದ್ದ.

ಅದು ಹೇಗೆಂದರೆ ಕರ್ನಾಟಕದ ರೆಡ್ಡಿ- ಲಕ್ಷ್ಮೀ ಅರುಣಾ ದಂಪತಿಗಳ ಮಾಲೀಕತ್ವದ ಓಎಂಸಿ ಕಂಪೆನಿಯು ಸಿಂಗಾಪೂರ್‌ನಲ್ಲಿದ್ದ Man-go pub Ltd ಎಂಬ ಕಂಪೆನಿಗೆ ಕಬ್ಬಿಣದ ಅದಿರನ್ನು ಮೆಟ್ರಿಕ್ ಟನ್‌ಗೆ 76.14 ರಿಂದ 98.24 ಡಾಲರ್ ರೇಟಿನಲ್ಲಿ ಸರಬರಾಜು ಮಾಡುವ ಒಪ್ಪಂದ ಒಂದನ್ನು ಮಾಡಿಕೊಂಡಿತ್ತು. 2007ರ ಜನವರಿ 3 ರಂದು ಈ ಒಪ್ಪಂದ ಆಯಿತೆಂದು ದಾಖಲೆ ಸೃಷ್ಟಿಸಲಾಯಿತು.

ಇಲ್ಲೇ ಎರಡು ರೀತಿಯ ವಂಚನೆಗೆ ರೆಡ್ಡಿ ಪ್ಲಾನ್ ಮಾಡಿದ್ದ.

ಮೊದಲನೆಯದಾಗಿ ಈ ಒಪ್ಪಂದ ಆದಾಗ ಆವತ್ತಿನ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅದಿರಿನ ಬೆಲೆ 144ರಿಂದ 165 ಅಮೆರಿಕನ್ ಡಾಲರ್‌ನಷ್ಟಿತ್ತು. ಆದರೂ ಸಹ ರೆಡ್ಡಿ ಅದರ ಅರ್ಧ ರೇಟಿಗೆ ಅದಿರು ಸರಬರಾಜು ಮಾಡಲು ಒಪ್ಪಂದ ಮಾಡಿಕೊಂಡಿದ್ದ!

ಇಲ್ಲಿ ಗಮನಿಸಬೇಕಾದ ಎರಡನೆಯ ಹಾಗೂ ವಂಚನೆಯ ಮುಖ್ಯ ಅಂಶ ಏನಾಗಿತ್ತೆಂದರೆ ಸಿಂಗಾಪೂರ್‌ನಲ್ಲಿ Man-go pub Ltd ಕಂಪೆನಿಗೂ ಇದೇ ರೆಡ್ಡಿ ಬೇನಾಮಿ ಮಾಲೀಕನಾಗಿದ್ದ. ಈ ಒಪ್ಪಂದ ಆದಾಗ ರೆಡ್ಡಿ ಸಿಂಗಾಪೂರ ಕಂಪೆನಿಯಲ್ಲಿರಲಿಲ್ಲ, ಆದರೆ ಓಎಂಸಿ ಜೊತೆ ಅಗ್ರಿಮೆಂಟ್ ಆದನಂತರ Man-go pub Ltd ಕಂಪೆನಿ ತನ್ನ ಹೆಸರನ್ನು Man-go pub Ltd ಎಂದು ಬದಲಾಯಿಸಿಕೊಂಡಿತು. ಅದಾದ ನಂತರ ಇದೇ ಕಂಪೆನಿಯ ಹೆಸರು GLA Trading Corporation holding international Ltd ಎಂದು ಬದಲಾಯಿತು. ಇಲ್ಲಿದ್ದ ಜನಾರ್ದನ ರೆಡ್ಡಿ ಸಿಂಗಾಪೂರ್‌ನಲ್ಲಿರುವ ರೆಡ್ಡಿಯ ಒಡೆತನದ



GJR holding ಎಂಬ ಇನ್ನೊಂದು ಕಂಪೆನಿಗೆ ಮಾರುಕಟ್ಟೆ ದರಕ್ಕಿಂತ ಅರ್ಧ ರೇಟಿಗೆ ಅದಿರು ಸಾಗಿಸುತ್ತಿದ್ದ.

ಹೀಗೆ ಸಾಗಿಸಲಾದ ಅದಿರಿನ ಪ್ರಮಾಣವು ಒಟ್ಟು 30 ಲಕ್ಷ ಮೆಟ್ರಿಕ್ ಟನ್ ಆಗಿರಬಹುದೆಂದು ಅನುಮಾನಗಳಿವೆ. ಇಲ್ಲಿಂದ ವಿದೇಶಕ್ಕೆ ಅದಿರು ಸಾಗಿಸುವಾಗ ತೆರಿಗೆ ವಂಚಿಸುವ ಏಕೈಕ ಉದ್ದೇಶದಿಂದ ಹೀಗೆ ರೆಡ್ಡಿ ಕಡಿಮೆ ರೇಟಿಗೆ ಅದಿರು ಸರಬರಾಜು ಒಪ್ಪಂದ ಮಾಡಿಕೊಂಡಂತೆ ನಾಟಕವಾಡಿದ್ದ. ನಂತರ ಸಿಂಗಾಪೂರ್ ಕಂಪೆನಿಯು ಇನ್ನಿತರ ದೇಶ ಗಳಿಗೆ ಆವತ್ತಿನ ಅಸಲಿ ಮಾರ್ಕೆಟ್ ರೇಟಿಗೆ ಅದಿರು ಮಾರಿ ಬಂದ ಲಾಭವನ್ನು ರೆಡ್ಡಿ ಹೆಸರಲ್ಲೇ ವರ್ಜಿನ್ ಐಲ್ಯಾಂಡ್ ಮತ್ತಿತರ ದೇಶಗಳಲ್ಲಿ ಮುಚ್ಚಿಟ್ಟಿತು. ಕಪ್ಪು ಹಣದ ವ್ಯವಹಾರಕ್ಕೆ ಕುಖ್ಯಾತ ದೇಶ ಅದು.

2010 ರ ಐಟಿ ದಾಳಿಯಲ್ಲಿ ರೆಡ್ಡಿ ನಡೆಸಿರುವ ಈ ಅಕ್ರಮಗಳೆಲ್ಲಾ ಬಯಲಿಗೆ ಬಂದಿವೆ. ಈಗ ಅದರ ಕಾನೂನುಬದ್ಧ ವಿಚಾರಣೆ ಶುರುವಾಗಿದೆಯಷ್ಟೆ.


ಆಡಿಟರ್ ರೇಣುಕಾ

ಅವತ್ತು ದಾಳಿ ನಡೆದ ದಿನ

"ನಾನು ಗೋಲಿ ಆಡುತ್ತಿದ್ದ ದಿನದಿಂದಲೂ ಯಾವುದರಲ್ಲೂ ಸೋತಿಲ್ಲ" ಎಂದು ಜಂಭ ಕೊಚ್ಚಿಕೊಳ್ಳುತ್ತಿದ್ದ ಗಾಲಿ ಜನಾರ್ದನ ರೆಡ್ಡಿಯನ್ನು ತೆರಿಗೆ ಅಧಿಕಾರಿ ರಾಜೇಶ್ವರರಾವ್ ಅದು ಹೇಗೆ ಚಾಟಿ ಇಲ್ಲದೆ ಬುಗುರಿಯಾಡಿಸಿದರೆಂಬುದು ರೋಚಕ ಘಟನೆ.

ರೆಡ್ಡಿ ಗ್ಯಾಂಗ್‌ನ ಆಟಾಟೋಪ ದುಡ್ಡಿನ ಗಾಂಚಾಲಿಗಳನ್ನೆಲ್ಲ ಮೌನವಾಗಿ ಗಮನಿಸುತ್ತಿದ್ದ ರಾಜೇಶ್ವರ ರಾವ್ ಆದಾಯ ತೆರಿಗೆ ಇಲಾಖೆಯ ಕರ್ನಾಟಕ-ಗೋವಾ ವ್ಯಾಪ್ತಿಯ ಮುಖ್ಯಸ್ಥರಾಗಿದ್ದರು. ಅವರು 2010ರ ಅಕ್ಟೋಬರ್ 25ರ ಬೆಳಗ್ಗೆ ರೆಡ್ಡಿಯ ಅಡ್ಡೆಗಳ ಮೇಲೆ ದಾಳಿ ನಡೆಸಲು ನಿರ್ಧರಿಸಿಕೊಂಡಿದ್ದರು. ಅದಕ್ಕಾಗಿ ಚೆನ್ನೈ, ಬೆಂಗಳೂರಿನ ಮುನ್ನೂರಕ್ಕೂ ಹೆಚ್ಚು ಅಧಿಕಾರಿಗಳನ್ನು ಕರೆಸಿಕೊಳ್ಳಲು ಅರೆಂಜ್ ಮಾಡಿದ್ದರು...

ಜೊತೆಗೆ ಇಂಡೋ ಟಿಬೆಟ್‌ನ ಪೊಲೀಸ್, ಸಿಆರ್‌ಪಿಎಫ್ ಪೊಲೀಸ್ ಬೆಟಾಲಿಯನ್‌ಗಳನ್ನು ಕರೆಸಲಾಗಿತ್ತು. ಅವತ್ತು ಅಕ್ಟೋಬರ್ 25ರ ಬೆಳಗ್ಗೆ ಅಧಿಕಾರಿಗಳ ತಂಡ ಬಳ್ಳಾರಿಗೆ ಬಂದಿಳಿದಾಗ ರಾಜೇಶ್ವರರಾವ್ ಬಹುತೇಕ ಅಧಿಕಾರಿಗಳನ್ನು ರೆಡ್ಡಿ ಮನೆಗೆ ಕಳುಹಿಸದೆ ಆಲಿಖಾನ್ ಹಾಗೂ ಮಧುಸೂದನ ಎಂಬುವರ ಮನೆ ಮೇಲೆ ದಾಳಿ ಮಾಡುವಂತೆ ಕಳಿಸಿದರು! ಇವರಿಬ್ಬರೂ ರೆಡ್ಡಿಯ ಆಪ್ತ ಸಹಾಯಕರಾಗಿದ್ದರು!!

ಏನಾಗಿತ್ತೆಂದರೆ ಈ ರೆಡ್ಡಿಯ ನರಿ ಬುದ್ಧಿ ಎಂತದ್ದೆಂ[...] ಗೊತ್ತಿದ್ದ ರಾಜೇಶ್ವರ ರಾವ್ ದಾಳಿಯ ಹಿಂದಿನ ದಿನ[...] ಹೀಗೊಂದು ಇನ್‌ಕಮ್ ಟ್ಯಾಕ್ಸ್ ರೇಡ್ ನಡೆಯಲ[...] ಎನ್ನುವ ಸುದ್ದಿಯನ್ನು ತಾನೇ ರೆಡ್ಡಿಗೆ ತಲುಪುವ[...] ಮಾಡಿದ್ದರು.

ಆಗ ಕಂಗಾಲಾದ ರೆಡ್ಡಿ ತನ್ನೆಲ್ಲ ಅಕ್ರಮ ವ್ಯವಹಾರ[...] ದಾಖಲೆಗಳನ್ನು ಹೈದರಾಬಾದಿಗೆ ಸಾಗಿಸಲು ತರಾತುರಿಯ[...] ವ್ಯವಸ್ಥೆ ಮಾಡಿಕೊಂಡ. ಬೆಂಗಳೂರಿನಿಂದ ಬಂದು ಸ್ಪೆಷ[...] ಚಾರ್ಟೆಡ್ ವಿಮಾನವನ್ನು ಬಳ್ಳಾರಿಯ ಜಿಂದಾ[...] ಏರ್‌ಪೋರ್ಟ್‌ಗೆ ತರಿಸಲು ಅರೆಂಜ್ ಮಾಡಿದ. ತನ್ನ[...] ದಾಖಲೆಗಳನ್ನು ಐದು ಇನ್ನೋವಾ ಕಾರುಗಳಿಗೆ ತುಂ[...] ವಿಮಾನಕ್ಕಾಗಿ ಕಾಯುತ್ತಿದ್ದಾಗ ಆ ವಿಮಾನ ಸರಿಯ[...] ಟೈಂಗೆ ಬರಲೇ ಇಲ್ಲ. ಈ ರಾಜೇಶ್ವರ ರಾವ್ [...] ಮಾಡಿದ್ದರೆಂದರೆ ಈ ವಿಮಾನದ ಟೇಕ್ ಆಫ್ ಹಾ[...] ಬಳ್ಳಾರಿಯಲ್ಲಿ ಲ್ಯಾಂಡಿಂಗ್‌ಗೆ ಅನುಮತಿ ಸಿಗ[...] ತಡವಾಗುವಂತೆ ನೋಡಿಕೊಂಡಿದ್ದರು. ಯಾವಾಗ ವಿಮ[...] ಸರಿಯಾದ ಟೈಮ್‌ಗೆ ಬರಲಿಲ್ಲವೋ ರೆಡ್ಡಿ ಇನ್ನ[...] ಗಾಬರಿಯಾಗಿ ತನ್ನ ದಾಖಲೆಗಳನ್ನೆಲ್ಲ ಆಲಿ ಖಾನ್ ಹಾ[...] ಮಧುಸೂದನರ ಮನೆಗಳಿಗೆ ಸಾಗಿಸಿದ. ನಂತರ ಏ[...] ಅರಿಯದ ಮುಗ್ಧನಂತೆ ಮನೆಗೆ ಬಂ[...] ಮಲಗಿಬಿಟ್ಟ.

ನಿರೀಕ್ಷಿಸಿದಂತೆ ಅಕ್ಟೋಬರ್ [...]ರ ಬೆಳ್ಳಂಬೆಳಗ್ಗೆ ದಾಳಿಗೆ ಅಧಿಕಾರಿಗ[...] ಬಂದಾಗ ರೆಡ್ಡಿ ನಸುನಗುತ್ತಾ ಎಲ್ಲರ[...] ಸ್ವಾಗತಿಸಿದ. ಅಧಿಕಾರಿಗಳಿಗೆ ಅಲ್ಲೇ[...] ಮುಖ್ಯ ದಾಖಲೆಗಳು ಸಿಗಲಿಲ್ಲ.

ಆದರೆ ಅದಾದ ಅರ್ಧ ಗಂಟೆಯ[...] ರೆಡ್ಡಿಯ ನಸುಗುನ್ನಿ ನಗು ಅಳಿಸಿಹೋಯಿ[...]

ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳು ಆಲಿಖಾ[...] ಮತ್ತು ಮಧುಸೂದನರ ಮನೆಗಳ ಮೇಲೂ ರೇ[...] ಮಾಡಿದ್ದಾರೆಂಬ ಸುದ್ದಿ ರೆಡ್ಡಿಗೆ ತಲುಪಿತ್ತು. ಕಿಲಾಡಿ ರಾಜೇ[...] ರಾವ್ ದಾಳಿಯ ಸುದ್ದಿ ಮೊದಲೇ ಲೀಕ್ ಮಾಡಿ [...] ರೆಡ್ಡಿ ಎಲ್ಲೆಲ್ಲಿಗೆ ಏನೇನು ಸಾಗಿಸುತ್ತಿದ್ದಾನೆಂದು ತಿಳಿಯ[...] ಹದ್ದಿನ ಕಣ್ಣಿಟ್ಟು ಕಾದಿದ್ದರು.

ಅವರ ಲೆಕ್ಕಾಚಾರದಂತೆಯೇ ರೆಡ್ಡಿ ವರ್ತಿಸಿ ಸಿಕ್ಕುಬಿದ್[...]

ಇದೆಲ್ಲ ಸಿನಿಮಾ ಕತೆ ತರಹ ಭಾಸವಾಗುತ್ತದೆ. ಆ[...] ರೆಡ್ಡಿಯ ಪಾಲಿಗೆ ಇದೆಲ್ಲ ದುರಂತ ಕತೆಯೇ ಆಗಿದೆ[...]

ರೆಡ್ಡಿಯ ಆರ್ಥಿಕ ಅಪರಾಧಗಳೆಲ್ಲ ನಾಳೆ ಸಾಬೀತಾ[...] ತೆರಿಗೆ ವಂಚನೆಯ ಮೊತ್ತದ ಮುನ್ನೂರು ಪಟ್ಟು ದ[...] ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ. ಜೊತೆಗೆ ಜೈ[...] ಶಿಕ್ಷೆಯೂ ಕಾದಿರುತ್ತದೆ. ರೆಡ್ಡಿಯ ಆಸ್ತಿಗಳೂ [...] ಮುಟ್ಟುಗೋಲಾಗಬಹುದು.

ರೆಡ್ಡಿಯ ಬಂಟರಾದ ಆಲಿಖಾನ್, ಆಡಿಟರ್ ರೇಣು[...] ಮುಂತಾದವರೆಲ್ಲ ಈಗಾಗಲೇ ಸಿಬಿಐ ಬಲೆಗೆ ಸಿಕ್ಕಿಬಿದ್ದಿದ[...]

ಜನಾರ್ದನ ರೆಡ್ಡಿ ಆಗ ಉಪ್ಪು ತಿಂದ. ಈಗ ನ[...] ಕುಡಿಯುತ್ತಿದ್ದಾನೆ.

ಕುಡಿಯುತ್ತಿರಲಿ ಬಿಡಿ.

• ಪಾರ್ವತಿ[...]

ಸಹವಾಸ ದೋಷದಿಂದ ಸನ್ಯಾಸಿ ಕೆಟ್ಟ ಕಳ್ಳರ ಸಹವಾಸದಿಂದ ನ್ಯಾಯಾಧೀಶ ಕೆಟ್ಟ


"ಇನ್ನೇನು ಜನಾರ್ದನ ರೆಡ್ಡಿ ಜೈಲಿಂದ ಆಚೆ ಬರ್ತಾನೆ. ಆಮೇಲೆ ನೋಡಿರಿ- ಕರ್ನಾಟಕದಲ್ಲಿ ಏನೇನಾಗುತ್ತೆ" ಎನ್ನುತ್ತಾ ಕಾತರದಿಂದ ಕಾಯುತ್ತಿದ್ದ ರೆಡ್ಡಿಯ ಚೇಲಾಗಳಿಗೀಗ ಭರ್ತಿ ನಿರಾಶೆ.

ರೆಡ್ಡಿಗೆ ಕೆಳಹಂತದ ಸಿಬಿಐ ಕೋರ್ಟ್ ಜಾಮೀನು ಕೊಟ್ಟಿತಾದರೂ ರೆಡ್ಡಿ ಮಾತ್ರ ಹೊರಗೆ ಬರಲಾಗಲಿಲ್ಲ. ಅದರ ಬದಲಾಗಿ ರೆಡ್ಡಿಗೆ ಜಾಮೀನು ಕೊಟ್ಟ ನ್ಯಾಯಾಧೀಶ ಪಟ್ಟಾಭಿರಾಮ ರಾವ್‌ನೇ ಈಗ ಜೈಲು ಪಾಲಾಗಿದ್ದಾನೆ.

ಇದೊಂತರಾ ಸಹವಾಸ ದೋಷದಿಂದ ಸನ್ಯಾಸಿ ಕೆಟ್ಟನಂತೆ ಅನ್ನುವ ಹಾಗೆ ಕಳ್ಳರ ಸಹವಾಸ ಮಾಡಿ ನ್ಯಾಯಾಧೀಶನೇ ಕೆಟ್ಟ ಪ್ರಕರಣ.

ಎಂಟು ತಿಂಗಳ ಜೈಲುವಾಸ ರೆಡ್ಡಿಯನ್ನು ಖಂಡಿತಾ ಸುಸ್ತು ಮಾಡಿದೆ. ಅವನೀಗ ಏನಾದರೂ ಮಾಡಿ ಹೇಗಾದರೂ ಸರಿ ಜೈಲಿನಿಂದ ಆಚೆ ಬರಬೇಕಿದೆ.

ಅದಕ್ಕೆ ರೆಡ್ಡಿ ಗ್ಯಾಂಗ್ ಹುಡುಕಿದ ದಾರಿ ಏನೆಂದರೆ ಸಿಬಿಐ ನ್ಯಾಯಾಧೀಶನಿಗೆ 10 ಕೋಟಿ ರೂಪಾಯಿ ಲಂಚ ತಿನ್ನಿಸಿ ಜಾಮೀನು ಪಡೆಯುವ ಪ್ಲಾನ್.


ಲಕ್ಷ್ಮೀನಾರಾಯಣ

ಆದರೆ ಸಿಬಿಐನ ದಕ್ಷಿಣ ಭಾರತದ ಉಸ್ತುವಾರಿ ಹೊತ್ತಿರುವ ಜಾಯಿಂಟ್ ಡೈರೆಕ್ಟರ್ ಲಕ್ಷ್ಮೀನಾರಾಯಣರ ಕದುಜಾಣತನವಿದೆಯಲ್ಲ ಅದು ಘೂಡಲ್ ಹಿನ್ನೆಲೆಯ ತೆಪರಾ ಗಾಲಿ ರೆಡ್ಡಿಗೆ ಇವತ್ತಿಗೂ ಅರ್ಥವಾಗಿಲ್ಲ. ಈ ಹಿಂದೆ ಇನ್‌ಕಮ್ ಟ್ಯಾಕ್ಸ್ ದಾಳಿಯಾದಾಗಲೂ ಆಫೀಸರ್ ರಾಜೇಶ್ವರರಾವ್ ಹಾಕಿದ್ದ ಟ್ರಾಪ್‌ನೊಳಗೆ ಸಲೀಸಾಗಿ ಬಿದ್ದಿದ್ದ ಈಗ ಜಾಮೀನಿನ ಡೀಲ್‌ನಲ್ಲೂ ಸಿಬಿಐನ ಲಕ್ಷ್ಮೀನಾರಾಯಣನ ಬಲೆಗೆ ರೆಡ್ಡಿ ಮತ್ತೆ ಸಿಕ್ಕಿ ಬಿದ್ದಿದ್ದಾನೆ.

ಆಂಧ್ರದ ಕಾನೂನು ಸಚಿವ ರಾಮಚಂದ್ರ ರೆಡ್ಡಿ ಗಾಲಿ ಜನಾರ್ದನ ರೆಡ್ಡಿ[...] ನೆಂಟ. ಅವನ ಮೂಲಕ ಆಂಧ್ರದ ನಿವೃತ್ತ ನ್ಯಾಯಾಧೀಶ ಚಲಪತಿರಾವ್‌ರ ಲಿಂ[...] ಪಡೆದ ಎಮ್ಮೆಕರ ಸೋಮಶೇಖರ ರೆಡ್ಡಿ ಹಾಗೂ ಕಂಪ್ಲಿ ಶಾಸಕ ಸುರೇಶ್ ಬಾ[...] ಅಲ್ಲಿಂದ ಸೀದಾ ಸಿಬಿಐ ನ್ಯಾಯಾಧೀಶನ ಮಗ ರವಿಚಂದ್ರನ ಹತ್ತಿರ ತಲುಪಿಕೊಂಡ[...] ಇದೆಲ್ಲಾ ನಡೆಯುವಾಗ ಹೈದರಾಬಾದಿನ ನಾಚಾರಾಂನ ಕುಖ್ಯಾತ ರೌಡಿ ಯಾದಗಿರಿಯ[...] ಜೊತೆಗೂಡಿದ್ದ. ಈ ಸಿಬಿಐನವರು ಅದೆಂತಾ ಕಿಲಾಡಿಗಳೆಂದರೆ ಈ ಖದೀಮ[...] ಗುಂಪು ಹೈದರಾಬಾದಿನ ಬಂಜಾರ ಹಿಲ್ಸ್‌ನಲ್ಲಿರುವ ಲಿಡಕಿ-ಕಿ-ಪೂಲ್ ಹೋಟೆಲ್‌[...] ಭೇಟಿಯಾಗಿ ಡೀಲ್ ಕುದುರಿಸಿರುವ ಸಿಸಿ ಟಿವಿ ಫುಟೇಜ್‌ಗಳನ್ನು ಸಾಕ್ಷಿಯಾಗಿ ಪ್ರದರ್ಶಿ[...]


ಈ ಡೀಲ್ ಮಾಸ್ಟರ್‌ಗಳ ಮೊಬೈಲ್ ಫೋನ್‌ಗಳ ವಿವರಗಳನ್ನೆಲ್ಲ [...] ಹಾಕಿದೆ. ನ್ಯಾಯಾಧೀಶ ಪಟ್ಟಾಭಿರಾಮ್ ರಾವ್‌ನ ಗೆಣೆಕಾರ ನಿ[...] ನ್ಯಾಯಾಧೀಶ ಚಲಪತಿರಾವ್ ಕಾರ್ಪೊರೇಷನ್ ಬ್ಯಾಂಕ್‌ನಲ್ಲಿ ಹೊಸದಾ[...] 5 ಲಾಕರ್ ಪಡೆದಿದ್ದನ್ನು ಪತ್ತೆ ಹಚ್ಚಿದೆ. ಆ ಲಾಕರ್‌ಗಳನ್ನು ನ್ಯಾಯಾಧಿ[...] ಪಟ್ಟಾಭಿಯ ಮಗ ರವಿಚಂದ್ರನ್ ಆಪರೇಟ್ ಮಾಡುತ್ತಿದ್ದ ಅದೇ ಲಾಕರ್‌ಗ[...] ರೆಡ್ಡಿ ಕಳುಹಿಸಿದ್ದ ಲಂಚದ ಹಣದ ಪೈಕಿ 2.94 ಕೋಟಿ ರೂಪಾ[...] ಸಿಕ್ಕಿದ್ದು.

ಅಂದಹಾಗೆ ಈ ಡೀಲ್‌ನಲ್ಲಿ ಮಧ್ಯವರ್ತಿಗಳು ಆರು ಕೋಟಿ ರೂಪಾ[...] ತಿಂದು ಹಾಕಿದ್ದಾರಂತೆ.

ಗಾಲಿ ರೆಡ್ಡಿಯ ಸೋದರ ಸೋಮಶೇಖರ್ ರೆಡ್ಡಿ ಅದೆಂತಾ 'ಪ್ರತಿಭಾವ[...] ನೆಂದರೆ ಮೇ 11ರ ಸಂಜೆ ನ್ಯಾಯಾಧೀಶ ಪಟ್ಟಾಭಿ ರೆಡ್ಡಿಗೆ ಜಾಮೀ[...] ಕೊಟ್ಟ ತಕ್ಷಣ ಈ ಸೋಮರೆಡ್ಡಿ ಬೇಲ್ ಕಂಡೀಷನ್‌ಗಳನ್ನೆಲ್ಲಾ ಪೂರೈಸಲು ವ್ಯ[...] ಮಾಡಿಬಿಟ್ಟ. ಅಂದರೆ ಜಾಮೀನಿನ ಶರತ್ತುಗಳ ಬಗ್ಗೆ ರೆಡ್ಡಿ ಗ್ಯಾಂಗ್‌ಗೆ ಮೊದ[...] ತಿಳಿದಿತ್ತು ಎಂಬ ಅನುಮಾನ ಬರುವಂತೆ ಇವರು ವರ್ತಿಸಿದರು.

ಮೊದಲೇ ಅನುಮಾನವಿದ್ದ ಸಿಬಿಐನವರು ಮಾಡಬೇಕಾದ ರೀತಿಯಲ್ಲೇ ತ[...] ಮಾಡಿ ಈಗ ಕಳ್ಳ ರೆಡ್ಡಿಯ ಹಣ ತಿಂದವರನ್ನು ಜೈಲಿಗೆ ದಬ್ಬಿದ್ದಾರೆ.

ನಿರಾಣಿಯ ಗೂಂಡಾಗಿರಿ



ಯಡ್ಡಿಯ ಪರಮಾಪ್ತ

ೆ ಗೂಂಡಾಗಳು, ದರೋಡೆಕೋರರ ಶೈಲಿಯೇ ಅವು ದಾಳಿಗೆ ಗುರಿಯಾಗುವ ಅಮಾಯಕರನ್ನು ವಾಗಿ ಸಿಕ್ಕಿಸಿಕೊಂಡು ದಾಳಿ ಎಸಗುತ್ತಾರೆ. ಮೊನ್ನೆ ತಾಲೂಕಿನ ಮಂಟೂರು ಎಂಬ ಗ್ರಾಮದಲ್ಲಿ ನಡೆದಿತ್ತು. ಶಿವಾನಂದ ತಿಮ್ಮಸಾನಿ ಎಂಬ ೈತ ಮುಖಂಡನ ತೋಟದ ಮನೆಗೆ ನುಗ್ಗಿದ ಗಳು ಆತನ ಮೇಲೆ ಹಲ್ಲೆ ನಡೆಸಿದರು, ದಮಕಿ ರು. ಆದರೆ ಈ ಗೂಂಡಾ ಗುಂಪು ಲಿಯದಲ್ಲಿ, ಕರ್ನಾಟಕ ಸರ್ಕಾರದ ಕೈಗಾರಿಕಾ ಮತ್ತು ಆತನ ಕಾವಲು ಪಡೆಯವರು. ಈ ಘಟನೆ ಬಳಿಕ ತೀವ್ರ ಆತಂಕಕ್ಕೊಳಗಾಗಿದ್ದ ಶಿವಾನಂದ ನಿ ನಾಪತ್ತೆಯಾಗಿದ್ದಾನೆ. ಆತನ ಮೊಬೈಲ್ ್ ಆಗಿದೆ. ಆತನ ಜೀವಕ್ಕೆ ಅಪಾಯವಿದೆ ಎಂದು ಅಪ್ತರು ಆತಂಕ ವ್ಯಕ್ತಪಡಿಸಿದ್ದಾರೆ.

ಘಟನೆ ಬಗ್ಗೆ ವರದಿ ಮಾಡಿರುವ ನಮ್ಮ ಗಳು ಇದೊಂದು ದಾರಿಜಗಳವೆಂಬ ಚಿತ್ರಣ ಕೈತೊಳೆದುಕೊಂಡಿದ್ದಾರೆ. ಆದರೆ ನಿರಾಣಿಯ ಗಿರಿ ಕತೆಯ ಹಿಂದೆ ಉತ್ತರ ಕರ್ನಾಟಕದ ಶುಗರ್ ಮಾಲಿಕರ ಅಟ್ಟಹಾಸವಿದೆ. ಅದರಡಿ ನಲುಗಿರುವ ಳೆಗಾರರ ಕಣ್ಣೀರಿದೆ.

ದು. ಇದು ಆಶ್ಚರ್ಯವೆನಿಸಿದರೂ ಸತ್ಯ.

ಿದ ಕೆಲವು ವರ್ಷಗಳಿಂದ ಬಾಗಲಕೋಟೆ, ಬೆಳಗಾಂ ಬಿಜಾಪುರ ಭಾಗದ ಕಬ್ಬು ಬೆಳೆಗಾರರು ಒಂದು ಬ್ಬಿಗೆ 2200 ರೂಪಾಯಿ ಕನಿಷ್ಟ ಬೆಲೆ ನಿಗದಿ ಕೆಂದು ಒತ್ತಾಯಿಸಿ ಹೋರಾಟ ನಡೆಸಿದ್ದಾರೆ. ಮತ್ತು ಫ್ಯಾಕ್ಟರಿ ಮಾಲಿಕರು ಮತ್ತು ನಡುವೆ ಮಾತುಕತೆಯಲ್ಲಿ ಟನ್‌ಗೆ 2000 ಕೊಡುವುದಾಗಿ ಿ ಒಪ್ಪಿಕೊಂಡರು. ಆ ಸಭೆಯಲ್ಲಿ ಸ್ವತಃ ಶುಗರ್ ಿ ಮಾಲಿಕನಾಗಿರುವ ನಿರಾಣಿಯೂ ಹಾಜರಿದ್ದ. ಒಪ್ಪಿಗೆ ಸೂಚಿಸಿದ್ದ ನಂತರ ಉಲ್ಟಾ ಹೊಡೆದ ನಾನು ಕೊಡುವುದೇ 1800 ಎಂದು ಹಟಕ್ಕೆ ದನ್ನು ಪ್ರತಿಭಟಿಸಿ ಹೋರಾಟಕ್ಕೆ ಇಳಿದ ರೈತರ ಗೂಂಡಾಗಿರಿ ನಡೆಸಿದ. ಸುಳ್ಳು ಕೇಸುಗಳನ್ನು ಮಟ್ಟಹಾಕಲು ಪ್ರಯತ್ನಿಸಿದ.

ಗೂಂಡಾ ನಿರಾಣಿಯ ತಿಮಿರು ಎಷ್ಟು ಹೆಚ್ಚಾಗಿದೆ ಈ ಭಾಗದಲ್ಲಿರುವ ಸುಮಾರು 40ಕ್ಕೂ ಹೆಚ್ಚು ಳು ಒಂದು ಟನ್‌ಗೆ 2000 ರೂಪಾಯಿ ದರ ದ್ದಾರೆ. ಆದರೆ ಇದನ್ನು ನಿರಾಕರಿಸಿ 1800 ಕ್ಕಿಂತ ಒಂದು ನಯಾಪೈಸೆಯೂ ಹೆಚ್ಚು ಕೊಡುವುದಿಲ್ಲವೆಂದು ಸೆಡ್ಡು ಹೊಡೆದು ಕೂತಿರುವ ಏಕೈಕ ಕಂಪನಿಯೆಂದರೆ ಅದೇ ನಿರಾಣಿ ಶುಗರ್ಸ್ ಮಾತ್ರ.

ಆದರೆ ಕಟು ವಾಸ್ತವವೇನೆಂದರೆ ರೈತರು ತಾವು ಬದುಕುಳಿಯಲು ಬೇಕಿರುವ ಕನಿಷ್ಠ ದರವನ್ನಷ್ಟೇ ಕೇಳುತ್ತಿದ್ದಾರೆ. ಅದೇ ಸಂದರ್ಭದಲ್ಲಿ ನಿರಾಣಿಯ ಶುಗರ್ ಫ್ಯಾಕ್ಟರಿ ಕೋಟ್ಯಾಂತರ ರೂಪಾಯಿ ಲಾಭ ಗಳಿಸುತ್ತಿದೆ. ಹೀಗಾಗಿ ರೈತರ ಅಲ್ಪ ಬೇಡಿಕೆಯನ್ನು ಈಡೇರಿಸಲು ನಿರಾಣಿಯ ದುರಾಸೆಯನ್ನು ಹೊರತುಪಡಿಸಿ ಯಾವ ಅಡ್ಡಿಯೂ ಇರಲಿಲ್ಲ. ಸರ್ಕಾರದ ಆಯಕಟ್ಟಿನ ಜಾಗದಲ್ಲಿ ಕೂತಿರುವ ನಿರಾಣಿ ಬಾಚುತ್ತಿರುವ ಗಂಟೇನೂ ಕರಗಿಬಿಡುತ್ತಿರಲಿಲ್ಲ.

ನ್ಯಾಯಯುತ ಬೆಲೆಗಾಗಿ ಹೋರಾಡುತ್ತಿದ್ದ ರೈತರು ರೈತನಾಯಕ ಗಡೆದ್ದನವರ್ ನಾಯಕತ್ವದಲ್ಲಿ ಹೋರಾಟ



ಮುಂದುವರೆಸಿದರು. ಈ ಎಲ್ಲಾ ಹೋರಾಟಗಳಲ್ಲಿ ಮುಂಚೂಣಿಯಲ್ಲಿ ನಿಂತಿರುವ ಮತ್ತೊಬ್ಬ ಯುವ ನಾಯಕನೇ ಶಿವಾನಂದ ತಿಮ್ಮಸಾನಿ. ಈತನ ನಾಯಕತ್ವದಲ್ಲಿ ರೈತರು ನಿರಾಣಿ ಫ್ಯಾಕ್ಟರಿಗೆ ಕಬ್ಬು ಸರಬರಾಜನ್ನು ನಿಲ್ಲಿಸಿದರು. ಈ ಮಧ್ಯೆ ನಿರಾಣಿ ಕಂಪನಿಯ ಮತ್ತೊಂದು ಸಮಸ್ಯೆಯೂ ಜೊತೆ ಸೇರಿಕೊಂಡಿತು. ಮುಧೋಳ ಪಟ್ಟಣದ ಸಮೀಪವೇ ಇರುವ ನಿರಾಣಿ ಕಂಪನಿ ಭಾರೀ ಪರಿಸರ ಮಾಲಿನ್ಯ ಉಂಟುಮಾಡುತ್ತಿದೆ. ಫ್ಯಾಕ್ಟರಿಯಿಂದ ಹೊರಬರುವ ಕಪ್ಪು ಹೊಗೆಯಿಂದಾಗಿ ಜನರಿಗೆ ಉಸಿರಾಡುವುದೂ ಕಷ್ಟವೆನಿಸುತ್ತಿದೆ. ಈ ಹಿನ್ನೆಲೆಯಲ್ಲಿ ಮುಧೋಳ ಪಟ್ಟಣದ ನಾಗರಿಕರು ಸಹ ಹೋರಾಟಕ್ಕಿಳಿದರು. ಈ ಹೋರಾಟಕ್ಕೆ ಮುಧೋಳ ಪಟ್ಟಣದಲ್ಲಿ ವಾಸಿಸುವ ಕೆಲವು ಶುಗರ್ಸ್ ಫ್ಯಾಕ್ಟರಿಯ ಮಾಲಿಕರು ಜೊತೆ ಸೇರಿಕೊಂಡಿದ್ದಾರೆ. ಹೀಗೆ ಮುಧೋಳ ಪಟ್ಟಣದಲ್ಲಿ ನಡೆದ ಬೈಕ್ ರ್‍ಯಾಲಿಯ ಮೇಲೆ ನಿರಾಣಿ ಹೊರಗಿನಿಂದ ಕರೆಸಿದ್ದ ಬಾಡಿಗೆ ಗೂಂಡಾಗಳು ದಾಳಿ ನಡೆಸಿದರು. ಸುಮಾರು 15 ಬೈಕ್‌ಗಳನ್ನು ಸುಟ್ಟು ಹಾಕಿದ್ದಲ್ಲದೆ, ಒಂದು ಪೊಲೀಸ್ ಜೀಪಿಗೂ ಬೆಂಕಿ ಇಟ್ಟರು. ಪರಿಣಾಮವಾಗಿ ರೈತರ ಮೇಲೆ ಮತ್ತಷ್ಟು ಕೇಸುಗಳು ಬಿದ್ದವು.

ಈ ನಿರಾಣಿ ಶುಗರ್ಸ್‌ನ ರಾಜಕೀಯದ ಜೊತೆಗೆ ಜಾತಿರಾಜಕೀಯದ ಒಂದು ಆಯಾಮವೂ ಸೇರಿಕೊಂಡಿದೆ. ನಿರಾಣಿ ಫ್ಯಾಕ್ಟರಿಯ ಫಾಸಲೆಯಲ್ಲಿ ಹೆಚ್ಚಿನ ರೈತರು ರೆಡ್ಡಿ ಜನಾಂಗಕ್ಕೆ ಸೇರಿದವರು. ಆ ಪ್ರದೇಶ ಮುಧೋಳ ಮೀಸಲು ಕ್ಷೇತ್ರದಡಿ ಬರುತ್ತಿದ್ದು ಅದನ್ನು ಮಂತ್ರಿ ಗೋವಿಂದ ಕಾರಜೋಳ ಪ್ರತಿನಿಧಿಸುತ್ತಿದ್ದಾನೆ. ಆದರೆ ಕ್ಷೇತ್ರದಲ್ಲಿ ಬಲಾಢ್ಯರಾಗಿರುವ ರೆಡ್ಡಿಗಳ ಮಾತನ್ನು ಮೀರಿ ತನ್ನ ಸೋಲನ್ನು ತಾನೇ ಆಹ್ವಾನಿಸಿಕೊಳ್ಳುವುದು ಕಾರಜೋಳನಿಗೆ ಬೇಕಿಲ್ಲ. ನಿರಾಣಿ ಪಂಚಮಸಾಲಿ ಲಿಂಗಾಯತ ಜಾತಿಗೆ ಸೇರಿದ್ದು ಆ ಭಾಗದಲ್ಲಿ ಈ ಎರಡು ಪ್ರಮುಖ ಜಾತಿಯ ಪುಢಾರಿಗಳ ನಡುವೆ ಮೊದಲಿನಿಂದಲೂ ತಿಕ್ಕಾಟ ಇದ್ದೇ ಇದೆ. ಮತ್ತೊಂದು ಕಡೆ ಕಾರಜೋಳ ಯಡಿಯೂರಪ್ಪ ವಿರೋಧಿ ಬಣದಲ್ಲಿ ಗುರುತಿಸಿಕೊಂಡಿದ್ದರೆ, ನಿರಾಣಿ ಯಡ್ಡಿಯ ಪರಮಾಪ್ತ.

ಈಗ ನಿರಾಣಿಯಿಂದ ದಾಳಿಗೆ ಒಳಗಾದ ಶಿವಾನಂದ ರೆಡ್ಡಿ ಜಾತಿಗೆ ಸೇರಿದ್ದಾನೆ. ಮಾತ್ರವಲ್ಲದೆ ನಿರಾಣಿಯ ಫ್ಯಾಕ್ಟರಿಯ ಸಮೀಪದಲ್ಲೇ ಇರುವ ಮಂಟೂರು ಆತನ ಸ್ವಂತ ಊರು. ಆದ್ದರಿಂದ ಸಹಜವಾಗಿಯೇ ತನ್ನ ಹಾದಿಗೆ ಅಡ್ಡವಿರುವ ಶಿವಾನಂದನ ಬಗ್ಗೆ ಮೊದಲೇ ಕೆಂಡಕಾರುತ್ತಿದ್ದ ನಿರಾಣಿ ಆವೇಶಭರಿತನಾಗಿ ಆತನ ಮೇಲೆ ನೇರ ದಾಳಿಗೆ ಮುಂದಾಗಿದ್ದಾನೆ. ಈ ಗೂಂಡಾಗಿರಿಯನ್ನು ಖಂಡಿಸಿ ಮುಧೋಳ ಬಂದ್ ಮಾಡಿ ಪ್ರತಿಭಟಿಸಿದ ರೈತರ ಒತ್ತಾಯಕ್ಕೆ ಮಣಿದು ಅಂತಿಮವಾಗಿ ಪೊಲೀಸರು ನಿರಾಣಿಯ ಮೇಲೆ ಎಫ್‌ಐಆರ್ ಹಾಕಿದ್ದಾರೆ.

ಈ ಜಾತಿಜಗಳದ ಮುಂದುವರೆದ ಭಾಗವಾಗಿ ಪಂಚಮಸಾಲಿ ಜಾತಿ ಮಠದ ಜಯಮೃತ್ಯುಂಜಯ ಸ್ವಾಮಿ ನಿರಾಣಿ ಬೆಂಬಲಕ್ಕೆ ಬಹಿರಂಗವಾಗಿ ನಿಂತು ಹೋರಾಟಗಾರರ ವಿರುದ್ಧ ಆಕ್ರೋಶ ತೋರಿಸಿದ್ದಾರೆ.

ಇಷ್ಟೆಲ್ಲಾ ನಡೆದರೂ ನಿರಾಣಿ ಶುಗರ್ಸ್ ಬಾಕಿ ಉಳಿಸಿಕೊಂಡಿರುವ ಸುಮಾರು 70-80 ಕೋಟಿಗಳನ್ನು ಇನ್ನೂ ರೈತರಿಗೆ ಪಾವತಿ ಮಾಡಿಲ್ಲ. ತಮ್ಮ ಬದುಕು ಮೂರಾಬಟ್ಟೆಯಾಗಿರುವ ರೈತರಿಗೂ ಇದರ ವಿರುದ್ಧ ಹೋರಾಟ ಮಾಡದೆ ಬೇರೆ ವಿಧಿಯಿಲ್ಲ. ಹೀಗಾಗಿ ರೈತರ ಗೋಳು ಸದ್ಯಕ್ಕೆ ಬಗೆಹರಿಯುವ ಲಕ್ಷಣಗಳು ಕಾಣುತ್ತಿಲ್ಲ.

ಈ ಎಲ್ಲ ಬೆಳವಣಿಗೆಗಳನ್ನು ಗಮನಿಸಿದರೆ ಕರ್ನಾಟಕದ ರಾಜಕೀಯದಲ್ಲಿ ಬಳ್ಳಾರಿ ರೆಡ್ಡಿಗಳ ಗೂಂಡಾಗಿರಿ ತಹಬಂದಿಗೆ ಬರುತ್ತಿದ್ದಂತೆ ಆ ಸ್ಥಾನ ತುಂಬಲು ಮುರುಗೇಶ್ ನಿರಾಣಿ ತೀರ್ಮಾನಿಸಿಬಿಟ್ಟಂತೆ ಕಾಣುತ್ತದೆ. ಈತನನ್ನು ಪರಪ್ಪನ ಅಗ್ರಹಾರಕ್ಕೆ ಸೇರಿಸುವತನಕ ರೈತರ ಗೋಳು ತಪ್ಪುವುದಿಲ್ಲ!

• ಮೇಘರಾಜ್

ಹೆತ್ತಮಕ್ಕಳ ದಾರಿ ತಪ್ಪಿಸಿದ ಮಾ-ಬಾಪ್!

ಿ ವಿಚಿತ್ರ, ಆದರೂ ಸತ್ಯ. ಮೊನ್ನೆ ಮಧ್ಯಪ್ರದೇಶದ ಲ್ಲಿ ಕಾರ್ಯಾಚರಣೆಗಿಳಿದ ಕರ್ನಾಟಕ ಪೊಲೀಸರು ಇಡೀ ಕುಟುಂಬವನ್ನು ಅರೆಸ್ಟ್ ಮಾಡಿ ತಂದು ಜೈಲಿನೊಳಕ್ಕೆ ಗದುಮಿದ್ದರು. ಅಪ್ಪ-ಅಮ್ಮ, ಅವರಿಬ್ಬರ ಕ್ಕಳು, ಆ ಮಕ್ಕಳ ಇಬ್ಬರು ದೋಸ್ತ್‌ಗಳು-ಹೀಗೆ ರ ಟೀಮು ಸಾಲಿಡ್ಡಾಗಿ ಸುಬ್ರಮಣ್ಯಪುರ ಪೊಲೀಸರ ಲಿಕೊಳ್ಳುವ ಹೊತ್ತಿಗೆ 'ಫ್ಯಾಮಿಲಿ ಬಿಸಿನೆಸ್' ಹೀಗೂ ್ತಿ ಎಂಬ ಅಚ್ಚರಿ ಮೂಡಿಸಿದ್ದರು.

ಬಾನಿ ಅಥವಾ ಟಾಟಾ-ಬಿರ್ಲಾ ಕುಟುಂಬಗಳಷ್ಟು ಪ್ರಾಜೆಕ್ಟ್ ಅಲ್ಲದಿದ್ದರೂ ಇವರದ್ದೊಂದು ವ್ಯವಸ್ಥಿತ ೆ ಅಮ್ಮ ಅನ್ನಿಸಿಕೊಂಡವಳು ಮಲಗಿದ್ದ ಮಕ್ಕಳನ್ನು ಜಾವದಲ್ಲೇ ಎಬ್ಬಿಸಿ 'ಡ್ಯೂಟಿ'ಗೆ ಅಣಿಮಾಡಿ ತ್ತಿದ್ದಳು, ಡ್ಯೂಟಿ ಮುಗಿಸಿ ಬಂದ ಮಕ್ಕಳ ಮುಂದಿನ ಕ್ಕೆ ಸಾಥ್ ನೀಡುವ ಕಾಯಕ ಅಪ್ಪನದ್ದು. ಹೀಗೆ ಅಪ್ಪ ೇಖಾರೇಖಿಯಲ್ಲಿ ಡ್ಯೂಟಿಗೆ ತೆರಳುತ್ತಿದ್ದ ಮಕ್ಕಳಾದರೂ ದ್ದು ಪಕ್ಕಾ ಕ್ರಿಮಿನಲ್ ಕಸುಬು ಮತ್ಲಬ್ ಸರಗಳ್ಳತನ! ್ ಮತ್ತು ನಜ್ಬುನ್ನೀಸಾ ದಂಪತಿಗಳೇ ಆ ಪಾಪಿ ಗಳು. ಇವರ ಮಕ್ಕಳಾದ ಇಮ್ರಾನ್ ಅಲಿಯಾಸ್ ಹಾಗೂ ಇರ್ಫಾನ್ ಜೋಡಿಯೇ ಮೆಗಾ ಕ್ರಿಮಿನಲ್‌ಗಳು. ಜೊತೆಯಾದದ್ದು ಮುದಾಬೀರ್, ಆದಿ ಅಲಿಯಾಸ್ ಎಂಬಿಬ್ಬರು ಖದೀಮ ಸ್ನೇಹಿತರು. ಎಲ್ಲಾ ತಂದೆ ಂತೆ ಅನ್ವರ್ ದಂಪತಿಗಳೂ ತಮ್ಮ ಮಕ್ಕಳ ದಲ್ಲಿ ನೆಮ್ಮದಿಯ ಬದುಕಿನ ಕನಸು ಕಂಡಂತವರು. ದಾಗ್ಗಿ ಮಕ್ಕಳನ್ನು ತಯಾರಿಸಿದ್ದು ಮಾತ್ರ ಅಪಾಯಕಾರಿ ಸಿರಿವಂತಿಕೆ, ಐಷಾರಾಮಿ ಜೀವನದ ತೆವಲಿಗೆ ದಂಪತಿ ತಮ್ಮ ಮಕ್ಕಳಿಗೆ ಸುಲಭವಾಗಿ ಮತ್ತು ಹಣ ಮಾಡುವ ಸರಗಳ್ಳತನದಂತಹ ದಾರಿ ದ್ದು ಮಾತ್ರವಲ್ಲ, ಪ್ರತಿ ದಿನ ಅವರನ್ನು ಪ್ರೇರೇಪಿಸಿ ದ್ದರು. ಇದೆಲ್ಲದರ ಹಿಂದೆ ಮಾಸ್ಟರ್ ಬ್ರೈನ್‌ನಂತೆ ಡುತ್ತಿದ್ದದ್ದು ಆ ಮಕ್ಕಳ ತಾಯಿಯಾದ ನಜ್ಬುನ್ನೀಸಾ. ಜಾವದಲ್ಲಿ ವಾಕಿಂಗ್‌ಗೆ, ಮನೆಸಾರಿಸಲು ಇಲ್ಲವೆ ಮಹಿಳೆಯರು ಹೊರಬೀಳುತ್ತಾರೆ ಹಾಗೂ ಜನರೂ ಅಷ್ಟೊಂದು ಆಕ್ಟಿವ್ ಆಗಿ ರಿಯಾಕ್ಟ್ ಎಂಬ ಸಣ್ಣದೊಂದು ಸ್ಟಡಿ ಮಾಡಿದ್ದರಿಂದಲೇ ಹೊಣವಾಗಿ ಮಕ್ಕಳನ್ನು ರೇಗುತ್ತಲೇ ಡ್ಯೂಟಿಗೆ ಕಳಿಸುತ್ತಿದ್ದಳು. ಮನೆಯಿಂದ ಈ ಐದು ಮಹನೀಯರೂ, ಪಿಕ್ಕ ಮೇಲೆ ಪೋಲಿ ಮಕ್ಕಳ ಬಟಾಲಿಯನ್ ಸರ ಕೀಳುವುದರಲ್ಲಿ ಪಿಎಚ್‌ಡಿ ಯನ್ನೇ ಮಾಡಿ ಮುಗಿಸಿದ್ದರು. ರಸ್ತೆಗಿಳಿದರೆಂದರೆ ನಾಲ್ಕೈದು ಕುತ್ತಿಗೆಗಳ ಐಶ್ವರ್ಯ ಬರಿದು ಮಾಡಿಯೇ ಮನೆ ಸೇರುತ್ತಿದ್ದದ್ದು.

ಇವರ ಚೈನ್ ಸ್ನಾಚಿಂಗ್ ಪ್ರತಾಪ ಅದೆಷ್ಟು ವೇಗದಲ್ಲಿ ವೃದ್ಧಿಯಾಗಿತ್ತೆಂದರೆ ಆರಂಭದಲ್ಲಿ ಈ ಫ್ಯಾಮಿಲಿ ವಾಸವಿದ್ದ ಸುಲ್ತಾನ್‌ಪಾಳ್ಯ ವ್ಯಾಪ್ತಿಯ ಠಾಣೆಯಲ್ಲಿ ಅಣ್ಣ ತಮ್ಮನ ಅಕೌಂಟಿಗೆ ಡಜನ್ನುಗಟ್ಟಲೆ ಪೊಲೀಸ್ ಕೇಸ್‌ಗಳು ಜಮೆಯಾಗಿದ್ದವು. ಆ ಹಾಳು ದಂಪತಿಗೆ ಕಡೇಪಕ್ಷ ಆಗಲಾದರೂ ಮಕ್ಕಳ ಭವಿಷ್ಯದ ಬಗ್ಗೆ ಕಾಳಜಿ ಮೂಡಿದ್ದರೆ ಎಪಿಸೋಡು ಇಷ್ಟೊಂದು ದುರಂತಮಯ ಆಗುತ್ತಿರಲಿಲ್ಲ.

ಆದರೆ ಮಕ್ಕಳ ಕಸುಬಿಗೆ ಯಾವ ಅಡ್ಡಿಯೂ ಆಗಬಾರದೆಂದು



ಈಗ್ಗೆ ಒಂದು ವರ್ಷದ ಹಿಂದೆ ಮೊದಲಿದ್ದ ಸುಲ್ತಾನ್‌ಪಾಳ್ಯ ಬಿಟ್ಟು ಕನಕಪುರದ ಕಗ್ಗಲೀಪುರದಲ್ಲಿ ಮನೆಮಾಡಿದ್ದರು. ಆ ಮೂಲಕ ಇಡೀ ಫ್ಯಾಮಿಲಿ ತಪ್ಪಿಬ್ಬರು ಮಿನಿ ಪಾರ್ಟ್ನರ್ (ಮಕ್ಕಳ ದೋಸ್ತ್)ಗಳೊಂದಿಗೆ ಸರಗಳ್ಳತನವನ್ನೇ ತನ್ನ ಅಧಿಕೃತ ಕಸುಬಾಗಿ ಅಂಗೀಕರಿಸಿತ್ತು.

ಇಷ್ಟಕ್ಕೂ ಅವರ ದಂಧೆ ಮತ್ತು ಕರಾಮತ್ತುಗಳು ಕಡಿಮೆಯೇನು ಇರಲಿಲ್ಲ. ಇವರ ಭರ್ಜರಿ ಗಳಿಕೆಯನ್ನು ನೋಡಿ ಅರೆಸ್ಟ್ ಮಾಡಿದ ಪೊಲೀಸರೇ ಕ್ಷಣಕಾಲ ದಂಗುಬಡಿದು ನಿಂತಿದ್ದಂತೆ. ಇಲ್ಲಿಗೆ ನಾಲ್ಕೈದು ವರ್ಷಗಳ ಹಿಂದೆ ಕೇವಲ ಲಾರಿ ಡ್ರೈವರ್ ಆಗಿದ್ದ ಅನ್ವರ್‌ನ ಬಳಿ ತನ್ನದೆಂದು ಹೇಳಿಕೊಳ್ಳುವ ಸೈಕಲ್ ಕೂಡಾ ಇರಲಿಲ್ಲ. ಆದರೆ ಮಕ್ಕಳು ಕಂಡವರ ಕುತ್ತಿಗೆಗೆ ಕೈ ಇಡಲು ಆರಂಭಿಸಿದ ನಂತರ ಆದಾಯದ ಗ್ರಾಫು ವಿಚಿತ್ರವಾಗಿ ಏರಿಕೆ ಕಂಡಿತ್ತು. ಸ್ಯಾಂಟ್ರೋ, ಲ್ಯಾನ್ಸರ್ ಕಂಪನಿಯ ಎರಡು ಕಾರು, ಎರಡು ಬೈಕ್‌ನ ಒಡೆಯರು ಮಾತ್ರವಲ್ಲದೆ ಕಗ್ಗಲೀಪುರದಲ್ಲಿ ಒಂದು ಸೈಟ್ ಖರೀದಿ ಮಾಡಿ ಅಲ್ಲಿ ಬರೋಬ್ಬರಿ ಎಪ್ಪತ್ತು ಲಕ್ಷದಲ್ಲಿ ಮನೆ ಕಟ್ಟುತ್ತಿದ್ದಾರೆಂದರೆ ಇವರ ಕರ್ತವ್ಯಪ್ರಜ್ಞೆ ಅದಿನ್ನೆಂತದ್ದಿರಬೇಡ?

ಅಂದಹಾಗೆ ಮೊನ್ನೆ ಪೊಲೀಸರು ಇವರನ್ನು ಬಂಧಿಸಿದಾಗ ಇವರ ಬಳಿ ಸಿಕ್ಕಿದ್ದು 1 ಕೆ.ಜಿ ಬಂಗಾರ ಮತ್ತು 40 ಲಕ್ಷ ನಗದು. ಈಗಾಗಲೇ ಮಾರಿಕೊಂಡಿರುವ ಚಿನ್ನಾಭರಣಗಳ ಅಂದಾಜು ಇನ್ನೂ ಸಿಕ್ಕಿಲ್ಲ. ಮಕ್ಕಳು ಕದ್ದು ತಂದ ಆಭರಣಗಳನ್ನು ಕೋಲಾರದ ಬಂಗಾರಪೇಟೆ, ತಮಿಳುನಾಡಿನ ಕೃಷ್ಣಗಿರಿ, ಅಂಬೂರು ಮತ್ತು ಕೇರಳದ ತ್ರಿಸೂರ್‌ನಲ್ಲಿ ಮಾರಿ ಬರುತ್ತಿದ್ದ ಅನ್ವರ್ ಎಲ್ಲೂ ಪೊಲೀಸರಿಗೆ ಅನುಮಾನ ಬರದಂತೆ ವ್ಯವಹರಿಸುವ ಚಾಕಚಕ್ಯತೆ ರೂಢಿಸಿಕೊಂಡಿದ್ದ.

ಇಮ್ರಾನ್ ಮತ್ತು ಇರ್ಫಾನ್ ಮೇಲೆ ಪೊಲೀಸರಿಗೆ ಸಾಕಷ್ಟು ಗುಮಾನಿ ಇತ್ತಾದರು ರೆಡ್‌ಹ್ಯಾಂಡಾಗಿ ಸೀಜ್ ಮಾಡಲಾಗದೆ ಪರಿತಪಿಸಿದ್ದುಂಟು. ಈ ಪಾಪಿ ಬ್ರದರ್ಸ್ ಕದ್ದ ತಕ್ಷಣ ಚೈನುಗಳನ್ನು ತಮ್ಮ ಅಂಡರ್‌ವೇರ್ ಒಳಗೆ ಬಚ್ಚಿಟ್ಟುಬಿಡುತ್ತಿದ್ದರಂತೆ. ಒಂದೆರಡು ಬಾರಿ ಸ್ನಾಚ್ ಪ್ರಕರಣಗಳಲ್ಲಿ ಪೊಲೀಸರು ಇವರನ್ನು ತಡಕಾಡಿ ಮಾಲು ಸಿಗದೆ ಹಾಗೇ ಬಿಟ್ಟದ್ದೂ ಇದೆಯಂತೆ. ಪೊಲೀಸರ ಕೈಗಳ ತಪಾಸಣಾ ಲಿಮಿಟ್ಟು ತಿಳಿದೇ ಇವರು ಸೇಫ್‌ಲಾಕರ್‌ಗಳ ಮೊರೆಹೋದದ್ದಿರಬೇಕು. ಆದರೂ 2011ರ ಮೇ ತಿಂಗಳಿನಲ್ಲಿ ಡಿ.ಜೆ ಹಳ್ಳಿಯ ಕಳವು ಪ್ರಕರಣವೊಂದರಲ್ಲಿ ಸಿಕ್ಕಿಬಿದ್ದಿದ್ದ ಇವರು ಆರು ತಿಂಗಳ ಜೈಲು ಶಿಕ್ಷೆಯನ್ನೂ ಅನುಭವಿಸಿದ್ದರು. ಜಾಮೀನಿನ ಮೇಲೆ ಬಿಡುಗಡೆಯಾದವರನ್ನು ಅನ್ವರ್ ದಂಪತಿ ಕಗ್ಗಲೀಪುರಕ್ಕೆ ಶಿಫ್ಟ್‌ಮಾಡಿ ಕಸುಬನ್ನು ಮುಂದುವರೆಸಲು ಮನೋಸ್ಥೈರ್ಯ ನೀಡಿದ್ದರು.

ಅಂತೂ ಇಂತೂ ಬಯಲಿಗೆ ಬಂತು

ಇಂತಿಪ್ಪ ಲಾಲಚ್ ಪೋಷಕರ ಮಕ್ಕಳು ಮತ್ತವರ ದೋಸ್ತ್‌ಗಳ ನಸೀಬು ಕೈಕೊಟ್ಟದ್ದು ನೆಲಮಂಗಲದ ಒಂದು ಸರಗಳ್ಳತನ ಪ್ರಕರಣದಲ್ಲಿ. ಏಪ್ರಿಲ್ 16 ರಂದು ಸರ ಕೀಳುವ ಪ್ರಯತ್ನದಲ್ಲಿದ್ದ ಇಮ್ರಾನ್ ಮತ್ತು ಮುದಾಫೀರ್‌ನನ್ನು ಜನರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದರು. ಮಾಮೂಲಿ ಪಿಕ್‌ಪಾಕೆಟರ್ ಎಂಬಂತೆ ನಿರ್ಲಕ್ಷ್ಯ ವಹಿಸಿದ್ದ ಪೊಲೀಸರನ್ನು ವಂಚಿಸಿದ್ದ ಇಮ್ರಾನ್ ಮೂತ್ರದ ನೆಪ ಹೇಳಿ ಕ್ಷಣಮಾತ್ರದಲ್ಲೇ ಅಲ್ಲಿಂದ ಎಸ್ಕೇಪಾಗಿದ್ದ. ಇನ್ನು ತಾವಿಲ್ಲಿದ್ದರೆ ಅಪಾಯವೆಂದರಿತ ಇಮ್ರಾನ್ ಅಪ್ಪ ಅಮ್ಮ ತಮ್ಮನೊಟ್ಟಿಗೆ ಮಧ್ಯಪ್ರದೇಶದ ನಾಗ್ಪುರಕ್ಕೆ ಹೋಗಿ ತಲೆಮರೆಸಿಕೊಂಡಿದ್ದ.


ಇತ್ತ ಇಮ್ರಾನ್ ಕೈತಪ್ಪಿಸಿಕೊಂಡ ಸಿಟ್ಟನ್ನೆಲ್ಲಾ ಮುದಾಫೀರ್‌ನ ಮೇಲೆ ವರ್ಗಾಯಿಸಿದ ಪೊಲೀಸರ ಮುಂದೆ ಆತ ತಮ್ಮ ಇಡೀ ರಾಕೆಟ್ ವೃತ್ತಾಂತವನ್ನು ಚಾಚೂ ತಪ್ಪದೇ ಒದರಿದ್ದ. ಆಗಲೇ ಪೊಲೀಸರಿಗೆ ಪ್ರಕರಣದ ತೀವ್ರತೆ ತಿಳಿದದ್ದು. ಅಷ್ಟರಲ್ಲಾಗಲೇ ಇವರ ಹಾವಳಿಯಿಂದ ಸುಬ್ರಮಣ್ಯಪುರ ಠಾಣಾ ವ್ಯಾಪ್ತಿಯಲ್ಲಿ ಸರಗಳ್ಳತನ ಕೇಸುಗಳು ವಿಪರೀತವಾಗಿ ಘಟಿಸತೊಡಗಿದ್ದವು. ಅವೆಲ್ಲವುಗಳಲ್ಲಿ ಇವರ ಪಾತ್ರ ಇರುವುದು ಖಾತರಿಯಾಗುತ್ತಿದ್ದಂತೆ ಇನ್ಸ್‌ಪೆಕ್ಟರ್ ಬಾಲೇಗೌಡರ ನೇತೃತ್ವದಲ್ಲಿ ಎರಡು ತಂಡಗಳನ್ನು ರಚಿಸಿಕೊಂಡು ಮುದಾಫೀರ್ ನೀಡಿದ ಮಾಹಿತಿಯಂತೆಯೇ ನಾಗ್ಪುರಕ್ಕೆ ದಾಂಗುಡಿಯಿಟ್ಟ ಪೊಲೀಸರು ಕೊನೆಗೂ 'ಫ್ಯಾಮಿಲಿ ಬಿಸಿನೆಸ್'ಗೆ ಶಾಶ್ವತ ಅಗ್ರಹಾರದ ದಾರಿತೋರಿಸಿದ್ದಾರೆ.


ಶ್ರೀಮಂತಿಕೆಯ ಉದ್ದೇಶಕ್ಕೆ ಅಪ್ಪ ಅಮ್ಮಂದಿರೇ ಮಕ್ಕಳನ್ನು ಕಳ್ಳತನಕ್ಕಿಳಿಸಿದ ಈ ಪ್ರಸಂಗ ಬರೀ ವಿಚಿತ್ರ ಮಾತ್ರವಲ್ಲ ವಿಪರ್ಯಾಸವೂ ಕೂಡಾ.


• ಗಿರೀಶ್ ತಾಳಿಕಟ್ಟೆ

ಹೆಂಡತಿ ಹಂತಕ ಭಟ್ಟನ ಪ್ರಮಾಣ ಪ್ರಹಸನ

ಬಿಜೆಪಿ ಭಂಡರಿಗೆ ಮತ್ತು ಧರ್ಮ ಸ್ಥಳದ ಮಂಜುನಾಥನಿಗೆ ಅದೆಂಥ "ಧರ್ಮಕಾರಣ"ದ ನಂಟೋ ಏನೋ?! ನೈತಿಕತೆ-ನಾಚಿಕೆ ಒಂಚೂರೂ ಇಲ್ಲದ ಬಿಜೆಪಿ ಭೂಪರು ತಮ್ಮ ಪಾತಕ-ಘಟಿಂಗತನ ಮರೆಮಾಚಿ ಜನರ ಕಣ್ಣಿಗೆ ಮಣ್ಣೆರಚಲು ಧರ್ಮಸ್ಥಳ ಮಂಜುನಾಥನ ಮೇಲೆ ಆಣೆ-ಪ್ರಮಾಣ ಮಾಡೋದು ಮಾಮೂಲಾಗಿ ಹೋಗಿದೆ! ಮೊಟ್ಟ ಮೊದಲು ಈ ಮಂಜುನಾಥ ದೇವರನ್ನು ಬೀದಿಗೆ ತಂದು ನಿಲ್ಲಿಸಿದ್ದು ಧರ್ಮಸ್ಥಳದ ಹತ್ತಿರದ ಪುತ್ತೂರು ಮೂಲದ ಶೋಭಾ ಕರಂದ್ಲಾಜೆ ಎಂಬ ಚೆಡ್ಡಿ ಸೆಲಿಬ್ರಿಟಿ. ಆನಂತರ ಆಕೆಯಿಂದ ಅಡಿಗಡಿಗೆ ಪ್ರಭಾವಿತನಾಗಿರುವ ಯಡ್ಡಿ ಮಹಾತ್ಮ ಧರ್ಮಸ್ಥಳ ಮಂಜುನಾಥನ ಹೆಸರಲ್ಲಿ ದೊಡ್ಡ ರಂಪ-ರಾದ್ಧಾಂತವನ್ನೇ ಮಾಡಿಬಿಟ್ಟಿದ್ದರು. ಈ ಯಡ್ಡಿ ಮತ್ತಾತನ ಪರಮ ವೈರಿ ಕುಮ್ಮಿ ಧರ್ಮಸ್ಥಳದ ದೇವರನ್ನು ರೆಫರಿಯಾಗಿಟ್ಟುಕೊಂಡು ನಿರಂತರ ಕಿತ್ತಾಡಿದ್ದು ತಿಂಗಳುಗಟ್ಟಲೆ ಪುಕ್ಕಟೆ ಮನ ರಂಜನೆ ನಾಡಿನ ಜನರಿಗೆ ನೀಡಿತ್ತಲ್ಲವಾ?



ವಿ.ಎಸ್.ಆಚಾರ್ಯ


ವೀರೇಂದ್ರ ಹೆಗ್ಗಡೆ



ಸುನಿಲ್ ಕುಮಾರ್

ಈಗ ಉಡುಪಿಯ ಭಜರಂಗಿ ಶಾಸಕ ರಘುಪತಿ ಭಟ್ಟ, ತನ್ನ ಬರ್ನಾಸ್ ಭಾನ್ಗಡಿಗೆ ಮಂಜುನಾಥನ ರಕ್ಷಣೆ ಪಡೆಯಲು ಸಾರ್ವಜನಿಕವಾಗೇ ತಿಪ್ಪರಲಾಗ ಹಾಕುತ್ತಿದ್ದಾನೆ! ಈ ಬಂಡಲ್ ಭಟ್ಟ ತನ್ನ ಹಗ್ಗ ಕಡಿವ ಚಾಳಿ ಮತ್ತದರ ಅಡ್ಡ ಪರಿಣಾಮದಿಂದ ಹೆಂಡತಿ ಪದ್ಮಪ್ರಿಯಾ ಸಾವಿಗೀಡಾಗಿರುವುದರಿಂದ ಆಗಿರುವ ಡ್ಯಾಮೇಜು ಕಂಟ್ರೋಲ್‌ಗೆ ಧರ್ಮಸ್ಥಳ ದೇವರನ್ನೇ ಬಂಡವಾಳ ಮಾಡಿಕೊಂಡುಬಿಟ್ಟಿದ್ದಾನೆ. ಆತ ಈಚೆಗೆ ಧರ್ಮಸ್ಥಳಕ್ಕೆ ಹೋಗಿ ತಾನು "ಪತ್ನಿ ಪದ್ಮಪ್ರಿಯಾಳನ್ನು ಕೊಲೆ ಮಾಡಿಲ್ಲ- ಕೊಲೆ ಮಾಡಿಸಿಯೂ ಇಲ್ಲ" ಎಂದು ಪ್ರಮಾಣ ಮಾಡಿಬಂದಿದ್ದಾನಂತೆ. ಇದಕ್ಕಾತ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯ ಮಾರ್ಗದರ್ಶನ ಪಡೆದಿದ್ದಾನಂತೆ! ಹೀಗಾಗಿ ಇನ್ನು ಮುಂದೆ ಯಾರಾದರೂ ಆತನನ್ನು ಹೆಂಡತಿ ಹಂತಕನೆಂದು ಜರಿದರೆ ಅಂಥವರನ್ನು ಧರ್ಮಸ್ಥಳದ ಮಂಜುನಾಥನೇ ನೋಡಿಕೊಳ್ಳುತ್ತಾನಂತೆ. ಹಾಗಂತ ದೋಖಾಬಾಜಿ ಭಟ್ಟನೇ ಪತ್ರಿಕಾಗೋಷ್ಠಿ ಕರೆದು ಹಲುಬಿದ್ದಾನೆ....

ಪತಿಯ ದ್ರೋಹ-ಮೋಸ-ವಂಚನೆಯಿಂದ ದಿಕ್ಕೆಟ್ಟಿದ್ದ ಮುಗ್ಧ ಗೃಹಿಣಿ ಪದ್ಮಪ್ರಿಯಾಳ ಘನಘೋರ ದುರಂತ ನಡೆದು ಹೆಚ್ಚುಕಮ್ಮಿ ನಾಲ್ಕು ವರ್ಷ ಕಳೆದಿರುವ ಈ 'ಪರ್ವಕಾಲ'ದಲ್ಲಿ ಆಕೆಯ ಪಾಪಿ ಪತಿರಾಯ ರಘುಪತಿ ಭಟ್ಟನಿಗೆ ತಾನು 'ನಿಷ್ಪಾಪಿ' ಎಂದು ಸಾಬೀತುಪಡಿಸಿಕೊಳ್ಳುವ ದರ್ದು ಕಾಡಿರುವುದು ಕುತೂಹಲಕರವಾಗಿದೆ. ಕಳೆದ ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಉಪಚುನಾವಣೆಯ ಫಲಿತಾಂಶದಿಂದ ಈ ಭಟ್ಟನಿಗೆ ಹೆಂಡತಿಯ ಅಸಹಜ ಸಾವು ತನ್ನ ಸಾರ್ವಜನಿಕ ಬದುಕಿಗೆ ಬಲವಾದ ಹೊಡೆತ ನೀಡಿದೆ ಎಂಬುದು ಖಾತ್ರಿಯಾಗಿ ಹೋಗಿದೆ. ಅಷ್ಟೇ ಅಲ್ಲ, ಚುನಾವಣೆ ಹೊತ್ತಲ್ಲಿ ಹೋದ-ಹೋದಲ್ಲೆಲ್ಲ ರಘುಪತಿ ಭಟ್ಟನಿಗೆ ಪತ್ನಿ ಪೀಡಕ; ಹೆಂಡತಿ ಸಾವಿಗೆ ಆತನ ಚಟಗಳೇ ಕಾರಣ ಎಂದು ಜನ ನೇರವಾಗಿ ಉಗಿದಿದ್ದರು. ವಿರೋಧಿಗಳಂತೂ ಭಟ್ಟನ ಅಸಲಿಯತ್ತು ಬಿಚ್ಚಿಟ್ಟಿದ್ದರು. ಇದರಿಂದಾಗಿ ಉಡುಪಿ ಅಸೆಂಬ್ಲಿ ಸೆಗ್ಮೆಂಟ್‌ನಲ್ಲಿ ಬಿಜೆಪಿಗೆ ಮತ ಖೋತಾ ಆಗಿತ್ತು. ರಘುಪತಿ ಭಟ್ಟನಿಗೆ ಪದ್ಮಪ್ರಿಯಾ ಸಾವಿನ ಪ್ರಕರಣದಲ್ಲಿ ಹೆಗಲಿಗೆ ಹೆಗಲು ಕೊಟ್ಟು ನೆರವಾಗಿದ್ದ ಆತನ ಆಪ್ತಮಿತ್ರನೂ ಆದ ಬಿಜೆಪಿ ಅಭ್ಯರ್ಥಿ ಸುನಿಲ್ ಕುಮಾರ್‌ಗಿಂತ ಕಾಂಗ್ರೆಸ್ ಕ್ಯಾಂಡಿಡೇಟ್ ಜಯಪ್ರಕಾಶ್ ಹೆಗ್ಡೆಗೇ ಹೆಚ್ಚು ಮತ ಬಂದಿತ್ತು. ಪದ್ಮಪ್ರಿಯಾಳ ಆತ್ಮ ಮಾತಾಡಿದ್ದರಿಂದಲೇ ಇಷ್ಟು ದೊಡ್ಡ ಮಟ್ಟದ ಹಾನಿಯಾಗಿದೆ ಎಂಬುದು ಭಟ್ಟನಿಗೆ ಪಕ್ಕಾ ಆಗಿತ್ತು.


ರಘುಪತಿ ಭಟ್


ಪದ್ಮಪ್ರಿಯಾ


ಅತುಲ್ ರಾವ್

ಮುಂಬರುವ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಪದ್ಮಪ್ರಿಯಾಳ ಪ್ರೇತಕಾಟದಿಂದ ತಪ್ಪಿಸಿಕೊಳ್ಳಲೆಂದೇ ಭಟ್ಟ ಈಗ ಧರ್ಮಸ್ಥಳದ ಮಂಜುನಾಥ, ಸ್ವಯಂಘೋಷಿತ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಮತ್ತು ದೈವಕೋಲದ ದರ್ಶನ ಪಾತ್ರಿಗಳಿಗೆಲ್ಲ ಗಂಟುಬಿದ್ದಿದ್ದಾನೆ. ತಾನು ಹೆಂಡತಿಯನ್ನು ಕೊಲ್ಲಿಸಿಲ್ಲ ಅಥವಾ ಕೊಲೆ ಮಾಡಿಲ್ಲವೆಂದು ಧರ್ಮಸ್ಥಳ ಮಂಜುನಾಥನ ಮೇಲೆ ಆಣೆ ಹಾಕಿದರೆ ಆ ದೇವರ "ಲೀಲೆ" ನಂಬುವ ಅಮಾಯಕ ಮತದಾರರನ್ನು ಮರುಳು ಮಾಡಬಹುದೆಂಬ ದೂ(ದು)ರಾಲೋಚನೆ ಈ ದಗಾಕೋರ ಭಟ್ಟನದು. ಹೆಂಡತಿಯ ಅನುಮಾನಾಸ್ಪದ ಸಾವು, ಭಂಡಾಟ, ಭ್ರಷ್ಟಾಚಾರ, ಚಪಲ ದಿಂದ ಮತದಾರರ ವಿಶ್ವಾಸ ಕಳೆದುಕೊಂಡಿರುವ ಭಟ್ಟನನ್ನು ಮತ್ತೆ ಶಾಸಕನಾಗಿ ಮಾಡಲು ಸಾಕ್ಷಾತ್ ಮಂಜುನಾಥ ಸ್ವಾಮಿಯಿಂದಲೂ ಸಾಧ್ಯವಿಲ್ಲ; ಆ ಪ್ರಮಾಣದಲ್ಲಿ ಭಟ್ಟನ ಪಾಪದ ಕೊಡ ತುಂಬಿಕೊಂಡಿದೆ.

ತಾನು "ಸುಬಗ"ನೆಂದು ಭಟ್ಟ ಧರ್ಮಸ್ಥಳದಲ್ಲಿ ಆಣೆ-ಪ್ರಮಾಣ ಮಾಡಿದ ಬಳಿಕ ಒಂದಿಷ್ಟು ಸಹಜ ಪ್ರಶ್ನೆಗಳು ಉಡುಪಿ ಯಾದ್ಯಂತ ಎದ್ದೆದ್ದು ಕುಣಿಯುತ್ತಿವೆ. ಭಟ್ಟನ ಬಿಜೆಪಿ ಸರ್ಕಾರ ಮಾಡಿಸಿರುವ ಸಿಓಡಿ ತನಿಖೆಯಲ್ಲಿ ಪದ್ಮಪ್ರಿಯಾಳದು ಆತ್ಮಹತ್ಯೆ ಎಂದು ಸಾಬೀತಾಗಿದೆಯಂತೆ. ಭಟ್ಟ ಬೊಗಳುವ ಪ್ರಕಾರ ಪದ್ಮಪ್ರಿಯಾಳದು ಆತ್ಮಹತ್ಯೆಯೇ ಎಂದಿಟ್ಟುಕೊಂಡರೆ ಇದಕ್ಕೆ ಪ್ರೇರಣೆ ಯಾರದು? ಆತನ ಅತ್ಯಾಪ್ತ ಮಿತ್ರನೂ ಆಗಿದ್ದ ಪದ್ಮಪ್ರಿಯಾಳ "ಆತ್ಮ ಸಂಗಾತಿ" ಅತುಲ್ ರಾವ್‌ನಾ? ಖುದ್ದು ರಘುಪತಿ ಭಟ್ಟನಾ? ಭಟ್ಟ ತನ್ನ ಹೆಂಡತಿ ನೇಣುಹಾಕಿಕೊಳ್ಳಲು ಅತುಲ್‌ನ ದುರ್ಬೋಧೆಯೇ ಪ್ರೇರಣೆ ನೀಡಿದೆ ಎಂದಿದ್ದಾನೆ. ... ವಾಸ್ತವ ಬೇರೆಯೇ ಇದೆ.

ಪದ್ಮಪ್ರಿಯಾಳದು ಕೊಲೆಯಾದರಂತೂ ಅದಕ್ಕೆ ಭ... ಸೂತ್ರಧಾರ ಅಥವಾ ಸುಪಾರಿದಾರ. ಆಕೆ ಆತ್... ಮಾಡಿಕೊಂಡಿದ್ದಾದರೆ ಅದಕ್ಕೂ ಹೊಣೆ ಈ ಹೇ... ಗಂಡನೇ! ಎರಡೆರಡು ಮಕ್ಕಳ ತಾಯಿ, ಹೊರಜ... ರಾಜನಂತೆ ಭಾಸವಾಗುವ ಎಮ್ಮೆಲ್ಲೆ ಮಡದಿಯೇ ಹೊ... ದಾಟಿ ಹೋಗುತ್ತಾಳೆಂದರೆ, ಆ ನತದೃಷ್ಟ ಜೀವ ಗ... ಬಂಗಾರದ ಪಂಜರದಲ್ಲಿ ಅದೆಷ್ಟು ಹಿಂಸೆ ಅನು... ರಲಿಕ್ಕಿಲ್ಲ?! ಗಂಡನ ಬೇಲಿ ಹಾರುವ ಬುದ್ಧಿಯಿಂ... ಹೆಣ್ಣು ಅದೆಷ್ಟು ರೋಸಿ ಹೋಗಿರಲಿಕ್ಕಿಲ್ಲ? ಶಾಸಕ ... ಮತ್ತು ಆತನ ಹೆಂಡತಿ ಪದ್ಮಪ್ರಿಯಾಳ ಮಧ್ಯೆ ... ಮಹಾಮಹಿಮರಾದ ದಿವಂಗತ ವಿ.ಎಸ್. ಆಚಾ... ಸೋಮಶೇಖರ ಭಟ್ಟರಂಥವರು ಹಲವು ಬಾರಿ ... ಪಂಚಾಯ್ತಿಕೆ ಮಾಡಿದ್ದು ಇಡೀ ಉಡುಪಿಗೇ ಗೊ... ಭಟ್ಟ ಹೆಂಡತಿಯನ್ನು ಹೆಂಡತಿಯಂತೆಯೇ ನೋ... ಕೊಂಡಿದ್ದರೆ ಆಕೆಗೆ ಮನೆಯಾಚೆ ಹೋಗುವ ಪ್ರಮೇ... ಬರುತ್ತಿತ್ತಾ?

ಗಂಡನನ್ನು ಹಳಿಗೆ ತರಲು ಸಾಧ್ಯವೇ ಇಲ್ಲವೆಂ... ಪದ್ಮಪ್ರಿಯಾ ಸ್ವಂತ ಕಾಲಿನ ಮೇಲೆ ನಿಂತು ಬದುಕ... ಮನೆಯಾಚೆ ಹೋಗಿದ್ದು ತಪ್ಪಾ? ಹಾಗೆ ಹೋದವ... ಸಮಾಧಾನಿಸಿ ಮನೆಗೆ ಕರೆತರುವುದು ಬಿಟ್ಟು ಆ... ಪಾರ್ಟಿಯ ಶಾಸಕನ ಅಧಿಕಾರ ಬಲಬಳಸಿ ... ಅಸಹಾಯಕ ಹೆಂಗಸಿಗೆ ಕಾಡಿದ್ದು ಸರಿಯಾ? ಪದ್ಮಪ್ರಿ... ದೂರದ ದಿಲ್ಲಿ ಫ್ಲಾಟೊಂದರಲ್ಲಿದ್ದದ್ದು ಚೆಡ್ಡಿ ಸರ್ಕಾ... ಮತ್ತು ಭಂಡ ಗಂಡ ಭಟ್ಟನಿಗೆ ಗೊತ್ತಾದನಂತರ ಆಕೆ... ಆಡಳಿತಯಂತ್ರ ಕಾಡಿದ್ದು ಒಂದೆರಡು ಥರವಾ? ಆ ಫ್... ರಘುಪತಿ ಭಟ್ಟ ಮತ್ತವನ ಒಳ-ಹೊರಗು ಬಲ್ಲ ಗೆ... ಸುನಿಲ್‌ಕುಮಾರ್ ಅದೆಷ್ಟು ಬಾರಿ ಹೋಗಿಬಂದಿ... ಅತುಲ್‌ರಾವ್‌ಗೆ ಅದ್ಯಾವ ಪರಿ ಚಿತ್ರಹಿಂಸೆ ಪೊಲೀಸ... ಕೊಡಿಸಿದ್ದರು?

ಈ ನಿರಂತರ ದಾಳಿಯಿಂದ ಮಾನಸಿಕ ತುಮು... ಬಿದ್ದ ಪದ್ಮಪ್ರಿಯಾ ಆತ್ಮಹತ್ಯೆ ಮಾಡಿಕೊಂಡರೆ ... ಕಾರಣ ಯಾರು? ಆಕೆ ಆತ್ಮಹತ್ಯೆ ಮಾಡಿಕೊಳ್ಳು... ಪರಿಸ್ಥಿತಿ ತಂದೊಡ್ಡಿದ್ದು ಯಾರು? ಗೆಳೆಯ ಅತುಲ್‌ರಾ... ಗಂಡ ಭಟ್ಟನಾ? ಈ ಸರಳ ಸತ್ಯ ಧರ್ಮಸ್ಥಳದ ಕಲ್ಲು... ಮಂಜುನಾಥನಿಗೆ ಅರ್ಥವಾಗದೇ ಇರಬಹುದು. ... ಉಡುಪಿ ಜನತಾ ಜನಾರ್ದನನಿಗೆ ಕೊಲೆಗಾರ ಯಾರೆಂ... ಅದಾಗಲೇ ಖಾತ್ರಿಯಾಗಿ ಹೋಗಿದೆ.

ಇದೇ ಪಾಪಪ್ರಜ್ಞೆ ರಘುಪತಿ ಭಟ್ಟನ ಆಣೆ-ಪ್ರ... ಪ್ರಹಸನದ ಹೂರಣ!!

● ನ...



ದಲಿತ ಕುಟುಂಬಗಳು ತಮ್ಮ ಜೀವನೋಪಾಯಕ್ಕೆ ಆಧರಿಸಿದ್ದ ತುಂಡು ಭೂಮಿಯನ್ನೂ ಕಿತ್ತುಕೊಂಡಿರುವ ತುಮಕೂರು ನಗರಸಭೆ ಅವರ ಮೇಲೆ ದಬ್ಬಾಳಿಕೆ ನಡೆಸುತ್ತಿದೆ. ಬಿಜೆಪಿ ಶಾಸಕರು ಮತ್ತು ಸಂಸದರ ಕುಮ್ಮಕ್ಕಿನಿಂದ ದಲಿತರ ಮೇಲೆ ಪೊಲೀಸ್ ಮತ್ತು ಅಧಿಕಾರಿ ವರ್ಗ ದೌರ್ಜನ್ಯ ನಡೆಸುತ್ತಿದ್ದರೂ, "ನಮ್ಮ ಹೆಣಗಳು ಬಿದ್ದರೂ ನಾವು ಭೂಮಿ ಬಿಡುವುದಿಲ್ಲ" ಎಂದು ಒಂಭತ್ತು ಬಡ ದಲಿತ ಕುಟುಂಬಗಳು ಕೂಗುತ್ತಿದ್ದರೂ ಅದು ಯಾರ ಕಿವಿಗೂ ಬೀಳದಿರುವುದು ಒಂದು ದುರಂತ.

ತುಮಕೂರು ನಗರದಿಂದ ಎಂಟು ಕಿಲೋಮೀಟರ್ ದೂರದಲ್ಲಿ ಅಜ್ಜಗೊಂಡನಹಳ್ಳಿ ಇದೆ. ಇಲ್ಲಿ ಒಂಭತ್ತು ನಾಯಕ ಕುಟುಂಬಗಳ ಸ್ವತ್ತಾಗಿದ್ದ 40 ಎಕರೆ 20 ಗುಂಟೆ ಭೂಮಿಯನ್ನು 2006ರಲ್ಲಿ ತುಮಕೂರು ನಗರಸಭೆ ವಶಪಡಿಸಿಕೊಂಡಿದೆ. ಅರ್ಥಾತ್ ಅವರಿಂದ ಕಿತ್ತುಕೊಂಡಿದೆ ಎಂತಲೇ ಹೇಳಬೇಕು. ಭೂಮಿ ಕಳೆದುಕೊಂಡ ಆ ದಲಿತ ಕುಟುಂಬಗಳು ಕೋರಾ ಗ್ರಾಮಪಂಚಾಯತಿಯ ಕೆಲ ಸದಸ್ಯರು ಹಾಗೂ ಗ್ರಾಮಸ್ಥರ ಬೆಂಬಲ ಪಡೆದು ಧರಣಿ, ಪ್ರತಿಭಟನೆ ನಡೆಸಿಕೊಂಡು ಬರುತ್ತಲೇ ಇವೆ. ಆದರೂ ನಗರಸಭೆ ಅಧಿಕಾರಿವರ್ಗ ಪೊಲೀಸ್ ಬಲದೊಂದಿಗೆ ಆ ಅಮಾಯಕರ ಮೇಲೆ ದಬ್ಬಾಳಿಕೆ ನಡೆಸುತ್ತಲೇ ಬಂದಿದೆ.

ಅಜ್ಜಗೊಂಡನಹಳ್ಳಿ ಇರುವುದು ಕೋರಾಕ್ಕೆ ಕೂಗಳತೆ ದೂರದಲ್ಲಿ, ರಾಷ್ಟ್ರೀಯ ಹೆದ್ದಾರಿ 4ರ ಸಮೀಪ. ನಗರಸಭೆ ವಶಪಡಿಸಿಕೊಂಡಿರುವ ಪ್ರದೇಶದ ಸುತ್ತಲೂ ಮಾವು, ತೆಂಗಿನತೋಟಗಳು ಇವೆ. ಹೆಬ್ಬಾಕ ಕೆರೆಯೂ ಇದೆ. ಈ ಕೆರೆಗೆ ಹೇಮಾವತಿ ಎರಡನೇ ಹಂತದ ಕುಡಿಯುವ ಯೋಜನೆಯಿಂದ ನೀರು ಹರಿಸುವ ಉದ್ದೇಶ ಹೊಂದಿದ್ದು ಕೆರೆಯ ಹೂಳನ್ನು ತೆಗೆದುಹಾಕಲಾಗಿದೆ.

ಫಲವತ್ತಾದ ಕೃಷಿ ಭೂಮಿ ವಶಪಡಿಕೊಳ್ಳಬಾರದೆಂಬ ನಿಯಮವಿದೆ. ಆದರೂ ನಗರಸಭೆ ಯಾವುದೇ ಮುಲಾಜಿಲ್ಲದೆ ದಲಿತರಿಂದ ಭೂಮಿ ಕಿತ್ತುಕೊಂಡಿದೆ. ಇದು ಅಧ್ಯಕ್ಷರು, ಶಾಸಕರು, ಸಂಸದರು ಎಲ್ಲರಿಗೂ ಗೊತ್ತಿರುವ ಸಂಗತಿ. ಪರಿಣಾಮವಾಗಿ ಆ ಭೂಮಿಯನ್ನೇ ತಮ್ಮ ಬದುಕಿನ ಆಧಾರ ಮಾಡಿಕೊಂಡಿದ್ದ ಕುಟುಂಬಗಳು ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕಿಕೊಳ್ಳುವಂತಾಗಿದೆ.

ಭೂಮಿಯನ್ನು ವಶಪಡಿಸಿಕೊಂಡಿದ್ದರಿಂದ ಅವರಿಗೆ ಘೋಷಿಸಿರುವ ಪರಿಹಾರವೂ ಸ್ವಲ್ಪ ಮೊತ್ತದ್ದೇ! ಒಂದು ಎಕರೆಗೆ ಕೇವಲ ಕೆಲವೇ ಸಾವಿರ ರೂಪಾಯಿಗಳು ಮಾತ್ರ. ಇವರು ದಲಿತರು, ಯಾರ ಮೇಲೂ ಪ್ರಭಾವ ಬೀರದಷ್ಟು ಅಶಕ್ತರು.


ಅದೆಲ್ಲಕ್ಕಿಂತ ಮುಖ್ಯವಾಗಿ ಇಲ್ಲಿ ಮತ್ತೊಂದು ಸಂಚು ಅಡಗಿದೆ. ಅಜ್ಜಗೊಂಡನ ಹಳ್ಳಿಯಲ್ಲಿರುವ ಈ ದಲಿತರ ಭೂಮಿಯಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪಿಸಲು ತುಮಕೂರು ನಗರಸಭೆ ಮುಂದಾಗಿದೆ. ಈ ಪ್ರದೇಶ ಬರುವುದು ಸುರೇಶ್‌ಗೌಡ ಎಂಬ ಯಡಿಯೂರಪ್ಪ ಬೆಂಬಲಿಗ ಶಾಸಕನ ಕ್ಷೇತ್ರ ವ್ಯಾಪ್ತಿಯಲ್ಲಿ. ಆದರೂ ... ಬಗ್ಗೆ ಈವರೆಗೆ ಆತ ತುಟಿ ಬಿಚ್ಚಿಲ್ಲ. ಯಾಕೆಂದರೆ ಕೆ... ಬರುವುದು ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಕ್ಷೇತ್ರ ವ್ಯಾಪ್ತಿ...

ದಟ್ಟ ಹಸಿರಿನ ನಡುವೆ ಇರುವ ಈ ಪ್ರದೇ... ಘನತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣ ಯೋ... ಇದೆ. ತುಮಕೂರು ನಗರದಲ್ಲಿ ಪ್ರತಿನಿತ್ಯ ಉತ್ಪತ್ತಿಯಾ... ನೂರಾರು ಟನ್ ಕಸವನ್ನು ಇಲ್ಲಿಗೆ ತೆಗೆದುಕೊಂಡು ... ಸುರಿಯುವ ಉದ್ದೇಶ ನಗರಸಭೆಯದ್ದು.

ಸಹಜವಾಗಿಯೇ ಇದು ಸ್ಥಳೀಯರನ್ನು ಕೆರ... "ನಮಗೆ ಮಾಹಿತಿಯೇ ನೀಡದೆ ನಮ್ಮ ಭೂಮಿ... ಈ ಯೋಜನೆಗೆ ವಶಪಡಿಸಿಕೊಳ್ಳಲಾಗಿದೆ. ಇಲ್ಲಿ ಘನ... ವಿಲೇವಾರಿ ಘಟಕ ಆರಂಭಿಸುವುದರಿಂದ ಪ... ಹಾಳಾಗುವುದಿಲ್ಲವೇ? ಇಲ್ಲಿನ ಜೀವರಾಶಿ ಹಾಳಾಗಿ... ಜೀವ ವೈವಿಧ್ಯ ನಾಶವಾದಂತೆ ಅಲ್ಲವೆ? ನಮ್ಮ ... ಪರಿಸರವನ್ನು ರಕ್ಷಿಸಬಾರದೇ? ತೆಂಗು, ಮಾವು ... ಅಕ್ಕಪಕ್ಕದಲ್ಲಿ ಬೆಳೆಯುತ್ತಿರುವ ಬತ್ತ ಮತ್ತು ... ಬೆಳೆಯಲ್ಲವೇ? ಇಲ್ಲಿ ಕಸಹಾಕುವುದರಿಂದ ನಮ್ಮ ... ನಮ್ಮ ದನಕರು ಹಾಗೂ ಇತರೆ ಸಾಕುಪ್ರಾಣಿಗಳು ... ಗಾಳಿ ಸೇವಿಸಬೇಕೆ? ನಾವು ವಿಷದ ನೀರು ಕುಡಿಯು... ನಮಗೆ ಯಾವುದಾದರೂ ಕಾಯಿಲೆ ಬಂದರೆ ಅದ... ನಗರದ ಜನರಿಗೆ ಸಂತೋಷ ಆಗುತ್ತದೆಯೇ? ಇಲ್ಲಿ ಬ... ಮಳೆಯ ನೀರು ಹೆಬ್ಬಾಕ ಕೆರೆಗೆ ಹರಿದು ಹೇಮ... ನೀರಿನಲ್ಲಿ ಸೇರಿಹೋದರೆ ಅಲ್ಲಿನ ಮಲಿನವಾಗು ವುದಿ... ಆ ನೀರನ್ನು ನಗರದ ಜನತೆ ಕುಡಿಯುವ್ವ ದ... ರೋಗಗಳು ಹರಡುವುದಿಲ್ಲವೇ? ನಿಮ್ಮ ಕಸ ನ... ವಿಷ" ಎನ್ನುತ್ತಾ ಅವರೆಲ್ಲ ಆಕ್ರೋಶ ವ್ಯಕ್ತಪಡಿಸುತ್ತಿ...

ಕಸ ಬಿಸಾಡಲು ದಲಿತರ ಭೂಮಿ ವಶ...


ಕೋದಂಡರಾಮಯ್ಯರಿಗೆ ಕಾಂಗ್ರೆಸ್ಸಿಗರೇ ಅಡ್ಡಗಾಲು



ಮುಂದಿನ ಬಾರಿ ಏನೇ ಆದರೂ ಕಾಂಗ್ರೆಸ್ ಟಿಕೆಟ್ ಪಡೆಯಬೇಕೆಂಬ ಇರಾದೆ ಕೋದಂಡರಾಮಯ್ಯನವರದ್ದು. ಅವರ ಪರವಾಗಿ ಕಾಂಗ್ರೆಸ್ ಧುರೀಣ ಸಿದ್ದರಾಮಯ್ಯ ಇದ್ದಾರೆ. ಅಷ್ಟೇ ಅಲ್ಲದೆ, ಕೋದಂಡರಾಮಯ್ಯನವರು ಎಚ್.ಕೆ.ಪಾಟೀಲರ ಜೊತೆಯೂ ಸಂಪರ್ಕ ಹೊಂದಿದ್ದಾರೆ. ಆದರೂ ಕೋದಂಡರಾಮಯ್ಯನವರಿಗೆ ಅವರ ಪಕ್ಷದ ಕೆಲವರೇ ಅಡ್ಡಗಾಲು ಹಾಕುತ್ತಿದ್ದಾರೆ. ಹಿರಿಯೂರಿನಲ್ಲಿ ಗೊಲ್ಲರ ಮತಗಳು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಕೆ.ಆರ್.ಪುರದ ಮಾಜಿ ಶಾಸಕ ಕೃಷ್ಣಪ್ಪ ತನ್ನ ಅಳಿಯನಿಗೇ ಕಾಂಗ್ರೆಸ್ ಟಿಕೆಟ್ ಕೊಡಿಸಲು ಭರ್ಜರಿಯಾಗಿ ಪ್ರಯತ್ನಿಸುತ್ತಿದ್ದಾರೆ. ಅಷ್ಟೇ ಅಲ್ಲದೆ ಇನ್ನೂ ಹಲವು ಮೇಲುವರ್ಗದವರೂ ಅಧಿಕಾರಕ್ಕಾಗಿ ಹಪಹಪಿಸುತ್ತಿದ್ದು ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ.

ಇವೆಲ್ಲವನ್ನು ಕೋದಂಡರಾಮಯ್ಯ ದಾಟಿ ಬಂದರೆ ಅವರು ಸುಧಾಕರನೆಂಬ ಸಮಯಸಾಧಕನಿಗೆ ಗಟ್ಟಿಯಾದ ಸವಾಲನ್ನೊಡ್ಡಬಲ್ಲರು.

ಹಿರಿಯೂರು: ಸುಧಾಕರನಿಗೆ ಕಾದಿದೆ ಸೋಲು



...ಾಕರ್

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ವಿಧಾನಸಭಾಕ್ಷೇತ್ರ ...ನಾ-ಬೆಂಗಳೂರು ಹೆದ್ದಾರಿಯಲ್ಲೇ ಬರುವ ತಾಲ್ಲೂಕು. ...ಗುತ ಇದು ತಾಲ್ಲೂಕು ಕೇಂದ್ರವೆಂದು ಗುರುತಿಸುವುದು ...ವಾಗುತ್ತದೆ. ಕೆ.ಎಚ್.ರಂಗನಾಥ ಮತ್ತು ಮಂಜು...ರೆಂಬ ಪರಿಶಿಷ್ಟ ಜಾತಿಯ ಎಡಗೈ-ಬಲಗೈ ದಿಗ್ಗಜರು ...ಾ ರಾಜಕೀಯ ಚದುರಂಗದಾಟಕ್ಕೆ ಈ ಕ್ಷೇತ್ರವನ್ನು ...್ಕು ದಶಕಗಳ ಕಾಲ ನಿರರ್ಗಳವಾಗಿಯೇ ಬಳಸಿಕೊಂಡರು. ...ನಾಥ-ಮಂಜುನಾಥರ ಏಕತಾನತೆಯ ರಾಜಕೀಯದಿಂದ ...್ಬಗಟ್ಟಿದ್ದ ಹಿರಿಯೂರು ಕ್ಷೇತ್ರವನ್ನು 2008 ರ ...ಿನಸಭಾ ಚುನಾವಣೆ ಸಂದರ್ಭದಲ್ಲಿ ಸಾಮಾನ್ಯ ಕ್ಷೇತ್ರ ...ು ಘೋಷಿಸಿದಾಗಲೇ ಇಲ್ಲಿನ ರಾಜಕೀಯಕ್ಕೆ ರಂಗು ...ವದ್ದು.

...ಚಳ್ಳಕೆರೆ ಕ್ಷೇತ್ರ ಪರಿಶಿಷ್ಟ ವರ್ಗಕ್ಕೆ ಮೀಸಲಾಗಿದ್ದೇ ಕೋಟಿಗಳ ಲೆಕ್ಕದಲ್ಲಿ ದುಡ್ಡಿತ್ತು, ಈ ಇಬ್ಬರೂ ಹುನ್ನಾರದ ರಾಜಕಾರಣದಲ್ಲಿ ಪಂಟರುಗಳಾಗಿದ್ದವರೇ. ಸುಧಾಕರ ಪಕ್ಕದ ಚಳ್ಳಕೆರೆಯವನಾದರೂ ಹಿರಿಯೂರಿಗೆ ಪರಿಚಿತನಾಗಿದ್ದ. ಹಾಗೆಯೇ ಉಮಾಪತಿ ಹಿರಿಯೂರಿನ ಅಳಿಯ. ಸಾಲದ್ದಕ್ಕೆ ಅವನ ಜಾತಿಯ ಗೊಲ್ಲರ ಮತಗಳೂ ಇಲ್ಲಿ ಹೆಚ್ಚಾಗಿದ್ದರಿಂದ ಆತ ಇಲ್ಲಿಗೆ ವಲಸೆ ಬಂದಿದ್ದ.

ಸುಧಾಕರನ ಗೆಲುವಿಗೆ ಆತ ಹಂಚಿದ ಹೆಂಡ, ದುಡ್ಡು ಮತ್ತು ಸೀರೆಗಳು ಅದೆಷ್ಟು ಕಾರಣವೋ ಅಷ್ಟೇ ಕಾರಣ ರಾಷ್ಟ್ರೀಯ ಪಕ್ಷಗಳು ಟಿಕೆಟ್ಟು ಹಂಚಿದ್ದ ವಿಧಾನ. ಕಾಂಗ್ರೆಸ್ ಪಕ್ಷವು ಅಂತಿಮ ಗಳಿಗೆಯಲ್ಲಿ ಗೀತಾ ನಂದಿನಿಗೌಡ ಎಂಬ ಜಿಲ್ಲಾ ಪಂಚಾಯತಿ ಸದಸ್ಯೆಯನ್ನು ಕಣಕ್ಕೆ ಇಳಿಸಿತ್ತು. ಕೆ.ಆರ್.ಪುರದ ಕೃಷ್ಣ ಮತ್ತು ಆತನ ಅಳಿಯ ಈ ಗೀತಾ ಬೆನ್ನಿಗಿದ್ದರು. ಆದರೆ ಗೀತಾ ಜಿಲ್ಲಾ ಪಂಚಾಯತಿ ಕ್ಷೇತ್ರದಲ್ಲೇ

...2004ರಲ್ಲಿ ಚಳ್ಳಕೆರೆಯಿಂದ ಗೆದ್ದು ಶಾಸಕ ಮತ್ತು ...ತ್ರಿಯಾಗಿದ್ದ ಸುಧಾಕರ 2008ರಲ್ಲಿ ಹಿರಿಯೂರು ...ದಲ್ಲಿ ತನ್ನ ರಾಜಕೀಯ ಅಸ್ತಿತ್ವವನ್ನು ಕಂಡುಕೊಳ್ಳಲು ...ಯಸಿದ. ಚಳ್ಳಕೆರೆಯಂತೆ ಹಿರಿಯೂರಿ...ಲ್ಲಿ ಸುಧಾಕರ ಪಕ್ಷೇತರನಾಗಿಯೇ ...ಸಿದ. ಸುಧಾಕರ ಹಿರಿಯೂರಿಗೆ ...ರಿಕೊಂಡಿದ್ದೇ ತಡ ಈ ಕ್ಷೇತ್ರ ದುಡ್ಡು ...ು, ಖಂಡದ ರುಚಿಗೆ ಬಲಿಯಾಯಿತು. 2008ರ ಚುನಾವಣಾ ಕಣದಲ್ಲಿ ಒಟ್ಟು ...ಸ್ಪರ್ಧಿಗಳಿದ್ದರು. ಆದರೆ ಚಳ್ಳಕೆರೆಯ ...ಜಿ ಶಾಸಕ ಸುಧಾಕರ ಮತ್ತು ...ಲ್ಲಕೆರೆಯಿಂದ ವಲಸೆ ಬಂದ ಮಾಜಿ ...ಕ ಉಮಾಪತಿಯ ಬಳಿ ಮಾತ್ರ



ಮಂಜುನಾಥ್

ಹೆಸರಿಲ್ಲದಿದ್ದ ಹೆಣ್ಣುಮಗಳು. ಆಕೆಯನ್ನು ಗೆಲ್ಲಿಸಲು ಕೋದಂಡರಾಮಯ್ಯ ಅದೆಷ್ಟು ಪ್ರಯತ್ನ ಪಟ್ಟರೂ ಸಾಧ್ಯವಾಗಲಿಲ್ಲ. ಸಿದ್ದರಾಮಯ್ಯ ಕೂಡ ಕೈಚೆಲ್ಲಿದರು.

ಜೆ.ಡಿ.ಎಸ್.ನಿಂದ ವಕ್ಕಲಿಗರ ಯಶೋಧರ ಎಂಬ ಎಳಸು ಅಭ್ಯರ್ಥಿಯನ್ನು ಜಾತಿಕಾರಣಕ್ಕೆ ನಿಲ್ಲಿಸಲಾಗಿತ್ತು. ಜಿ.ಎಸ್.ಮಂಜುನಾಥ ಕೈ ಪಕ್ಷದಿಂದ ಟಿಕೆಟ್ ಸಿಗದ ಕಾರಣ ಪಕ್ಷೇತರನಾಗಿ ನಿಂತ. ತನ್ನ ಹಣಬಲದಿಂದಲೇ ಸುಧಾಕರ ತನ್ನ ಎಲ್ಲಾ ಪ್ರತಿಸ್ಪರ್ಧಿಗಳನ್ನು ಸೋಲಿಸಿದ.

ಹಿರಿಯೂರು ಕ್ಷೇತ್ರದ ವಿಚಿತ್ರ ಏನೆಂದರೆ ಇಲ್ಲಿಂದ ಗೆದ್ದ ಎಲ್ಲ ಶಾಸಕರು ಮಂತ್ರಿಸ್ಥಾನವನ್ನು ಪಡೆದವರೇ. ಅದಕ್ಕೆ ಉದಾಹರಣೆ, ಈ ಹಿಂದೆಯೂ ಈ ಕ್ಷೇತ್ರದಿಂದ ಗೆದ್ದಿದ್ದ ರಂಗನಾಥ ಮತ್ತು ಮಂಜುನಾಥ್ ಮಂತ್ರಿಗಳಾಗಿದ್ದು. ಅದೇ ರೀತಿ ಸುಧಾಕರ ಇಲ್ಲಿಂದ ಪಕ್ಷೇತರನಾಗಿ ಗೆದ್ದರೂ ಆತನೂ ರಾಜ್ಯ ರಾಜಕಾರಣದ ಲಾಭ ಪಡೆದು ಮಂತ್ರಿಯಾದ.

ಬಿಜೆಪಿ ಇತರೆ ಪಕ್ಷಗಳಿಗಿಂತ ಹೆಚ್ಚು ಸ್ಥಾನಗಳನ್ನು ಗೆದ್ದಿದ್ದರೂ ಸ್ಪಷ್ಟ ಬಹುಮತವನ್ನು ಪಡೆದಿರಲಿಲ್ಲ. ಯಡಿಯೂರಪ್ಪ ಮುಖ್ಯಮಂತ್ರಿಯಾಗಲು ಚಡಪಡಿಸುತ್ತಿದ್ದರು. ಆಗ ಬಳ್ಳಾರಿಯ ರೆಡ್ಡಿ ಗ್ಯಾಂಗ್ ಪಕ್ಷೇತರ ಶಾಸಕರನ್ನು ತನ್ನ ಹಣ ಬಲದಿಂದ ಪಟಾಯಿಸಲಾರಂಭಿಸಿತು. ಹೊಸದುರ್ಗದಿಂದ ಗೂಳಿಹಟ್ಟಿ ಶೇಖರ ಗೆದ್ದು ಇನ್ನೂ ಒಂದು ಗಂಟೆ ಆಗಿರಲಿಲ್ಲ. ಗಣಿ ಮಾಫಿಯಾದ ಶ್ರೀರಾಮುಲು ಗೂಳಿಹಟ್ಟಿಯನ್ನು ಎತ್ತಾಕಿಕೊಂಡು ಹೋಗಿ ಯಡ್ಡಿಯ ಬುಡದಲ್ಲಿ ಕೆಡವಿದ್ದ. ಹಾಗೆಯೇ ಈ ಸುಧಾಕರನನ್ನೂ ರೆಡ್ಡಿ ಗ್ಯಾಂಗು ಪಟಾಯಿಸಿಕೊಂಡೋಯಿತು. ಬಿಜೆಪಿಯನ್ನು ಅಧಿಕಾರಕ್ಕೆ ತರಲು 'ನೆರವು' ನೀಡಿದ್ದಕ್ಕೆ ಗೂಳಿಹಟ್ಟಿ ಮತ್ತು ಸುಧಾಕರ ಮಂತ್ರಿ ಪದವಿಗಳನ್ನು ಪಡೆದರು. ಸಮಾಜ ಕಲ್ಯಾಣ ಇಲಾಖೆಯನ್ನು ಪಡೆದ ಸುಧಾಕರ ಅಲ್ಲಿ ಏನು ಕಿಸಿದ ಎಂಬುದು ಇವತ್ತಿಗೂ ನಿಗೂಢವಾಗಿರುವುದು ಮಾತ್ರ ಸತ್ಯ.




ರಂಗನಾಥ್

ಸುಧಾಕರನ ಅಧಿಕಾರಾವಧಿಯಲ್ಲಿ ಹಿರಿಯೂರು ಅನಾಥವಾಗಿದೆ. ಭ್ರಷ್ಟಾಚಾರವೇ ಇಲ್ಲಿ ತಾಂಡವವಾಡುತ್ತಿದ್ದು ರಾಷ್ಟ್ರೀಯ ಹೆದ್ದಾರಿಯಿಂದ ಹಳ್ಳಿಕಟ್ಟೆ ರಸ್ತೆಯ ಕಾಮಗಾರಿ ತನಕ ಲಕ್ಷಾಂತರ ರೂಪಾಯಿಗಳ ಅನುದಾನ ಬಿಡುಗಡೆ ಆಗಿದ್ದರೂ ರಸ್ತೆಗಳೂ ಮಾಯ, ಹಣವೂ ಮಾಯ ಎಂಬಂತಾಗಿದೆ. ಯಾರಾದರೂ "ಹಿರಿಯೂರಿಗೆ ನೀನು ಏನು ಮಾಡಿದೆ?" ಎಂದು ಸುಧಾಕರನನ್ನು ಕೇಳಿದರೆ "ಮೊರಾರ್ಜಿ ಶಾಲೆಗೆ 12 ಕೋಟಿ, ಇಂಜಿನಿಯರಿಂಗ್ ಕಾಲೇಜು, ಐಟಿಐ ಕಾಲೇಜು ತಂದಿದ್ದೀನಿ" ಎನ್ನುತ್ತಾನೆ. ಆದರೆ ವಾಸ್ತವವಾಗಿ ಇವ್ಯಾವುದನ್ನೂ ಸುಧಾಕರ ಕಷ್ಟಪಟ್ಟು ತಂದಿದ್ದಲ್ಲ, ಅವೆಲ್ಲ ಯಾವ ಪಕ್ಷ ಅಧಿಕಾರದಲ್ಲಿದ್ದರೂ ಪ್ರತೀ ತಾಲ್ಲೂಕಿನಲ್ಲಾಗಬೇಕಾದ ಸಹಜ ಕೆಲಸಗಳು. ಆದರೆ ಅವನ್ನೇ ತನ್ನ ಸಾಧನೆ ಎಂದು ಸುಧಾಕರ ಪ್ರತಿಬಿಂಬಿಸುವ ಮೂಲಕ ಹಿರಿಯೂರಿನ ಮತದಾರನ ಕಿವಿಗೆ ಕಮಲದ ಹೂ ಮುಡಿಸಲು ಯತ್ನಿಸುತ್ತಿದ್ದಾನೆ.

ಇಲ್ಲಿಗೆ ಬಂದಿರುವ ಅನುದಾನದ ಮೊತ್ತವನ್ನು ನೋಡಿದರೆ ಹಿರಿಯೂರು ಅಭಿವೃದ್ಧಿ ಕಂಡು ಹಿರಿಹಿರಿ ಹಿಗ್ಗಬೇಕಾಗಿತ್ತು, ಆದರೆ ಇಡೀ ಕ್ಷೇತ್ರ ಸೊರಗುತ್ತಿದೆ. ನೀರಿಲ್ಲದೆ ಕೊರಗುತ್ತಿದೆ. ಭದ್ರಾ ಮೇಲ್ದಂಡೆ ಯೋಜನೆಗೆ ಸರ್ಕಾರ ತಾಂತ್ರಿಕವಾಗಿ ಒಪ್ಪಿಗೆ ನೀಡಿದ್ದರೂ ಕಾಮಗಾರಿ ಇನ್ನೂ ಆರಂಭವಾಗಿಲ್ಲ.

ಬಿ.ಎಲ್.ಗೌಡರು ಚಿತ್ರದುರ್ಗ ಮತ್ತು ಕಳ್ಳಂಬೆಳ್ಳ ಈ ಎರಡೂ ಕ್ಷೇತ್ರಗಳಿಂದ ಶಾಸಕರಾಗಿ ಮಂತ್ರಿಯಾಗಿದ್ದಾಗ ಕಟ್ಟಿದ ವಾಣಿವಿಲಾಸ ಸಕ್ಕರೆ ಕಂಪನಿ ಮುಚ್ಚಿಹೋಗಿ ಹದಿನೈದು ವರ್ಷಗಳಾಗಿವೆ. ಈ ಕಾರ್ಖಾನೆ ಮುಚ್ಚಿದ ನಂತರ ಸಾವಿರಾರು ಕಾರ್ಮಿಕರು ಬೀದಿಗೆ ಬಿದ್ದಿದ್ದಾರೆ. ಇದರ ಬಗ್ಗೆ ರಂಗನಾಥ ಮತ್ತು ಮಂಜುನಾಥರೂ ಮೈ ಕೆರೆದುಕೊಳ್ಳಲಿಲ್ಲ, ಈಗ ಸುಧಾಕರನೂ ಇದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ, ವಾಣಿವಿಲಾಸ ಸಾಗರ ಎಂಬುದೊಂದೇ ಹಿರಿಯೂರಿನಲ್ಲಿ ಕೈಗಾರಿಕೆ ಎಂಬುದು ಇದ್ದದ್ದು. ವಾಣಿ ವಿಲಾಸ ಸಾಗರ ಸಕ್ಕರೆ ಕಂಪನಿ ಮುಚ್ಚಲ್ಪಟ್ಟದ್ದೇ ನೀರಿನ ಕೊರತೆಯಿಂದ ಎಂಬ ಸತ್ಯದ ಅರಿವಿದ್ದರೂ ಸುಧಾಕರ ಸರ್ಕಾರದ ಮೇಲೆ ಒತ್ತಡ ತಂದು ಭದ್ರಾ ಮೇಲ್ದಂಡೆ ಯೋಜನೆಗೆ ಪಕ್ಕಾಚಾಲನೆ ನೀಡಲಿಲ್ಲ.



ವಾಣಿ ವಿಲಾಸ ಸಾಗರ ಸಕ್ಕರೆ ಕಂಪನಿ

ಸುಧಾಕರ ವಿಚಿತ್ರ ಬಾಡಿಲಾಂಗ್ವೇಜಿನ ಬಫೂನ್ ರಾಜಕಾರಣಿ. ಜಾತಿ-ಜಾತಿಗಳ ನಡುವೆ ಸಣ್ಣಗೆ ಬತ್ತಿ ಇಟ್ಟು ಲಾಭ ಪಡೆಯುವ ವಿಲಕ್ಷಣ ಗುಣದವನು. "ನಾಯಕ ಸಮುದಾಯಕ್ಕೆ ಏಕಲವ್ಯ ವಸತಿಶಾಲೆ ತಂದೆ, ಮುರಾರ್ಜಿ ಶಾಲೆ ಮತ್ತಿನ್ಯಾರಿಗೋ ತಂದೆ" ಎನ್ನುವುದು ಇವನ ಸ್ಲೋಗನ್ನಾಗಿ ಬಿಟ್ಟಿದೆ. ಈತ ಕ್ಷೇತ್ರಕ್ಕೇನು ಮಾಡಿರದಿದ್ದರೂ ಮತದಾರರನ್ನು ಯಾಮಾರಿಸುವ ಮೂಲಕ ತಾನು ಹಿರಿಯೂರಿನ ಪರ್ಮನೆಂಟ್ ಶಾಸಕ ಎಂಬ ಅಹಂಕಾರದಲ್ಲಿ ಸುಧಾಕರ ತೇಲಾಡುತ್ತಿದ್ದಾನೆ.

ಮುಂದಿನ ಚುನಾವಣೆಯಲ್ಲಿ ಸುಧಾಕರ ಎಂಬ ಬಫೂನ್ ರಾಜಕಾರಣಿಯನ್ನು ಸೋಲಿಸಲು ಕಾಂಗ್ರೆಸ್ಸಿನ ಕೋದಂಡರಾಮಯ್ಯ ಕಾದಿದ್ದಾರೆ. ಮಾಜಿ ಪೊಲೀಸ್ ಅಧಿಕಾರಿ ಮತ್ತು ಮಾಜಿ ಸಂಸದರಾದ ಕೋದಂಡರಾಮಯ್ಯನವರಿಗೆ ಸಿದ್ದರಾಮಯ್ಯನವರೇ ರಾಜಕೀಯ ಗಾಡ್‌ಫಾದರ್. ಕಳೆದ ಬಾರಿ ಕೋದಂಡರಾಮಯ್ಯನವರಿಗೆ ಟಿಕೆಟ್ ಕೊಡಿಸಲು ಸಿದ್ದರಾಮಯ್ಯ ಯತ್ನಿಸಿದ್ದರೂ ಕಾಂಗ್ರೆಸ್ ಹೈಕಮಾಂಡ್ ಕೈಕೊಟ್ಟಿತ್ತು.

ಕಳೆದ ಬಾರಿ ಕೋದಂಡರಾಮಯ್ಯನವರು ಸಂಸದರಾಗಿ ಗೆದ್ದಾಗ ಅವರ ಬೆನ್ನಿಗೆ ಚಿತ್ರದುರ್ಗದ ಪ್ರಗತಿಪರ ಗೆಳೆಯರ ದಂಡಿತ್ತು. ಭದ್ರಾ ಮೇಲ್ದಂಡೆ ಯೋಜನೆಯ ಹೋರಾಟಗಾರರಿದ್ದರು. "ಆ ಚುನಾವಣೆಯಲ್ಲಿ ಹಿರಿಯೂರು ನನಗೆ ಲೀಡ್ ಕೊಟ್ಟಿತ್ತು, ಈಗ ಇಲ್ಲಿಂದ ಶಾಸಕಸ್ಥಾನಕ್ಕೆ ನಾನು ಸ್ಪರ್ಧಿಸಿದರೆ ಈ ಕ್ಷೇತ್ರ ನನ್ನ ಗೆಲುವಿನ ನೆರವಾಗುತ್ತೆ" ಎಂದು ಕೋದಂಡರಾಮಯ್ಯ ನಂಬಿದ್ದಾರೆ. ಆದರೆ ಕಳೆದ ಹತ್ತು ವರ್ಷಗಳಲ್ಲಿ ರಾಜಕಾರಣದ ಶೈಲಿಯೇ ಬದಲಾಗಿದೆ. ಮತದಾರರಿಗೆ ಈಗ ಹೋರಾಟ, ಚಳವಳಿ, ಸಿದ್ಧಾಂತ, ಜನಪರ ನಿಲುವು ಇವೆಲ್ಲ ಬೇಕಾಗಿಲ್ಲ. ಬದಲಾಗಿ ದುಡ್ಡಿದ್ದವನೇ ದೊಡ್ಡಪ್ಪ ಎಂಬ ಭಾವನೆ ಮತದಾರರದ್ದು. ಇದಕ್ಕೆ ಉತ್ತಮ ಉದಾಹರಣೆ ದಲಿತ ಸಂಘರ್ಷ ಸಮಿತಿಯ ಜಯಣ್ಣ. ಇವರು ಚಳವಳಿಯ ಹಿನ್ನೆಲೆಯನ್ನು ಪರಿಗಣನೆಗೆ ತೆಗೆದುಕೊಂಡರೆ ಮತದಾರರು ಎಂದೋ ಇವರನ್ನು ಗೆಲ್ಲಿಸಬೇಕಿತ್ತು. ಆದರೆ ಜಯಣ್ಣ ಸತತವಾಗಿ ಸೋಲುತ್ತಲೇ ಬಂದಿದ್ದಾರೆ.

ಇನ್ನು ಉಮಾಪತಿ ಜೆಡಿಎಸ್ ತೊರೆದಿದ್ದಾನೆ. ಸಮಯಸಾಧಕ ಉಮಾಪತಿ ಅಧಿಕಾರವಿರದೆ ಇರಲಾರದಷ್ಟು ಹಸಿವಿನವನು. ಈಗ ಈತ ಶ್ರೀರಾಮುಲು ಹಿಂದೆ ವಾಲಾಂಜನೇಯನಾಗಿ ಕುಪ್ಪಳಿಸುತ್ತಿದ್ದಾನೆ.


ಸುಧಾಕರ ಮತ್ತು ಉಮಾಪತಿಯ ಬಳಿ ದುಡ್ಡಿದೆ. ಇವರಿಬ್ಬರ ಎದುರು ಕೋದಂಡರಾಮಯ್ಯ ಸಪ್ಪೆಯಾಗಿ ಕಾಣಿಸುತ್ತಾರೆ. ಆದರೆ ಕ್ಷೇತ್ರಕ್ಕೆ ಒಳ್ಳೆಯದಾಗಬೇಕೆಂದರೆ ಕೋದಂಡರಾಮಯ್ಯನವರನ್ನು ಮತದಾರ ಮುಂದಿನ ಚುನಾವಣೆಯಲ್ಲಿ ಗೆಲ್ಲಿಸುವುದು ಸದ್ಯದ ಅಗತ್ಯ ಮತ್ತು ಅನಿವಾರ್ಯವಾಗಿದೆ.

ಕೈ ಪಕ್ಷ ಅವರಿಗೆ ಕೈ ಕೊಡದಿದ್ದರೆ ಸಾಕು.

● ಎನ್.ಷಣ್ಮುಖ

...ಈ ಸಮಸ್ಯೆ ಕುರಿತು ಸ್ಥಳೀಯ ಪರಿಸರವಾದಿಗಳು ...ನವಾಗಿರುವುದೂ ಇಲ್ಲಿನ ಜನರಲ್ಲಿ ಕೋಪವನ್ನುಕ್ಕಿಸಿದೆ. ...ದಾನಿಕೆರೆಯಲ್ಲಿ ಮಲಿನ ನೀರು ನಿಂತರೆ, ...ರಾಯನದುರ್ಗದಲ್ಲಿ ವಿವಿ ಕಟ್ಟಡ ಕಟ್ಟಲು ಹೋದರೆ ...ರ ಹಾಳಾಗುತ್ತದೆ ಎಂದು ಬೊಬ್ಬೆ ಹೊಡೆಯುವ ...ರವಾದಿಗಳ ಕಣ್ಣಿಗೆ ನಮ್ಮ ಊರು ಕಾಣುತ್ತಿಲ್ಲವೇಕೆ? ...ಹೋದರು ಪರಿಸರವಾದಿಗಳು" ಎಂದು ಅವರೆಲ್ಲ ...ುತ್ತಿದ್ದಾರೆ.

...ಜನರ ಪ್ರತಿರೋಧದ ನಡುವೆಯೂ ...ಸೊಗಡು ಶಿವಣ್ಣ ಮತ್ತು ಸಂಸದ ...್. ಬಸವರಾಜು ಅವರ ಕುಮ್ಮಕ್ಕಿ... ಅಧಿಕಾರಿಗಳು ಇಲ್ಲಿನ ಜನರ ಮೇಲೆ ...ಬೀಳುತ್ತಿದ್ದಾರೆ. ಪೊಲೀಸರನ್ನು ...ದೆ ಇಟ್ಟುಕೊಂಡು ಜನರ ಮೇಲೆ ...ನ್ಯ ನಡೆಸುತ್ತಿದ್ದಾರೆ. "ಈ ಇಬ್ಬರು ...ಿ ಮುಖಂಡರು ತಮ್ಮ ಮನೆಯ ...ದಿನ ಕಸವನ್ನು ನಮ್ಮೂರಿನ ಶುದ್ಧ ...ರದಲ್ಲಿ ಸುರಿಯುವಂತೆ ನಗರಸಭೆ ...ುಕ್ತೆ ರೋಹಿಣಿ ಸಿಂಧೂರಿ ಮೇಲೆ ...ಹೇರುತ್ತಿದ್ದಾರೆ ಎಂಬುದು ಇಲ್ಲಿನ ...ಗೆ ಅರಿವಾಗಿದೆ.



ಪರಮೇಶ್ವರ್

...ಳೆದ ಹಲವಾರು ವರ್ಷಗಳಿಂದ ...ಭೂಮಿಯನ್ನು ಕಳೆದುಕೊಂಡವರೊಂದಿಗೆ ಆ ಭಾಗದ ...ಮತ್ತಲಿನ ನೂರಾರು ರೈತರು ಸೇರಿಕೊಂಡು ಪ್ರತಿಭಟಿಸಿ...ತ್ತಿದ್ದಾರೆ. ಆದರೂ ಆಯುಕ್ತೆ ರೋಹಿಣಿ ಸಿಂಧೂರಿ ...ಯಾವ ಹೋರಾಟಕ್ಕೂ ಕಿಂಚಿತ್ತು ಕಿಮ್ಮತ್ತನ್ನು ...ಿಲ್ಲ. ಇತ್ತೀಚೆಗೆ ಕೆಪಿಸಿಸಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್ ...ಪ್ರತಿಭಟನಾಕಾರರನ್ನು ಬೆಂಬಲಿಸಿ ಅವರೊಂದಿಗೆ ...ಕೂತರು. ಅಲ್ಲಿಗೆ ಆಯುಕ್ತೆ ರೋಹಿಣಿ ಅವರನ್ನು ...ವಂತೆ ಪೊಲೀಸರಿಗೆ ಪರಮೇಶ್ವರ್ ತಿಳಿಸಿದರು. ...ಟನಾ ನಡೆಯುತ್ತಿದ್ದ ಸ್ಥಳಕ್ಕೆ ಬಂದ ಆಯುಕ್ತೆ ರೋಹಿಣಿ ಕೆಪಿಸಿಸಿ ಅಧ್ಯಕ್ಷರ ಮನವಿಗೂ ಕಿವಿಗೊಡಲಿಲ್ಲ. "ನೀವು ಪ್ರತಿಭಟನೆ ನಡೆಸಿ, ನಾವು ತಡೆಗೋಡೆ ನಿರ್ಮಿಸುತ್ತೇವೆ" ಎಂದು ಧಮಕಿಯೂ ಹಾಕಿದರು. ಇದರಿಂದ ವಿಚಲಿತರಾದ ಪರಮೇಶ್ವರ್ "ಈಯಮ್ಮನಿಗೆ ಕಾನೂನು ಗೊತ್ತಿಲ್ಲ, ಮಾನವೀಯತೆ ಇಲ್ಲ. ಮುಖ್ಯಮಂತ್ರಿ ಜೊತೆ ಮಾತನಾಡುತ್ತೇನೆ" ಎಂದರು. ಅಲ್ಲಿದ್ದ ಜನ "ಎಷ್ಟು ಧಿಮಾಕು ಈಕೆಗೆ" ಎಂದು ಗೊಣಗಿಕೊಂಡದ್ದೇ ಅವತ್ತಿನ ಸಾಧನೆ ಎಂಬಂತಾಯಿತು.

ಈ ಹಿಂದೆ ಇದೇ ತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣಕ್ಕೆ ಸೀಬಿ, ವಸಂತನರಸಾಪುರ ಸೇರಿದಂತೆ ಹಲವು ಕಡೆ ಭೂಮಿಯನ್ನು ಗುರುತಿಸಲಾಗಿತ್ತು. ಆದರೆ ಆಗ ಅಲ್ಲಿನ ಜನ ಪ್ರತಿಭಟಿಸಿದ್ದರಿಂದ ಆಗ ಈ ಯೋಜನೆಯನ್ನು ಕೈಬಿಡಲಾಗಿತ್ತು. ಆದರೆ ಈಗ ಸರ್ಕಾರ ಬಡ ದಲಿತರ ಭೂಮಿಯ ಮೇಲೆ ಬಿದ್ದಿದೆ.

ವಿಚಿತ್ರವೆಂದರೆ ಕೆಪಿಸಿಸಿ ಅಧ್ಯಕ್ಷರು ಭೂಮಿವಂಚಿತ ರೈತರಿಗೆ ಬೆಂಬಲ ನೀಡಿದರೆ, ಅವರದೇ ಕಾಂಗ್ರೆಸ್ ಪಕ್ಷದ ನಗರಸಭೆ ಅಧ್ಯಕ್ಷೆ ದೇವಿಕಾ ಸಿದ್ದಲಿಂಗೇಗೌಡ "ಇದೇ ಜಾಗದಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣ ಮಾಡಿಯೇ ತೀರುತ್ತೇವೆ" ಎಂದು ಪಟ್ಟು ಹಿಡಿದಿದ್ದಾರೆ. ಪರಮೇಶ್ವರ್ ಅವರು ಪ್ರತಿಭಟನೆ ನಡೆಸುತ್ತಿದ್ದ ಸ್ಥಳಕ್ಕೂ ಹೋಗದೆ ತಾನು ಆಯುಕ್ತರ ಪರ ಎಂದು ದೇವಿಕಾ ತೋರಿಸಿದ್ದಾರೆ.

ಒಟ್ಟಾರೆ ಬಿಜೆಪಿ ಸರ್ಕಾರ ದಲಿತರ ಭೂಮಿಯನ್ನು ಕಸಿದುಕೊಂಡು, ಅವರ ಮೇಲೆ ದೌರ್ಜನ್ಯ ನಡೆಸಿ ತನಗೆ ಬೇಕಾದ್ದನ್ನು ಸಾಧಿಸುತ್ತೇನೆ ಎಂಬ ಧಿಮಾಕನ್ನು ತೋರಿಸುತ್ತಿದೆ. ಬಿಜೆಪಿಯ ಇಂತಹ ಜನದ್ರೋಹಿ ನಿಲುವಿಗೆ ಜನತೆಯೇ ಉತ್ತರ ನೀಡಬೇಕು.

● ವರದಿಗಾರ

ಕಾಮುಕ್ಲಾಣಿಗೂ, ಕ್ರೂರಮೃಗಗಳಿಗೂ ಕನಿಷ್ಠ ವಿವೇಕವಿರುತ್ತದೆ. ಮುದ್ದುಮರಿಗಳ ಮೇಲೆ ವಾತ್ಸಲ್ಯದ ಹೊರತಾಗಿ ಲೈಂಗಿಕ ಹಿಂಸೆಗಿಳಿಯಲಾರವು. ನರಳುವ, ಅಸಹಾಯಕ, ಮನೋವೃದ್ಧ ಮೃಗಗಳ ಬಗ್ಗೆಯೂ ಮರುಕದ ಹೊರತಾಗಿ ದಾಳಿಗಿಳಿಯಲಾರವು-

ಇದು ಮೃಗ, ಪಿಶಾಚ ಗಣಕೂಡ ನಾಚುವ, ಹೇಸುವ ಪೈಶಾಚಿಕತೆ!

ತನ್ನ ಮೂರೂವರೆ ವರ್ಷದ, ಹಾಲುಗಲ್ಲದ, ಅಂಬೆಗಾಲಿಕ್ಕುವ ಮಾತಿನ್ನೂ ಬಲಿಯದ, ಮುದ್ದು ಮಗಳ ಮೇಲೆಯೇ ಅತ್ಯಾಚಾರವೆಸಗಿದ್ದಾನೆ ಫ್ರೆಂಚ್ ರಾಜತಾಂತ್ರಿಕ ಪಾಸ್ಕಲ್!

ಜೋನ್ಸ್ ಫ್ರೆಂಚ್ ರಾಷ್ಟ್ರೀಯ ಪಾಸ್ಕಲ್‌ನನ್ನು ಮದುವೆಯಾಗಿ ಬೆಂಗಳೂರಿನ ಫ್ರೆಂಚ್ ಚಾನ್ಸರಿಯ ವಾಸಿಯಾದಳಾದರೂ ಆಕೆಗೆ ಫ್ರಾನ್ಸ್ ಪೌರತ್ವ ಸಿಗಲಿಲ್ಲ, 2004 ರ ಹೊತ್ತಿಗೆ ಮೊದಲ ಮಗ ಹುಟ್ಟಿದ. 2008 ರಲ್ಲಿ ಜನಿಸಿದವಳೇ ಸ್ಟೆಲ್ಲಾ, ಇಲ್ಲಿಗೆ 20 ತಿಂಗಳ ಹಿಂದೆ ಮೂರನೇ ಮಗುವಾಗು ತನಕ ಪಾಸ್ಕಲ್ ಓರ್ವ ಪ್ರಜ್ಞಾವಂತ ಫ್ರೆಂಚ್‌ನಂತೆಯೇ ವರ್ತಿಸುತ್ತಿದ್ದ. ಅದು 2010 ರ ಏಪ್ರಿಲ್ ಎರಡನೇ ವಾರ. ಸುಜಾ ಆ ಹೊತ್ತಿಗೆ ತುಂಬು ಗರ್ಭಿಣಿ. ಹೆಣ್ಣು ಮಗು ಸ್ಟೆಲ್ಲಾ ಇನ್ನೂ ಅಂಬೆಗಾಲಿಕ್ಕುವ ಎರಡು ವರ್ಷದ ಹಸುಳೆ. ಆದೊಂದು ಅಪರಾಹ್ನ ಗರ್ಭಿಣಿಯಾಗಿದ್ದ ಸುಜಾ ತನ್ನ ಸಂಬಂಧಿಯೊಬ್ಬಳ ಜೊತೆ ಡಾಕ್ಟರ್‌ರನ್ನು ಕಾಣಲು

ಯಾರು ತಾನೇ ಊಹಿಸಲು ಸಾಧ್ಯ? ಹಸುಳೆಯ ಜನನಾಂಗದ ಮೇಲೆ ಕಚ್ಚಿದ ಅಸ್ಪಷ್ಟ ಗುರುತುಗಳಿದ್ದವು!

ಅಂದರೆ ಸ್ಟೆಲ್ಲಾ ಎರಡು ವರ್ಷದ ಮಗುವಾಗಿದ್ದಾಗಲೇ ತಂದೆ ಪಾಸ್ಕಲ್ ಅಸಹ್ಯಕ್ಕಿಳಿದಿದ್ದ!

ಇನ್ನೂ ಕಣ್ಣುಬಿಡದ ಕಂದಮ್ಮನಿಗೆ ತನ್ನ ತಂದೆಯ ಮನೋವೈಕಲ್ಯದ ಅರಿವಾದರೂ ಹೇಗಿದ್ದೀತು? ಮೊದ ಮೊದಲು ಪತ್ನಿ ಸುಜಾಳಿಗಿದು ಅರ್ಥವಾಗಲಿಲ್ಲ, ಆಕೆ ಕಾರ್ಯನಿಮಿತ್ತವೋ, ಕೊನೆಯ ಮಗುವನ್ನು ಕ್ಲಿನಿಕ್ಗೆ ಕರೆದೊಯ್ದು ವಾಪಸ್ಸು ಬಂದಾಗಲೋ ಮಗುವಿನ ವರ್ತನೆಯೇ ವಿಚಿತ್ರವಾಗಿರುತ್ತಿತ್ತು, ತಾಯಿಯನ್ನು ಕಂಡಾಕ್ಷಣವೇ ಅದು ವಿಲಕ್ಷಣವಾಗಿ ಅಳುತ್ತಿತ್ತು, ಪದೇಪದೇ ತನ್ನೆರಡೂ

ಸುಲಭಕ್ಕೆ ಅರ್ಥವಾಗದ ಇಂಥ ಪ್ರಶ್ನೆಗಳಿಗೆ ಉತ್ತ... ಸಿಕ್ಕಿದ್ದು ಮನೆ ಕೆಲಸದ ಹೆಂಗಸು ಸಗಾಯ್ ಮೇ... ವ್ಯಕ್ತಪಡಿಸಿದ ಅನುಮಾನದಿಂದ, ಕ್ಲಿನಿಕ್ಗೋ, ಮಗುವಿ... ತಪಾಸಣೆಗೋ ಸುಜಾ ಮನೆಯಿಂದ ಹೊರಬಿದ್ದಾಗಲೇ... ಕಳ್ಳನಂತೆ ಮನೆಯೊಳಕ್ಕೆ ಪ್ರತ್ಯಕ್ಷನಾಗುತ್ತಿದ್ದ ಪಾಸ್ಕಲ್ ಮೊದ... ಮಗುವಿಗೆ ಏನಾದರೂ ತಿಂಡಿಕೊಡಿಸಿಕೊಂಡು ಬರುವಂ... ಕೆಲಸದ ಹೆಂಗಸನ್ನು ಜೊತೆ ಮಾಡಿ ಕಳಿಸುತ್ತಿದ್ದ, ಅದು... ಸಾಕಷ್ಟು ಸಮಯ ಹಿಡಿಯುವ ಅನತಿ ದೂರದ... ಹೋಟೆಲಿನಲ್ಲೇ ತಿಂಡಿ ಕೊಡಿಸಬೇಕೆಂದು ಹೇಳುತ್ತಿದ್ದ...

ಮನೆಕೆಲಸದ ಹೆಂಗಸು ಏಳು ವರ್ಷದ ಗಂಡ... ಮಗುವಿಗೆ ತಿಂಡಿ ಕೊಡಿಸಿಕೊಂಡು ವಾಪಸ್ಸಾಗುವ ಹೊತ್ತಿ...


ಶಿಶುಕಾಮಿ ಪಾಸ್ಕಲ್

ಹಸುಳೆಯನ್ನೇ ಮುಕ್ಕಿದ ತಂದೆ



ಪಾಸ್ಕಲ್ ಮಜುರಿಯರ್ ಆತನ ಪೂರ್ತಿ ಹೆಸರು. ವಯಸ್ಸಿನ್ನೂ 39 ವರ್ಷ. ಆತನ ಪತ್ನಿ ಇನ್ನೂ ಬದುಕಿದ್ದಾಳೆ. ಅದೂ ಪ್ರೀತಿಸಿ ಮದುವೆಯಾಗಿದ್ದು, ಪತ್ನಿಯ ಜೊತೆಗೇ ಒಂದೇ ಮನೆಯಲ್ಲಿದ್ದಾನೆ. ಆಕೆಯ ಮೂರೂ ಮಕ್ಕಳಲ್ಲಿ ಏಳು ವರ್ಷದ ಗಂಡು ಮಗು ಮತ್ತು ಇನ್ನೂ ಅಂಬೆಗಾಲಿಕ್ಕುವ 20 ತಿಂಗಳ ಮತ್ತೊಂದು ಗಂಡು ಮಗುವನ್ನು ಹೊರತುಪಡಿಸಿದರೆ ಈಗ ಆತನ ಪೈಶಾಚಿಕತೆಗೆ ಬಲಿಯಾದವಳೇ ಮೂರೂವರೆ ವರ್ಷದ ಹಸುಳೆ ಸ್ಟೆಲ್ಲಾ.

ಅದು ಪಾಸ್ಕಲ್ ಮಜುರಿಯರ್ ಮತ್ತು ಸುಜಾ ಜೋನ್ಸ್ ದಂಪತಿಗಳ ಎರಡನೇ ಮಗು. ಹಸುಳೆಗಳ ವಿರುದ್ಧದ ಲೈಂಗಿಕ ವಿಕೃತಿಗೆ ಸಂಬಂಧಪಟ್ಟಂತೆ ಐವತ್ತರ ಮುದುಕನೋರ್ವ ಐದರ ಬಾಲಕಿಯನ್ನು ಪೀಡಿಸಿದ ಕತೆ ಕೇಳಿದ್ದೇವೆ. ಯುವತಿಯೋರ್ವಳ ತಂದೆಯೇ ಆಕೆಯನ್ನು ಗರ್ಭಿಣಿಯಾಗಿಸಿದ್ದನ್ನೂ ಓದಿದ್ದೇವೆ. ಯಾರೋ ವಿಕೃತನೊಬ್ಬ ಹಸುಳೆಯನ್ನು ಮುಕ್ಕಿಕೊಂದೇ ಹಾಕಿದ್ದನ್ನು ಕೇಳಿದ್ದೇವೆ. ಇತ್ತೀಚೆಗೆ ಹಿಂದಿಯ ನಟ ಅಮಿರ್ ಖಾನ್ ನಡೆಸಿಕೊಟ್ಟ ಸತ್ಯಮೇವ ಜಯತೆ ಧಾರಾವಾಹಿಯಲ್ಲಿ ಮಕ್ಕಳ ಮೇಲಿನ ಲೈಂಗಿಕ ಹಿಂಸೆಯ ಕುರಿತೇ ಪ್ರತ್ಯೇಕ ಕಾರ್ಯಕ್ರಮದಲ್ಲಿ ಹೇಗೆ ಸಂಬಂಧಿಕರು ಮತ್ತು ಪರಿಚಿತರಿಂದಲೇ ನಮ್ಮ ಕಂದಮ್ಮಗಳು ಪಶುವಾಂಛೆಗೆ ಬಲಿಯಾಗುತ್ತಿದ್ದಾರೆಂಬ ಅಸಂಖ್ಯಾತ ನಿದರ್ಶನಗಳನ್ನು ನೋಡಿದ್ದೇವೆ.

ಆದರೆ ಜನ್ಮಕೊಟ್ಟ ತಂದೆಯೇ ತನ್ನ ಮೂರೂವರೆ ವರ್ಷದ ಹಾಲುಗಲ್ಲದ ಹಸುಳೆಯ ಮೇಲೆ ಅತ್ಯಾಚಾರವೆಸಗಿದ ದಾರುಣ ಘಟನೆ ನಡೆದದ್ದು ಬಹುಶಃ ಇದೇ ಮೊದಲು. ಯೌವನಾವಸ್ಥೆಯ ಮಗಳನ್ನು ಮುಕ್ಕಿದ ತಂದೆಯರುಂಟು. ಮುದ್ದು ಕಂದಮ್ಮನನ್ನು ತನ್ನ ವಿಕೃತಿಗೆ ಈಡು ಮಾಡಿಕೊಂಡ ಮೊದಲ ತಂದೆ ಅಂತಿದ್ದರೆ ಅದು ಪಾಸ್ಕಲ್ ಮಜುರಿಯರ್ ಮಾತ್ರ!

ಅಷ್ಟಕ್ಕೂ ಮಜುರಿಯರ್ ಯಾರೋ ಅವಿದ್ಯಾವಂತ, ಅನಾಗರಿಕ, ಅಬ್ಬೇಪಾರಿಯಲ್ಲ, ವಿದ್ಯಾವಂತ. ಫ್ರೆಂಚ್ ರಾಯಭಾರ ಕಚೇರಿಯ ಜವಾಬ್ದಾರಿಯುತ ಅಧಿಕಾರಿಯಾಗಿದ್ದವನು. 2001 ರಲ್ಲೇ ಭಾರತಕ್ಕೇ ಬಂದು ಫ್ರಾನ್ಸ್ ರಾಜತಾಂತ್ರಿಕ ಕಚೇರಿಯ ವಿವಿಧ ಹುದ್ದೆಯಲ್ಲಿದ್ದವನು. ಕೇರಳ ಮೂಲದ ಸುಜಾ ಜೋನ್ಸ್ ಎಂಬ ಟ್ರಾವೆಲ್ಸ್ ಏಜೆಂಟಳನ್ನು ಮೋಹಿಸಿದ. ಅದು 2001 ರ ಕಾಲ. ಕೇರಳದ ಸಜಾ ಜೋನ್ಸ್ ಮತ್ತು ಫ್ರೆಂಚ್ ಅಧಿಕಾರಿ ಪಾಸ್ಕಲ್ ಮಜುರಿಯರ್ ಮದುವೆ ಕೊಲ್ಲಂನ ಚರ್ಚ್ ಒಂದರಲ್ಲಿ ಅದ್ದೂರಿಯಾಗೇ ನಡೆಯಿತು. ಅದಕ್ಕೆ ಫ್ರೆಂಚ್ ರಾಯಭಾರ ಕಚೇರಿ ಮತ್ತು ಭಾರತೀಯ ವಿದೇಶಾಂಗ ಖಾತೆಯ ಅನೇಕ ಅಧಿಕಾರಿಗಳು ಬಂದಿದ್ದರು. 2002ರ ಹೊತ್ತಿಗೆ ಪಾಸ್ಕಲ್ ದೆಹಲಿಯ ಫ್ರೆಂಚ್ ಎಂಬೆಸ್ಸಿಯಿಂದ ಬೆಂಗಳೂರಿನ ವಸಂತನಗರದಲ್ಲಿರುವ ಅಲೈಯನ್ಸ್ ಫ್ರಾಂಸೈಸಿಗೆ ವರ್ಗಾವಣೆಗೊಂಡ. ವಸಂತನಗರದ ಫುಟ್‌ಬಾಲ್ ಸ್ಟೇಡಿಯಂ ಮತ್ತು ಅಂಬೇಡ್ಕರ್ ಭವನದ ಹಿಂದಿರುವ ಅಲೈಯನ್ಸ್ ಫ್ರಾಂಸೈಸಿಯೇ ಬೆಂಗಳೂರಿನ ಫ್ರಾನ್ಸ್ ರಾಯಭಾರ ಕಚೇರಿಯ ಶಾಖೆಯಿದ್ದಂತೆ.

ತನ್ನ ಟ್ರಾವೆಲ್ಸ್ ಏಜೆನ್ಸಿಗೆ ವಿದಾಯ ಹೇಳಿದ ಸುಜಾ

ಕ್ಲಿನಿಕ್ಕಿಗೆ ಹೋಗಿ ವಾಪಸ್ಸಾಗುತ್ತಿದ್ದಂತೆ ಅಸಹ್ಯದ ಶಾಕ್ ಒಂದು ಕಾದಿತ್ತು.

ಅಂಬೆಗಾಲಿಕ್ಕುವ, ತೊದಲುವ ಹಸುಳೆ ಸ್ಟೆಲ್ಲಾ ವಿಕಾರವಾಗಿ ಚೀರಾಡುತ್ತಿದ್ದರೆ ತಂದೆ ಪಾಸ್ಕಲ್ ಆಕೆಯನ್ನೆತ್ತಿಕೊಂಡು ಚಿತ್ರವಿಚಿತ್ರವಾಗಿ ಬಾಯಿ ಮುಚ್ಚಿಸಲೆತ್ನಿಸುತ್ತಿದ್ದ. ಭಯಭೀತ ಮಗು ಹಿಂದೆಂದೂ ಇಲ್ಲದಂತೆ ಗೋಳಾಡುತ್ತಿತ್ತು. ಪದೇಪದೇ ತನ್ನೆರಡೂ ಕೈಗಳನ್ನು ಕಿಬ್ಬೊಟ್ಟೆಯ ಕೆಳಭಾಗಕ್ಕೆ ಹಾಕಿ ಉಜ್ಜಿಕೊಳ್ಳುತ್ತಿತ್ತು, ತಾಯಿಗಿದು ಊಹಿಸಲಸಾಧ್ಯ ಸನ್ನಿವೇಶ. ಮಗು ಮೂತ್ರ ವಿಸರ್ಜಿಸುವ ವೇಳೆ ಯಾವುದಾದರೂ ಹುಳುಹುಪ್ಪಟೆ ಕಚ್ಚಿರಬಹುದೆಂದೇ ಮರುಗಿದಳು. ನಿರ್ಲಕ್ಷ್ಯ ಮಾಡಿದ ಕೆಲಸ ಹೆಂಗಸನ್ನು ಬೈದಳು.

ಮೂರನೇ ಮಗುವಿಗೆ ತಾನು ಗರ್ಭಿಣಿಯಾಗಿದ್ದನ್ನೇ ಕಾದು ಪತಿ ಪಾಸ್ಕಲ್ ಇಂಥದೊಂದು ಕ್ರೌರ್ಯಕ್ಕೆ ಇಳಿದಿದ್ದಾನೆಂಬುದು ಆಕೆಗೆಲ್ಲಿ ಗೊತ್ತಾಗಬೇಕು?

ಕೈಗಳನ್ನು ಕಾಲುಗಳ ಕೂಡು ತಾಣಕ್ಕೊಯ್ದು ಉಜ್ಜಾಡುತ್ತಿತ್ತು. ಅದೇನನ್ನೋ ಹೇಳಲು ಬಯಸಿದಂತೆ, ಆದರೆ ಶಬ್ದಗಳು ನಿಲುಕದಂತೆ ಕಣ್ಣಲ್ಲೇ ಮೂಕವೇದನೆಯೊಂದನ್ನು ಮಗು ವ್ಯಕ್ತಪಡಿಸುತ್ತಿರುವುದು ತಾಯ ಕರುಳಿಗೆ ಗೊತ್ತಾಗಲೇಬೇಕಲ್ಲವೆ?

ಶುರುವಿನಲ್ಲಿ ಅದೆಂಥದೋ ತುರಿಕೆ ಅಥವಾ ಚರ್ಮದ ನಂಜಿರಬೇಕೆಂದು ಭಾವಿಸಿ ಸ್ಕಿನ್ ಆಯಿಂಟ್‌ಮೆಂಟ್ ಇತ್ಯಾದಿ ಹಚ್ಚುತ್ತಿದ್ದ ತಾಯಿ ಸುಜಾಳಿಗೆ 2012ರ ಮೇ ತಿಂಗಳ ಹೊತ್ತಿಗೆ ಅನುಮಾನವೊಂದು ಕಾಡಲಾರಂಭಿಸಿತು. ತಾನು ಮೂರ್‍ನಾಲ್ಕು ಗಂಟೆಯ ಮಟ್ಟಿಗೆ ಹೊರಹೋದಾಗಲೇ ಏಕೆ ಮಗುವಿನ ಆರೋಗ್ಯ ಹದಗೆಡುತ್ತದೆ? ಹೀಗೆ ಮಗು ನರಳುತ್ತಿದ್ದಾಗೆಲ್ಲ ಗಂಡ ಪಾಸ್ಕಲ್ ಪ್ರತ್ಯಕ್ಷನಾಗುವುದೇಕೆ? ಯಾವತ್ತೂ ಕೆಲಸದ ಮಧ್ಯೆ ಮನೆಗೆ ವಾಪಸ್ಸಾಗದ ಗಂಡ ತಾನು ದೀರ್ಘ ಅವಧಿಗೆ ಹೊರಬಿದ್ದಾಗಲೇ ಏಕೆ ಮನೆಗೆ



ಅಮಾನುಷ ಕ್ರೌರ್ಯದ ವಿರುದ್ಧ ಪ್ರತಿಭಟನೆ


ಫ್ರೆಂಚ್ ಕಚೇರಿ

ಬಹುಶಃ ಮನುಷ್ಯರಾದವರ್‍ಯಾರಿಗೂ ಶಿಶುಕಾಮಿ ಪಾಸ್ಕಲ್‌ನ ಪೈಶಾಚಿಕ ಮನಸ್ಥಿತಿಯ ಲೆಕ್ಕಾಚಾರ ಸಿಗಲಾರದು. ಅದೂ ಪತ್ನಿಯ ಜೊತೆಗಿದ್ದೇ, ತನ್ನದೇ ಕಂದಮ್ಮನ ಮೇಲೆ ತಂದೆಯೊಬ್ಬ ತನ್ನ ಪಶುವಾಂಛೆ ಮೆರೆಯುತ್ತಾನೆಂಬುದನ್ನು

ಬರುತ್ತಾನೆ? ತನ್ನ ಅನುಪಸ್ಥಿತಿಯಲ್ಲಿ ಗಂಡ ಮನೆಗೆ ಬಂದಿದ್ದಾಗಲೇ ಮಗುವಿನ ವಿಸರ್ಜನಾಂಗದ ಉರಿತ, ಕೆರೆತ ಶುರುವಾಗುವುದೇಕೆ?

ಪಾಸ್ಕಲ್ ಮಗು ಸ್ಟೆಲ್ಲಾಳನ್ನು ಕರಕೊಂಡು ಬೆಡ್‌ರೂಮಿ... ನಲ್ಲಿರುತ್ತಿದ್ದ. ತೀರ ಅಸಹಜವೆಂಬಂತೆ ಮಗುವಿನ ಜೊ... ಒಳಗಿನಿಂದ ಬಾಗಿಲಿಗೆ ಬೋಲ್ಟ್ ಹಾಕಿಕೊಳ್ಳುತ್ತಿದ್ದ. ಆ... ಬಾಗಿಲು ತೆರೆದಾಗಲೆಲ್ಲ ಮಗು ವಿಕಾರವಾಗಿ ಅಳುತ್ತಿತ್ತು... ಮತ್ತು ತನ್ನೆರಡೂ ಕೈಗಳಿಂದ ಕಿಬ್ಬೊಟ್ಟೆಯ ಕೆಳಭಾಗವನ್ನು... ಉಜ್ಜಿಕೊಳ್ಳುತ್ತಿತ್ತು, ಪಾಸ್ಕಲ್ ಮಗುವಿನ ಜೊತೆ ನಿದ್ರ... ದಂತಿರದೇ ಆತನ ಮುಖಚರ್ಯೆಯೇ ಅನುಮಾನಾಸ್ಪ... ವಾಗಿರುತ್ತಿತ್ತು! ಮಗುವಿನ ಇಂಥ ದುರ್ಗತಿಗೆ ಮನೆಕೆಲ... ದವಳ ನಿರ್ಲಕ್ಷವೇ ಕಾರಣವೆಂದು ಪದೇಪದೇ ರೇಗುತ್ತಿ... ತಾಯಿ ಸುಜಾಳ ಮುಂದೆ ಕೆಲಸದ ಹೆಂಗಸು ತನ್ನ ಅನು... ಮಾನವನ್ನು ತೋಡಿಕೊಂಡಿದ್ದು ಇಲ್ಲಿಗೆ ಆರು ತಿಂಗ... ಹಿಂದೆ.

ಇದಾಗಿ ಕೆಲ ದಿನಕ್ಕೇ ಅಂದರೆ ಜೂನ್ 4 ಕ್ಕೆ ಮ... ಇಂಥದ್ದೇ ಘಟನೆ ನಡೆಯಿತು. ಈ ಬಾರಿ ಕಚ್ಚಿದ ಮತ್ತು... ಪರಚಿದ ಗುರುತುಗಳು ಸ್ಪಷ್ಟವಾಗೇ ಗೋಚರಿಸುತ್ತಿತ್ತು... ಬಹುಶಃ ತಾಯಿ ಸುಜಾ ದೃಢ ನಿರ್ಧಾರವೊಂದ... ಬಂದಿದ್ದಾಳೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ... ಸಂಬಂಧಪಟ್ಟಂತೆ ಬೆಂಗಳೂರಿನಲ್ಲಿ ಕಾರ್ಯನಿವ... ಹಿಸುವ 'ಎನ್‌ಫ್ಹೋಲ್ಡ್ ಇಂಡಿಯಾ' ಸಂಸ್ಥೆಗೆ ಮಗ... ಸ್ಟೆಲ್ಲಾಳನ್ನು ಕರೆದೊಯ್ದು ಸಮಸ್ಯೆಯನ್ನು ವಿವರಿಸಿದ್ದಾ... ಮಗುವನ್ನು ಸೂಕ್ಷ್ಮವಾಗಿ ಪರೀಕ್ಷಿಸಿದ ಅಲ್ಲಿನ ವೈದ್ಯರಿ... ಒಂದು ಸಂಗತಿಯಂತೂ ಸ್ಪಷ್ಟವಾಗಿದೆ. ದೈಹಿಕ ಮತ್ತು... ಲೈಂಗಿಕ ಪೀಡನೆಗೆ ಸ್ಟೆಲ್ಲಾ ಬಲಿಯಾಗಿದ್ದಳು!

2012 ರ ಜೂನ್ 5ಕ್ಕೆ ಎನ್‌ಫ್ಹೋಲ್... ಇಂಡಿಯಾದ ವೈದ್ಯರ ವರದಿ ಸ್ಪಷ್ಟವಾಗಿತ್ತು, ಇದಾ... ಎಂಟನೇ ದಿನಕ್ಕೆ ಸರಿಯಾಗಿ ಅಂದರೆ ಜೂನ್ 13 ರಂದು... ಸುಜಾ ಮತ್ತೆ ಎನ್‌ಫ್ಹೋಲ್ಡ್ ಇಂಡಿಯಾ ಸಂಸ್ಥೆಗೆ ಬಂದ... ಮಗುವಿನ ಮೇಲೆ ನಡೆದ ಲೈಂಗಿಕ ಹಿಂಸೆಯ ಸುವಿಸ್ತಾ... ವರದಿ ಪಡೆದು ವಾಪಸ್ಸಾಗುವ ಹೊತ್ತಿಗೆ ನಡೆಯಬಾರದ...

ಆಮಿರ್ ಖಾನ್‌ನ ಸತ್ಯಮೇವ ಜಯತೆ ನೋಡಿ...!

We all condemn this crime because there can be nothing worse than this...! ಇದು ಪಾಸ್ಕಲ್ ಪೈಶಾಚಿಕತೆಯ ಸುದ್ದಿ ಕೇಳಿ ವಿದೇಶಾಂಗ ರಾಜ್ಯ ಸಚಿವೆ ಪುನೀತ್ ಕೌರ್ ನೀಡಿದ ಪ್ರತಿಕ್ರಿಯೆಯ ಒಂದು ಸಾಲಷ್ಟೇ. ಅದರರ್ಥ ಇದಕ್ಕಿಂತ ಮತ್ತೊಂದು ಹೀನಕೃತ್ಯ ಇರಲಿಕ್ಕಿಲ್ಲ...!

ಹಸುಳೆ ಸ್ಟೆಲ್ಲಾ ಮೇಲೆ ಅದರ ತಂದೆಯೇ ನಡೆಸಿದ ಅತ್ಯಾಚಾರದ ವಿರುದ್ಧ ಈಗಾಗಲೇ ಬೆಂಗಳೂರಿನಲ್ಲಿ ಮೂರು ಪ್ರತಿಭಟನೆಗಳಾಗಿವೆ. ಆತನನ್ನು ಬಂಧಿಸುವಲ್ಲಿ ಪೊಲೀಸ್ ವಿಳಂಬವನ್ನು ಪ್ರತಿಭಟಿಸಿ ಜೂನ್ 18 ರಂದು ವಿವಿಧ ಮಕ್ಕಳ ಹಕ್ಕು ಸಂಘಟನೆಗಳು ಬೀದಿಗಿಳಿದರೆ, ಆತನನ್ನು ಬಂಧಿಸಿದ ನಂತರವೂ ಕಠಿಣ ಶಿಕ್ಷೆಗೆ ಒತ್ತಾಯಿಸಿ ಮಹಿಳಾ ಸಾಂಸ್ಕೃತಿಕ ಸಂಘಟನೆ ಪ್ರತಿಭಟಿಸಿದೆ. ಸದ್ಯ ರಾಷ್ಟ್ರೀಯ ಸುದ್ದಿವಾಹಿನಿಗಳಷ್ಟೇ ಅಲ್ಲ, ಫ್ರಾನ್ಸ್‌ನ ಟೀವಿಗಳಲ್ಲೂ ಅದೇ ಪ್ರಮುಖ ಸುದ್ದಿ. ಆ ಮಟ್ಟಿಗೆ ತನ್ನ ದೇಶದ ಮಾನವನ್ನಷ್ಟೇ ಅಲ್ಲ ಇಡೀ ಪಿತೃಸಂಕುಲದ ಪಾವಿತ್ರ್ಯತೆಯನ್ನೇ ಪಾಸ್ಕಲ್ ಕಳೆದಿದ್ದಾನೆ.

ಆಮಿರ್ ಖಾನ್ ಪ್ರತಿ ಭಾನುವಾರ ಬೆಳಗ್ಗೆ ನಡೆಸಿಕೊಡುವ ಸತ್ಯಮೇವ ಜಯತೆ ಧಾರಾವಾಹಿಯಲ್ಲಿ ಇತ್ತೀಚೆಗೆ ಮಕ್ಕಳ ಮೇಲೆ ಮನೆಯೊಳಗೇ ನಡೆಯುವ ಲೈಂಗಿಕ ದೌರ್ಜನ್ಯದ ದಾರುಣತೆಯನ್ನು ಎಳೆಎಳೆಯಾಗಿ ಬಿಡಿಸಿಟ್ಟಿದ್ದನ್ನು ಬಹುಶಃ ತಾಯಿ ಸುಜಾ ನೋಡದೇ ಹೋಗಿದ್ದರೆ ಆಕೆ ಇಂಥಾದ್ದೊಂದು ಧೈರ್ಯಕ್ಕೆ ಕೈ ಹಾಕುತ್ತಿರಲಿಲ್ಲವೇನೋ!

ತಾಯಿ ಸುಜಾ ಮತ್ತು ಅತ್ಯಾಚಾರಕ್ಕೀಡಾದ ಮಗುವಿನ ನೆರವಿಗೆ ನಿಂತ ಎನ್‌ಫ್ಹೋಲ್ಡ್ ಇಂಡಿಯಾ ಸಂಸ್ಥೆಯ ಪದಾಧಿಕಾರಿಯೊಬ್ಬರ ಪ್ರಕಾರ ಆಮಿರ್ ಖಾನ್ ಸತ್ಯಮೇವ ಜಯತೆ ಧಾರಾವಾಹಿ ನೋಡಿಯೇ ತಾಯಿ ಸುಜಾಳಿಗೆ ಮಗುವಿನ ಮೇಲಿನ ತಂದೆಯ ಹಿಂಸೆಗೆ ಕಾರಣ ಸಿಕ್ಕಿದೆ. ವಿಪರ್ಯಾಸವೆಂದರೆ ಆಮಿರ್ ಖಾನ್ ಮಕ್ಕಳ ಯೋನ ಶೋಷಣೆಗೆ ಅವರ ಸಮೀಪದ ಸಂಬಂಧಿಗಳು ಮತ್ತು ಪರಮಾಪ್ತರೇ ಹೇಗೆ ಕಾರಣರಾಗುತ್ತಾರೆಂಬುದನ್ನು ಸಾಕ್ಷಿ ಸಮೇತ ವಿವರಿಸಿ, ಇಂಥ ಪಿಡುಗಿನ ವಿರುದ್ಧ ಮಕ್ಕಳು ತಮ್ಮ ತಂದೆಯನ್ನಲ್ಲದೆ ಬೇರೆ ಯಾರನ್ನೂ ನಂಬಕೂಡದೆಂದು ಪಾಠ ಮಾಡಿದ್ದರು. ಈತನಕ ಮಕ್ಕಳ ಲೈಂಗಿಕ ಶೋಷಣೆ ಕುರಿತಂತೆ ಅಧ್ಯಯನ ನಡೆಸಿದವರನೇಕರು ಮಕ್ಕಳನ್ನುದ್ದೇಶಿಸಿ ಹೇಳುತ್ತಿದ್ದುದು ನಿಮ್ಮ ತಂದೆಯೇ ನಿಮ್ಮ 'ಬಾಡಿಗಾರ್ಡ್' ಎಂದು...

ಆದರೆ ಇಂಥದೊಂದು ನಂಬಿಕೆಯನ್ನು ಪಾಸ್ಕಲ್ ಎಂಬ ವಿಕೃತನೊಬ್ಬ ಹುಸಿಗೊಳಿಸಿಬಿಟ್ಟ: ಬಹುಶಃ ಇನ್ನು ಮುಂದೆ ಮಕ್ಕಳ ಮೇಲಿನ ಶೋಷಣೆ ಕುರಿತಂತೆ ಮಕ್ಕಳಿಗೆ ತಾಯಿಯ ಹೊರತಾಗಿ ಬೇರೆ ಯಾರನ್ನೂ ನಂಬಬೇಡಿ ಎಂದು ಪಾಠ ಮಾಡುವ ಕಾಲ ಬರಬಹುದಾ?



ಂಗಳೂರಿನ ಅಲೈಯನ್ಸ್ ಫ್ರಾನ್ಸೈಸ್

ುಹೋಗಿತ್ತು. ಪತ್ನಿ ಮನೆಯಿಂದ ಹೊರಬೀಳುವುದನ್ನೇ ುತ್ತಿದ್ದ ಪಾಸ್ಕಲ್ ಬಂದವನೇ ಕೆಲಸದವಳನ್ನು ತಿಂಡಿ ಮಂತೆ ಸಾಗ ಹಾಕಿದವನು ತನ್ನ ಮೂರೂವರೆ ವರ್ಷದ ಸ್ವೆಲ್ಲಾಳನ್ನು ಹೊತ್ತೊಯ್ದು ಬೆಡ್‌ರೂಮಿನ ಬೋಲ್ಟ್ ಕೊಂಡ. ಇದರ ಅರಿವಿದ್ದ ಕೆಲಸದ ಹೆಂಗುಸು ಆಟೋ ದ ಅರ್ಧ ಗಂಟೆಯೊಳಗೇ ವಾಪಸ್ಸಾದರೆ ಪಾಸ್ಕಲ್ ವಿನ ಜೊತೆ ಬೆಡ್‌ರೂಮಿನಲ್ಲೇ ಇದ್ದ. ಸರಿಸುಮಾರು ಾಲು ಗಂಟೆಯ ನಂತರ ರೂಮಿನ ಬೋಲ್ಟ್ ತೆಗೆದು ಬರುವ ಹೊತ್ತಿಗೆ ಮಗು ವಿಕಾರವಾಗಿ ಚೀರಾಡುತ್ತಿತ್ತು.

ಇದಾಗಿ ಕಾಲು ಗಂಟೆಯಲ್ಲೇ ತಾಯಿ ಸುಜಾ ಸ್ಸಾದಳು. ಅದು ಸಂಜೆ ಐದರ ಸಮಯ. ಮಗುವಿನ್ನೂ ತ್ತಲೇ ಇತ್ತು. ಈ ಬಾರಿ ಹಿಂದಿಗಿಂತಲೂ ಕ್ರೂರವಾಗಿ ಲ್ ಹಿಂಸಿಸಿದ್ದ. ಕಾಲುಗಳ ಕೂಡುತಾಣದಲ್ಲಿ ರಕ್ತದ ಿದ್ದವು. ಕಚ್ಚಿದ ಗುರುತುಗಳೂ ಮೂಡಿತ್ತು. ಮೊದಲೇ ಕ್ಷಿಸಿದಂತೆ ಸುಜಾ ಮಗುವನ್ನು ನೇರವಾಗಿ ಹೆಬ್ಬಾಳದ ಸ್ಟ್ ಆಸ್ಪತ್ರೆಗೆ ತಂದಿದ್ದಾಳೆ. ಅಲ್ಲಿ ಪರೀಕ್ಷಿಸಿದ Col-orative Child Response Unit (CRU) ಅಂದರೆ ಮಕ್ಕಳ ಲಕ್ಷಣಶಾಸ್ತ್ರ ವಿಭಾಗದ ರಿಗೇ ಅಚ್ಚರಿಯಾಗಿತ್ತು. ಮಗುವಿನ ಅಂಗಾಂಗಗಳಲ್ಲಿ ನ ವೀರ್ಯದ ಅವಶೇಷಗಳಿದ್ದವು. ಹಿಂಸೆ ತಾಳಲಾರದೇ ವಿನ ಅಂಗಾಂಗಗಳಿಗೆ ಗಾಯವಾಗಿತ್ತು!

ಬ್ಯಾಪ್ಟಿಸ್ಟ್ ಆಸ್ಪತ್ರೆಯ ಡಾಕ್ಟರುಗಳು ಕೊಟ್ಟ ಗಾಯದ ಣಪತ್ರವನ್ನೇ ಹಿಡಿದು ಸುಜಾ ನೇರವಾಗಿ ಹೈಗ್ರೌಂಡ್ಸ್ ೀಸ್ ಠಾಣೆಗೆ ಬಂದು ದೂರು ಕೊಟ್ಟರೆ ಪೊಲೀಸರಿಗೆ ತೋಚದಂತಾಗಿತ್ತು. ಏಕೆಂದರೆ ಪಾಸ್ಕಲ್ ಫ್ರೆಂಚ್ ಲ್ ಜನರಲ್ ಕಚೇರಿಯ ಅಧಿಕಾರಿ. ಪ್ರತಿಷ್ಠಿತ ವೊಂದರ ರಾಯಭಾರಿ ಕೇಂದ್ರದ ವಿದೇಶಿ ಾರಿಯೊಬ್ಬನನ್ನು ಬಂಧಿಸುವುದು ಸುಲಭದ ಮಾತಲ್ಲ. ದ್ದೂ ಪಾಸ್ಕಲ್‌ನನ್ನು ಆತನ ಮನೆಯಿಂದಲೇ ೌಂಡ್ಸ್ ಪೊಲೀಸ್ ಠಾಣೆಗೆ ಕರೆತಂದ ಪೊಲೀಸರು ಬಿಡಿಸಲೆತ್ನಿಸಿದರೆ, ಪಾಖಂಡಿ ಪಾಸ್ಕಲ್ ಕ್ಷಣಕ್ಕೊಂದು ಹೇಳುತ್ತಿದ್ದ. ಮೊದಲು ತನ್ನ ಮೇಲಿನ ಸೇಡಿಗೆ ಸುಳ್ಳು ಹೇಳುತ್ತಿದ್ದಾಳೆಂದ. ಆನಂತರ ತಾನು ಮನೆಗೆ ರಲೇ ಇಲ್ಲ, ಕಚೇರಿಯಲ್ಲೇ ಇದ್ದೆ ಎಂದ. ಇನ್ನೊಮ್ಮೆ ವಿಗೆ ಸ್ಕಿನ್ ಇನ್‌ಫೆಕ್ಷನ್ ಆಗಿದೆಯೆಂದ.

ಅನುಮಾನದಲ್ಲೇ ಮನೆಕೆಲಸದವಳನ್ನು ಕರೆದು ಿಸಿದ ಪೊಲೀಸರಿಗೆ ಆತ ಪತ್ನಿ ಇಲ್ಲದ ಹೊತ್ತನ್ನೇ ಮಗುವಿನ ಜೊತೆ ಬೆಡ್‌ರೂಮಿಗೆ ಹೋಗಿ ಬೋಲ್ಟ್ ಕೊಂಡದ್ದು ಮನದಟ್ಟಾಯಿತು. ಘಟನೆ ನಡೆದದ್ದು 13 ರಂದಾದರೂ ದೂರು ದಾಖಲಿಸಿದ್ದು ದಿನವೇ. ಹಾಗಿದ್ದೂ ಪಾಸ್ಕಲ್‌ನನ್ನು ಬಂಧಿಸುವಂತಿಲ್ಲ. ಫ್ರಾನ್ಸ್ ರಾಯಭಾರಿಯ ಸಮ್ಮತಿ ಬೇಕು. ಇಂಥ ತಿಯಲ್ಲೇ ಕಮೀಷನರ್ ಮಿರ್ಜಿ ಕಾರ್ಯಾಚರಣೆಗಿಳಿ . ವಿದೇಶಾಂಗ ಸಚಿವಾಲಯಕ್ಕೊಂದು, ದೆಹಲಿಯ ರಾಯಭಾರ ಕಚೇರಿಗೊಂದು ಪತ್ರ ಬರೆದು ವಿರುದ್ಧದ ದೂರು, ಪೊಲೀಸರು ಹಾಕಿದ ಆರ್ ಎಲ್ಲವನ್ನೂ ವಿವರಿಸಿದ್ದಾರೆ. ಈ ಹೊತ್ತಿಗಾಗಲೇ ಿತ ಪಾಸ್ಕಲ್ ಪೈಶಾಚಿಕತೆಯ ಸುದ್ದಿ ಹಬ್ಬಿಬಿಟ್ಟಿತ್ತು.

ಜೂನ್ 18 ರಂದು ಮತ್ತೆ ಬೌರಿಂಗ್ ಆಸ್ಪತ್ರೆಯಲ್ಲಿ ವನ್ನು ಪರೀಕ್ಷಿಸಿದ ಡಾಕ್ಟರ್‌ಗಳಿಗೆ ಲೈಂಗಿಕ ಹಿಂಸೆ ದ್ದು ಸ್ಪಷ್ಟ ಗೊತ್ತಾದರೂ ಅತ್ಯಾಚಾರದ ಬಹುತೇಕ ಗಳೆಲ್ಲ ಮಾಸಿಬಿಟ್ಟಿದ್ದವು. ಅದೇ ಹೊತ್ತಿಗೆ ಮಕ್ಕಳ ಗಳ ಸ್ವಯಂಸೇವಾಸಂಸ್ಥೆಗಳೆಲ್ಲ ಬೀದಿಗಿಳಿದು ಟನೆಗಿಳಿದಿದ್ದವು. ಜೊತೆಗೆ ಪಾಸ್ಕಲ್ ರಾಜತಾಂತ್ರಿಕ ಮಿತಿಯುಳ್ಳ ಅಧಿಕಾರಿಯಲ್ಲ ಎಂಬ ಫ್ರಾನ್ಸ್ ಸರ್ಕಾರದ ಸ್ಪಷ್ಟನೆಯೂ ಬಂದಾಗಿತ್ತು. ಇದನ್ನೇ ಕಾಯುತ್ತಿದ್ದ ಳೂರು ಪೊಲೀಸರು ಪಾಸ್ಕಲ್‌ನ[illegible] ಹಿಡಿದು ಗಟ್ಟಿದ್ದಾರೆ. ಕೋರ್ಟ್ ಆತನನ್ನು [illegible] ದಿನಗಳ ಾಂಗ ಬಂಧನಕ್ಕೊಪ್ಪಿಸಿದೆ [illegible]...

ಂದರೆ ತಂದೆ ಎಂಬ ಹುದ್ದೆ, ಪಾಸ್ಕಲ್ ಮಾಡಿದ ಸಿಸಿದೆಯಲ್ಲ, ತನ್ನದೇ ಕರುಳ ಕುಡಿಯನ್ನೂ ಬಿಡದೆ ಚಿಕಗೀಡುಮಾಡಿದ ಆತನ ದಾರ್ಷ್ಟ್ಯವಿದೆಯಲ್ಲ, ಅದಕ್ಕೆ ಶಿಕ್ಷೆ ಸಾಕೇ ಸರಿಸೂಗಬೇಕು? ತಂದೆ ಎನ್ನುವ ಮಲಿನಗೊಳಿಸಿಬಿಟ್ಟ ಪಾಸ್ಕಲ್. ಕ್ರೂರ ಮೃಗಗಳು ಮುದ್ದು ಮರಿಗಳ ಮೇಲೆ ಇಂಥದೊಂದು ದ ಉದಾಹರಣೆಯಿಲ್ಲ. ಪಾಸ್ಕಲ್ ಮೃಗ. ಕ್ಕೂ ಮೀರಿಬಿಟ್ಟ ಮನುಷ್ಯ.

• ರಾ. ಸೋಮನಾಥ್

ಶಾಮನೂರರ ಜಾತಿ ರಾಜಕಾರಣ

ದಾವಣಗೆರೆಯ ಧಣಿ ಶಾಮನೂರು ಶಿವಶಂಕರಪ್ಪ ಮುನಿಸಿಕೊಳ್ಳುವುದಿಲ್ಲ. ಮುನಿಸಿಕೊಂಡರೆ ಅದಕ್ಕೆ ನಿಖರವಾದ ಕಾರಣವಿರುತ್ತದೆ. ಹಾಗೆ ನೋಡಿದರೆ ಶಾಮನೂರು ಶಿವಶಂಕರಪ್ಪ ತುಂಬಾ ತಾಳ್ಮೆಯ ಮನುಷ್ಯ. ವ್ಯವಹಾರ ಮತ್ತು ರಾಜಕಾರಣ ಎರಡನ್ನೂ ಬೇರೆಬೇರೆಯಾಗಿಯೇ ನೋಡುತ್ತಾ ಮಾಡುತ್ತಾ ಬಂದವರು. ಹಾಗಾಗಿಯೇ ಅವರು ವ್ಯವಹಾರದಲ್ಲಿ ಸಾಧಿಸಿದಷ್ಟು ಯಶಸ್ಸನ್ನು ರಾಜಕಾರಣದಲ್ಲಿ ಯಶಸಾಧಿಸಲಾಗಲಿಲ್ಲ. ಹಾಗಂತ ಅದು ಅವರ ರಾಜಕೀಯ ಹಿನ್ನಡೆ ಎಂದು ಭಾವಿಸಬೇಕಾಗಿಲ್ಲ.

ಹಾಗೆ ನೋಡಿದರೆ ಶಾಮನೂರರು ಎಂದೂ ಕಾಂಗ್ರೆಸ್ ಪಕ್ಷದ ಹೈಕಮಾಂಡಿನೆದುರು ಮಂಡಿಯೂರಿ, ಲಾಬಿ ಮಾಡಿ ಮಂತ್ರಿ ಸ್ಥಾನಕ್ಕೋ ಮತ್ತಿನ್ಯಾವ ಅಧಿಕಾರಕ್ಕೋ ಅಂಗಲಾಚಿದವರಲ್ಲ. ಅವರ ವ್ಯಕ್ತಿತ್ವವೇ ಸ್ವಾಭಿಮಾನದ್ದಾಗಿದೆ.

ಶಾಮನೂರು ಶಿವಶಂಕರಪ್ಪ ನಿನ್ನೆ-ಮೊನ್ನೆಯ ರಾಜಕಾರಣಿಯಲ್ಲ. ದಿವಂಗತ ದೇವರಾಜ ಅರಸರ ಕಾಲದಿಂದ ರಾಜಕಾರಣ ಮಾಡುತ್ತಾ ಬಂದವರು. ಒಂದು ಕಾಲದಲ್ಲಿ ಅವರನ್ನು ಹೊರತುಪಡಿಸಿದರೆ ದೇವನಗರಿಯಲ್ಲಿ ಪರ್ಯಾಯ ರಾಜಕಾರಣವೇ ಇರದಂತಹ ವಾತಾವರಣ ನಿರ್ಮಾಣವಾಗಿತ್ತು. ಶತಮಾನದ ಕಾಂಗ್ರೆಸ್ಸಿಗೆ ಶತಾಯುಗತಾಯ ನಿಷ್ಠೆ ಅವರದು. ಪಕ್ಷ ರಾಜ್ಯ-ಕೇಂದ್ರಗಳಲ್ಲಿ ಅಧಿಕಾರಕ್ಕೆ ಬಂದಾಗೆಲ್ಲ ಶಾಸಕರಾಗಿಯೋ, ಸಂಸದರಾಗಿಯೋ ಜಯ ಸಾಧಿಸುತ್ತಿದ್ದರು. ಪಕ್ಷ ಅಧಿಕಾರಕ್ಕೆ ಬರಲು ಪ್ರಧಾನ ಪಾತ್ರ ವಹಿಸುತ್ತಿದ್ದರು, ಈಗಲೂ ವಹಿಸುತ್ತಿರುವವರು.

ಶಾಮನೂರು ಶಿವಶಂಕ್ರಪ್ಪನವರಿಗೆ ಈಗ 82 ವರ್ಷ ದಾಟಿದೆ. ಐವತ್ತು ವರ್ಷಗಳ ಕಾಲ ನಿರಂತರವಾಗಿ ಕಾಂಗ್ರೆಸ್ ಪಕ್ಷದೊಂದಿಗೆ ನಿಂತಿದ್ದಾರೆ. ಎಂದೂ ಪಕ್ಷ ತೊರೆಯುವುದನ್ನು ಕನಸಿನಲ್ಲೂ ಕಂಡವರಲ್ಲ. ಈ ಹಿನ್ನೆಲೆಯಲ್ಲಿ ನೋಡಿದರೆ ಕಾಂಗ್ರೆಸ್ ಪಕ್ಷವೇ ಅವರಿಗೆ ಅನ್ಯಾಯ ಮಾಡಿದೆ ಎನಿಸುತ್ತದೆ. ಇದನ್ನು ಖುದ್ದು ಕಾಂಗ್ರೆಸ್ ಪಕ್ಷವೇ ಒಪ್ಪಿಕೊಂಡರೆ ಅದು ಪ್ರಾಮಾಣಿಕ ಆತ್ಮಾವಲೋಕನವಾಗುತ್ತದೆ. ಆದರೆ ಅಂಥದ್ದೊಂದು ಪ್ರಾಮಾಣಿಕತೆ ದುರ್ಬೀನು ಹಾಕಿ ಹುಡುಕಿದರೂ ಕಾಂಗ್ರೆಸಿನಲ್ಲಿ ಸಿಗಲಾರದೇನೋ!!

ಹಾಗಾಗಿಯೇ ಶಿವಶಂಕರಪ್ಪನವರು ಅರ್ಧ ಶತಮಾನದಿಂದ ತೋರಿದ ತಾಳ್ಮೆ ಈಗ ಅರ್ಧ ಶತಮಾನದ ಸಿಟ್ಟಾಗಿ ಸ್ಫೋಟಗೊಂಡಿದೆ!!!

ಲಿಂಗಾಯತ ರಾಜಕಾರಣ


ಯಾವಾಗ ಯಡಿಯೂರಪ್ಪ ರಾಜ್ಯದ ಮುಖ್ಯಮಂತ್ರಿಯಾಗಿ ಪಟ್ಟಕ್ಕೇರಿಸಿದರೋ ಆಗ ಶುರುವಾಗಿದ್ದೇ ಈ ಲಿಂಗಾಯತ ಜಾತಿರಾಜಕಾರಣ. ರಾಜ್ಯದ ಒಳಿತಿಗೆ ಏನನ್ನೂ ಕಡಿದುಹಾಕದಿದ್ದರೂ ಲಿಂಗಾಯತ ಜಾತಿ ಮತ್ತು ಮಠಗಳನ್ನೇ ತನ್ನ ಅಧಿಕಾರದ ಬುನಾದಿಯನ್ನಾಗಿಸಿಕೊಂಡ ಯಡಿಯೂರಪ್ಪ ರಾಜ್ಯದ ರಾಜಕೀಯ ಸ್ಥಿತಿಯನ್ನೇ ಹದಗೆಡಿಸಿಬಿಟ್ಟರು.

ಮಾಜಿ ಮುಖ್ಯಮಂತ್ರಿ ದಿವಂಗತ ನಿಜಲಿಂಗಪ್ಪನವರು ಒಮ್ಮೆ "ವಿಧಾನಸೌಧಕ್ಕೆ ಲಿಂಗ ಕಟ್ಟುತ್ತೇನೆ" ಎಂಬ ಮಾತನಾಡಿದ್ದರಂತೆ. ಅವರು ಹಾಗೆ ಮಾಡದಿದ್ದರೂ ಈ ಯಡಿಯೂರಪ್ಪ ಅದನ್ನು 'ಸಾಧಿಸಿದರು'. ತನ್ನ ಕುರ್ಚಿ ಅಲ್ಲಾಡಿದಾಗಲೆಲ್ಲ ಯಡ್ಡಿ "ನಾನು ಲಿಂಗಾಯತನಾಗಿರುವುದರಿಂದಲೇ ನನಗೆ ಅಡ್ಡಗಾಲನ್ನು ಹಾಕಲಾಗುತ್ತಿದೆ. ಲಿಂಗಾಯತನೊಬ್ಬ ಮುಖ್ಯಮಂತ್ರಿ ಆಗಿರುವುದನ್ನು ಅವರಿಂದ ಸಹಿಸಲಾಗುತ್ತಿಲ್ಲ" ಎಂದು ಬೊಬ್ಬೆಹೊಡೆಯುತ್ತಾ ತನ್ನ ಹಲವು ಭ್ರಷ್ಟ ಸ್ವಜಾತಿ ಮಠಾಧೀಶರ ಮತ್ತು ಜಾತೀಯತೆ ಮನೋಧರ್ಮದ ಜನರ ಬೆಂಬಲವನ್ನು ಗಿಟ್ಟಿಸಿದರು.

ಈ ಹಿಂದೆ ಎಸ್.ಆರ್. ಕಂಠಿ, ಬಿ.ಡಿ.ಜತ್ತಿ ಎಸ್. ನಿಜಲಿಂಗಪ್ಪ, ವೀರೇಂದ್ರ ಪಾಟೀಲ್, ಎಸ್.ಆರ್. ಬೊಮ್ಮಾಯಿ ಮತ್ತು ಜೆ.ಎಚ್.ಪಟೇಲರಂತಹ ಲಿಂಗಾಯತರೂ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಆದರೆ ಅವರುಗಳೆಂದೂ ಜಾತಿ ರಾಜಕೀಯ ಮಾಡಿದವರಲ್ಲ. ಆದರೆ ಯಡ್ಡಿ ಜಾತಿ ರಾಜಕೀಯವನ್ನು ಮಾಡುತ್ತಾ ತಾನು ತನ್ನ ಪಾಪ ಕೃತ್ಯಗಳಿಂದ ಅಧಿಕಾರ ಕಳೆದುಕೊಂಡದ್ದನ್ನೂ ಇಡೀ ಲಿಂಗಾಯತರಿಗೆ ಆದ ಅನ್ಯಾಯ ಎಂಬಂತೆ ಬಿಂಬಿಸಿದರು. ಅದೀಗ ಯಾವ ಹಂತ ತಲುಪಿದೆ ಎಂದರೆ, ಈ ಜಾತಿ ರಾಜಕೀಯದ ಬೀಜ ಕರ್ನಾಟಕದ ಪ್ರತೀ ಹಳ್ಳಿಯಲ್ಲೂ ಜಾತೀಯತೆಯ ಪ್ರತೀಕವಾಗಿ ಚಿಗುರಿದೆ. ಇದು ಯಡಿಯೂರಪ್ಪ ಹುಟ್ಟುಹಾಕಿದ ಪಾಪದ ಕೂಸು.

ಈಗ, ಯಡಿಯೂರಪ್ಪ ಪ್ರಾರಂಭಿಸಿದ ಈ ಜಾತಿರಾಜಕೀಯ ಇತರೆ ಪಕ್ಷಗಳಲ್ಲೂ ಪ್ರತ್ಯಕ್ಷವಾಗಿದೆ.

ಜಾತಿವಾದಿ ಜನತಾದಳ ತಾನೊಂದು ಸಮಾಜವಾದಿ ಪಕ್ಷವೆಂದು ಹೇಳಿಕೊಂಡರೂ ಅದೀಗ ದೇವೇಗೌಡರ ಕುಟುಂಬ ರಾಜಕಾರಣದಿಂದ ಒಕ್ಕಲಿಗರ ಪಕ್ಷವಾಗಿದೆ. ಜಾತ್ಯತೀತ ಸಿದ್ಧಾಂತವನ್ನು ದಶಕಗಳಿಂದ ಅನುಸರಿಸುತ್ತಾ ಬಂದಿರುವ ಕಾಂಗ್ರೆಸ್ಸಿನಲ್ಲೂ ತಲೆದೋರಿದೆ. ಅದರ



ಪರಿಣಾಮವಾಗಿಯೇ ಮೊನ್ನೆ ಕಾಂಗ್ರೆಸ್ ಪಕ್ಷದ ರಾಜ್ಯಾಧ್ಯಕ್ಷರ ಗಾದಿಯನ್ನು ಲಿಂಗಾಯತರ ಕೈಗೆ ಕೊಡಿ ಎನ್ನುವ ಕೂಗು ಎದ್ದಿದ್ದು. ಅಷ್ಟೇ ಅಲ್ಲ, ಆ ಸ್ಥಾನವನ್ನು ಹಿರಿಯ ಕಾಂಗ್ರೆಸ್ಸಿಗ ಶಾಮನೂರು ಶಿವಶಂಕರಪ್ಪನವರಿಗೆ ಕೊಡಬೇಕೆಂಬ ಡಿಮಾಂಡನ್ನು ಕೆಲವು ಕಾಂಗ್ರೆಸ್ ಶಾಸಕರು ಹಾಕಿದ್ದು.

ಲಿಂಗಾಯತರ ಸಭೆ

ಮೊನ್ನೆ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಅಧಿಕೃತ ನಾಲ್ಕನೆ ಅಭ್ಯರ್ಥಿ ಸೋತ ನಂತರ ಕಾಂಗ್ರೆಸ್ ಪಕ್ಷದ ಶಾಸಕರೆಲ್ಲ ಶಾಮನೂರು ಶಿವಶಂಕರಪ್ಪನವರ ಮನೆಯಲ್ಲಿ ಸಭೆ ಸೇರಿದರು. ಅವತ್ತಿನ ಸಭೆಯಲ್ಲಿ ಕೆಪಿಸಿಸಿಯ ಮಾಜಿ ಅಧ್ಯಕ್ಷರಾದ ಅಲ್ಲಂ ವೀರಭದ್ರಪ್ಪ ಮತ್ತು ವಿ.ಎಸ್.ಕೌಜಲಗಿ, ಮಾಜಿ ಕೇಂದ್ರ ಮಂತ್ರಿ ಎಂ.ವಿ.ರಾಜಶೇಖರನ್, ಮಾಜಿ ಮಂತ್ರಿಗಳಾದ ಡಾ. ಎ.ಬಿ.ಮಾಲಕರೆಡ್ಡಿ ಮತ್ತು ರಾಣಿ ಸತೀಶ್ ಅಲ್ಲದೆ ಲಿಂಗಾಯತ ಸಮುದಾಯದ ಇತರೆ ಹಿರಿಯರೂ ಇದ್ದರು.

ಅವರೆಲ್ಲ ಅಂದು ತೆಗೆದುಕೊಂಡ ನಿರ್ಧಾರ: ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಭವಿಷ್ಯ ಇರಬೇಕೆಂದರೆ ಶಾಮನೂರು ಶಿವಶಂಕರಪ್ಪನವರನ್ನು ಕೆಪಿಸಿಸಿ ಅಧ್ಯಕ್ಷರನ್ನಾಗಿಸಬೇಕು ಮತ್ತು ರಾಷ್ಟ್ರಪತಿ ಚುನಾವಣೆ ಆದತಕ್ಷಣ ತಮ್ಮ ಈ ಬೇಡಿಕೆಯನ್ನು ಈಡೇರಿಸಬೇಕೆಂದು ಒಂದು ತಂಡ ದೆಹಲಿಗೆ ಹೋಗಿ ಅಲ್ಲಿನ ನಾಯಕರನ್ನು ಭೇಟಿ ಆಗುತ್ತದೆಂದು.

ಸ್ವತಃ ಶಾಮನೂರರು ಆ ಸಭೆಯ ನಿರ್ಧಾರಗಳನ್ನು ಕುರಿತು "ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಆದಾಗಿನಿಂದ ಕಾಂಗ್ರೆಸ್ ಪಕ್ಷದಲ್ಲಿ ಲಿಂಗಾಯತರಿಗೆ ಅನ್ಯಾಯವಾಗಿದೆ. ಇದನ್ನು ಸರಿಪಡಿಸಬೇಕೆಂದು ನಮ್ಮ ಪಕ್ಷದ ನಾಯಕರಿಗೆ ಹೇಳುತ್ತೇವೆ. ನಮ್ಮ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬರಬೇಕೆಂದಿದ್ದರೆ ನನ್ನನ್ನೇ ರಾಜ್ಯಾಧ್ಯಕ್ಷನನ್ನಾಗಿ ಮಾಡಬೇಕು. ಇವತ್ತು ಶೇ 80 ರಷ್ಟು ಒಕ್ಕಲಿಗರು ಜನತಾ ದಳದೊಂದಿಗಿದ್ದಾರೆ. ಕಾಂಗ್ರೆಸ್ ಏನೇ ಮಾಡಿದರೂ ಆ ಜಾತಿಯವರು ನಮ್ಮನ್ನು ಬೆಂಬಲಿಸುವುದಿಲ್ಲ. ಈಗ ಲಿಂಗಾಯತ ಮಠಾಧೀಶರೂ ಯಡಿಯೂರಪ್ಪನನ್ನು ಬೆಂಬಲಿಸುತ್ತಿಲ್ಲ. ಅಷ್ಟೇ ಅಲ್ಲ, ಯಡಿಯೂರಪ್ಪನಿಗೆ ಪರ್ಯಾಯ ಲಿಂಗಾಯತ ರಾಜಕಾರಣಿಯನ್ನು ಬೆಂಬಲಿಸಲು ಅವರು ಸಿದ್ಧರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಲಿಂಗಾಯತರನ್ನು ಕೆಪಿಸಿಸಿ ಅಧ್ಯಕ್ಷರನ್ನಾಗಿಸಿದರೆ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಸಲೀಸಾಗಿ 150 ಸ್ಥಾನಗಳನ್ನು ಗೆಲ್ಲುತ್ತದೆ" ಎಂದು ಹೇಳಿದ್ದಾರೆ.

ಶಾಮನೂರು ಮೂಡಿಸಿದ ಅಚ್ಚರಿ

ಶಾಮನೂರು ಶಿವಶಂಕರಪ್ಪ ಎಂದೂ ಜಾತಿರಾಜಕಾರಣ ಮಾಡಿದವರಲ್ಲ. ತರಹೇವಾರಿ ಜಾತಿಗಳ ಜನರಿರುವ ದಾವಣಗೆರೆಯಂತಹ ನೆಲದಲ್ಲಿ ಅವರೆಂದೂ ಸ್ವಜಾತಿಯ ಅಥವಾ ಮೇಲುವರ್ಗದವರ ರಾಜಕೀಯ ಪ್ರತಿನಿಧಿಯಾದವರೂ ಅಲ್ಲ. ಹಾಗೆ ನೋಡಿದರೆ ಅವರನ್ನು ಅವರದೇ ಸ್ವಜಾತಿಯ ಸಾಧುಲಿಂಗಾಯತರು ಬೆಂಬಲಿಸುವುದು ಕಡಿಮೆ. ಅಂಥಾ ಜಾತ್ಯಾತೀತ ನಿಲುವಿನ ಶಾಮನೂರರು ಈಗ ಇದ್ದಕ್ಕಿದ್ದಂತೆ ಲಿಂಗಾಯತರ ಪರ ವಾದಮಂಡಿಸುತ್ತಿರುವುದು ಮತ್ತು ಪಕ್ಷದ ಚುಕ್ಕಾಣಿಗಾಗಿ ಜಾತಿಯ ಪ್ರತಿಪಾದನೆ ಮಾಡುತ್ತಿರುವುದು ಯಾರಲ್ಲಾದರೂ ಅಚ್ಚರಿ ಹುಟ್ಟಿಸುತ್ತದೆ.

ಮೊದಲೇ ಹೇಳಿದಂತೆ ಶಾಮನೂರು ಶಿವಶಂಕರಪ್ಪನವರಿಗೆ ಕಾಂಗ್ರೆಸ್ ಪಕ್ಷ ಐವತ್ತು ವರ್ಷಗಳಿಂದಲೂ ಅನ್ಯಾಯ ಮಾಡುತ್ತಲೇ ಬಂದಿದೆ. ಅವರು ಶಾಸಕರಾಗಿದ್ದಾಗ, ಸಂಸದರಾಗಿದ್ದಾಗ ಕಾಂಗ್ರೆಸ್ ಅಧಿಕಾರದಲ್ಲಿದ್ದರೂ ಶಾಮನೂರರಿಗೆ ಮಂತ್ರಿ ಸ್ಥಾನವನ್ನು ನೀಡಿಲ್ಲ. ಅವರಿಗೆ ವ್ಯವಹಾರಿಕಜ್ಞಾನ ಇರುವುದರಿಂದ ಅವರನ್ನು ಪಕ್ಷದ ಕಾಯಂ ಖಜಾಂಚಿಯನ್ನಾಗಿಸಿದೆಯಷ್ಟೇ. ದೇವರಾಜ ಅರಸು ಕಾಲದಿಂದಲೂ ರಾಜ್ಯ ರಾಜಕಾರಣ ಕಂಡವರು, ಪಕ್ಷದ ಹಿರಿಯ ಅನುಭವಿ ರಾಜಕಾರಣಿ, ಜಾತ್ಯತೀತ ನಿಲುವಿನವರೆಂದು ಕಾಂಗ್ರೆಸ್ ಎಂದೂ ಲೆಕ್ಕಕ್ಕೆ ತೆಗೆದುಕೊಂಡಿಲ್ಲ.

ಶಾಮನೂರರ ಕಳೆದ ಐವತ್ತು ವರ್ಷಗಳಿಂದ ರಾಜಕಾರಣದಲ್ಲಿದ್ದರೂ 90ರ ದಶಕದಲ್ಲಿ ದೇವನಗರಿ ರಾಜಕಾರಣಕ್ಕೆ ಅಡಿಯಿಟ್ಟ ಅವರ ಮಗ ಮಲ್ಲಿಕಾರ್ಜುನ್ ಶಾಸಕನಾದ ಬೆನ್ನಲ್ಲೇ ಎಸ್.ಎಂ.ಕೃಷ್ಣರ ಮಂತ್ರಿಮಂಡಲದಲ್ಲಿ ಸಚಿವ ಸ್ಥಾನವನ್ನೂ ಪಡೆದರು. ಆಗ ಶಾಮನೂರು ಶಿವಶಂಕರಪ್ಪನವರು ಸಂಸತ್ ಸದಸ್ಯರಾಗಿದ್ದರು. ಇಂಥಾ ರಾಜಕೀಯ ಪಲ್ಲಟಗಳೂ ಅವರನ್ನು ಅಧಿಕಾರದಿಂದ ವಂಚಿಸಿದವೆನ್ನುವುದನ್ನೂ ಅಲ್ಲಗಳೆಯುವಂತಿಲ್ಲ.

ರಾಜ್ಯದ ಪ್ರಸ್ತುತ ರಾಜಕಾರಣ ಎಲ್ಲಾ ರಾಜಕೀಯ ಪಕ್ಷಗಳ ಬದ್ಧತೆ ಮತ್ತು ಜಾತ್ಯತೀತ ಮೌಲ್ಯಗಳನ್ನೇ ಪ್ರಶ್ನೆಗೀಡುಮಾಡಿಬಿಟ್ಟಿವೆ. ಒಕ್ಕಲಿಗ ಮತ್ತು ಲಿಂಗಾಯತ ರಾಜಕೀಯದ ವಿಷ ಗಾಳಿಗೆ ಹಿಂದುಳಿದ, ದಲಿತ, ಅಲ್ಪಸಂಖ್ಯಾತರ ಅಸ್ತಿತ್ವವೇ ವಿಚಲಿತಗೊಂಡಂತಾಗುತ್ತಿದೆ. ಶಾಮನೂರು ಶಿವಶಂಕರಪ್ಪನವರ ರಾಜಕಾರಣದ ಗಾಂಭೀರ್ಯಕ್ಕೆ ಅವರು ಅನುಸರಿಸಿಕೊಂಡು ಬಂದಿರುವ ಜಾತ್ಯತೀತ ಸಿದ್ಧಾಂತಕ್ಕೆ ಧಕ್ಕೆ ಆಗದಂತೆ ಅವರು ನೋಡಿಕೊಳ್ಳಬೇಕಿದೆ. ಅವರಿಗೆ ಪಕ್ಷ ಸೂಕ್ತ ಸ್ಥಾನಮಾನ ನೀಡುವುದು ಸದ್ಯದ ಅನಿವಾರ್ಯವಾದರೂ ಅದು ಜಾತಿಯನ್ನೇ ಆಧಾರ ಮಾಡಿಕೊಳ್ಳುವುದು ಸರಿಯಲ್ಲ.



ಈಗ ಬೇಕಿರುವುದು ಲಿಂಗಾಯತರು, ಒಕ್ಕಲಿಗರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರುಗಳೆಂಬ ಪ್ರತ್ಯೇಕವಾದ ರಾಜಕಾರಣವಲ್ಲ, ಬದಲಾಗಿ ಎಲ್ಲ ಸಮುದಾಯಗಳಿಗೂ ಸಾಮೂಹಿಕ ನಾಯಕತ್ವವನ್ನು ನೀಡುವ ಧೋರಣೆ. ಯಾಕೆಂದರೆ ಪ್ರಮುಖ ರಾಜಕೀಯ ಪಕ್ಷಗಳೆಲ್ಲ ಪ್ರಬಲ ಕೋಮಿನ ನಾಯಕತ್ವವನ್ನೋ, ಒಂದೇ ಸಮುದಾಯಕ್ಕೆ ಮಣೆ ಹಾಕುವ ಅನಿಷ್ಟ ಸಂಪ್ರದಾಯವನ್ನೋ ಪ್ರಾರಂಭಿಸಿದರೆ, ಮುಂದೊಂದು ದಿನ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ರಾಜಕೀಯ ಸಂಘರ್ಷಕ್ಕೆ ಇಳಿಯುತ್ತಾರೆ.

ಹಿರಿಯ ರಾಜಕಾರಣಿಯಾದ ಶಾಮನೂರು ಶಿವಶಂಕರಪ್ಪ ನವರಿಗೆ ಅದು ಅರ್ಥವಾಗದೆ ಇರಲಾರದು.

• ಟಿ.ಎನ್.ಷಣ್ಮುಖ

ಬಥಾನಿ ತೋಲಾ ಮತ್ತು ಕಾರ್ಟೂನ್ ವಿವಾದ

ಬಥಾನಿ ತೋಲಾ 1996. ಆರಾ ಸೆಷನ್ಸ್ ಕೋರ್ಟಿನಿಂದ ಘಟನೆ ನಡೆದ 14 ವರ್ಷಗಳ ನಂತರ ಮೇ 2010ರಲ್ಲಿ ತೀರ್ಪು ಹೊರಬಿತ್ತು, 23 ಜನ ಆರೋಪಿಗಳಲ್ಲಿ 3 ಜನರಿಗೆ ಮರಣದಂಡನೆಯನ್ನೂ, 20 ಜನರಿಗೆ ಜೀವಾವಧಿ ಶಿಕ್ಷೆಯನ್ನೂ ವಿಧಿಸಲಾಯಿತು.


ಬಥಾನಿ ತೋಲಾದಲ್ಲಿ ಹತ್ಯೆಯಾದ ದಲಿತರ ನೆನಪಿನ ಸ್ಮಾರಕ

ಈ ತೀರ್ಪಿನ ವಿರುದ್ಧ ಪಾಟ್ನಾ ಹೈಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಿದಾಗ ಇತ್ತೀಚೆಗೆ ಏಪ್ರಿಲ್ 16ಕ್ಕೆ ಅದರ ತೀರ್ಪು ಹೊರಬಂತು. ಎಲ್ಲ ಆರೋಪಿಗಳೂ ಆರೋಪಗಳಿಂದ ಖುಲಾಸೆಯಾಗಿದ್ದರು. 1996 ಏಪ್ರಿಲ್ 11ರಂದು ಬಿಹಾರದ ಭೋಜ್‌ಪುರ್ ಜಿಲ್ಲೆಯ ಸಹಾರ್ ಬ್ಲಾಕಿನ ಪುಟ್ಟ ಹಳ್ಳಿಯಲ್ಲಿ ಸಂಭವಿಸಿದ 21 ದಲಿತರ ಮಾರಣ ಹೋಮದ ಬಗೆಗೆ ತಿಳಿದವರಿಗೆಲ್ಲ ಈ ತೀರ್ಪು ಆಘಾತ ನೀಡಿತು. ಸಿಟ್ಟಿನಿಂದ ಪ್ರತಿಕ್ರಿಯಿಸಿದವರೂ ಇದ್ದರು. ಆದರೆ ಅವೆಲ್ಲ ಭೋಜ್‌ಪುರ, ಗಯಾ, ಔರಂಗಾಬಾದ್, ಅರವಾಲ್ ಇತ್ಯಾದಿ ಪಾಟ್ನಾದಿಂದ 60 ಕಿಮೀ ಒಳಗಿನ ಪ್ರದೇಶಗಳ, ಹತರಾದವರ ಬಂಧುಗಳ ಪ್ರತಿಕ್ರಿಯೆಗಳಾಗಿದ್ದವು. ಮಾಮೂಲಿನಂತೆ ನಿತೀಶ್ ಕುಮಾರ್ ಸರ್ಕಾರ ಸುಪ್ರೀಂ ಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸುವುದಾಗಿ ಹೇಳಿ ಕೈ ತೊಳೆದುಕೊಂಡಿತು. ರಾಬ್ರಿದೇವಿ ಸರ್ಕಾರ 1996ರಲ್ಲಿ ಕುಖ್ಯಾತ ರಣವೀರ ಸೇನೆಯ ರಾಜಕೀಯ ನಂಟಿನ ಬಗ್ಗೆ ತನಿಖೆ ನಡೆಸಲು ನೇಮಿಸಿದ್ದ ಜಸ್ಟಿಸ್ ಅಮೀರ್‌ದಾಸ್ ಕಮಿಷನ್ ಅನ್ನು ವಜಾಗೊಳಿಸಿ ನಿತೀಶ್ ಸರ್ಕಾರ ಗೊಂದಲಕ್ಕೊಳಗಾಗಿತ್ತು, ಹಾಗಾಗಿ ದಲಿತರ ಗಾಯಕ್ಕೆ ಉಪ್ಪು ಸವರುವಂತಹ ತೀರ್ಪು ಯಾರಿಗೂ ತಿಳಿಯದೇ ಚಾಪೆಯಡಿ ನುಸುಳಿ ಹೋಯ್ತು. ಟಿವಿಯಲ್ಲಿ ಈ ಬಗ್ಗೆ ಚರ್ಚೆಯಾಗಲಿಲ್ಲ, ಮಾಧ್ಯಮಗಳು ಈ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ, ಹುಬ್ಬೇರಿಸುವ ವಿಶ್ಲೇಷಣೆಗಳು ನಡೆಯಲಿಲ್ಲ.

ಇದೇ ವೇಳೆಗೆ 63 ವರ್ಷ ಕೆಳಗೆ ಬರೆದು ಶಂಕರ್ಸ್ ವೀಕ್ಲಿಯಲ್ಲಿ ಪ್ರಕಟಿಸಿದ್ದ ಹೆಸರಾಂತ ಕಾರ್ಟೂನಿಸ್ಟ್ ಶಂಕರ್ ಪಿಳ್ಳೈ ರಚಿಸಿದ ಕಾರ್ಟೂನೊಂದು ವಿವಾದಕ್ಕೊಳಗಾಗಿತ್ತು. ಸಂವಿಧಾನ ರಚನೆ ವಿಳಂಬವಾಗುತ್ತಿರುವುದರ ಕುರಿತು ಒಂದು ಕಾರ್ಟೂನ್ ಎನ್‌ಸಿಇಆರ್‌ಟಿ ಪಠ್ಯದಲ್ಲಿತ್ತು, 11ನೇ ತರಗತಿಯ ರಾಜ್ಯಶಾಸ್ತ್ರದ ಪಠ್ಯಪುಸ್ತಕದಲ್ಲಿದ್ದ ಅದರಲ್ಲಿ ಸಂವಿಧಾನವೆಂಬ ಬಸವನಹುಳದ ಮೇಲೆ ಕುಳಿತು ಚಾಟಿ ಬೀಸುತ್ತಿರುವ ಅಂಬೇಡ್ಕರ್, ಅವರ ಹಿಂದೇ ಚಾಟಿ ಬೀಸುತ್ತ ನಿಂತಿರುವ ನೆಹರೂ ಹಾಗೂ ಸುತ್ತ ನಿಂತು ನೋಡುವ ಜನ ಇದ್ದರು. ಇದು 2006ರಿಂದಲೇ ಈ ಪಠ್ಯದಲ್ಲಿದ್ದರೂ 6 ವರ್ಷಗಳ ತರುವಾಯ ಈಗ ರಾಜಕಾರಣಿಗಳ ಕಣ್ಣಿಗೆ ಬಿತ್ತು. ಚುನಾವಣಾ ರಾಜಕಾರಣದ ವ್ಯಾಕರಣದಂತೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರು ತಕ್ಷಣವೇ ಪ್ರತಿಕ್ರಿಯಿಸಿ ಈ ಪಠ್ಯ ತಯಾರಿಸಿದ ಎನ್‌ಸಿಇಆರ್‌ಟಿಗೆ ಪಠ್ಯ ಹಿಂತೆಗೆದುಕೊಳ್ಳುವಂತೆ ಸೂಚಿಸಿದರು. ಆದರೆ ವಿವಾದ ಪುಣೆ ವಿಶ್ವವಿದ್ಯಾಲಯದ ಸುಭಾಷ್ ಪಾಲ್ಶೀಕರ್ ಅವರ ಕಚೇರಿಗೆ ರಿಪಬ್ಲಿಕನ್ ಪ್ಯಾಂಥರ್ಸ್ ಕಾರ್ಯಕರ್ತರು ನುಗ್ಗಿ ದಾಂಧಲೆ ನಡೆಸಿ ಅದು ಟಿವಿಯಲ್ಲಿ ಬಹುಚರ್ಚೆಯಾಗುವಷ್ಟರ ಮಟ್ಟಿಗೆ ಮುಂದುವರೆಯಿತು.

ಈ ಎರಡೂ ವಿಷಯಗಳು ದಲಿತರ ಮನೋಭಾವದ ಕುರಿತು ಎರಡು ಪ್ರಶ್ನೆಗಳನ್ನೆತ್ತುತ್ತಿವೆ: ಭಾವುಕಗೊಳಿಸುವ ವಿಷಯಗಳ ಬಗೆಗಷ್ಟೇ ಅವರು ಗಮನ ಹರಿಸುವುದೇಕೆ? ಮತ್ತು ದಲಿತರ ಅಸ್ತಿತ್ವದ ಪ್ರಶ್ನೆಯ ಬಗ್ಗೆ ನಿರ್ಲಕ್ಷ್ಯವೇಕೆ?

ಅಂಬೇಡ್ಕರ್ ಎಂಬ ಪ್ರತಿಮೆ


ಇಡೀ ದಲಿತ ಶಕ್ತಿಯೇ ಅಂಬೇಡ್ಕರ್ ಮೂರ್ತೀಕರಣದಲ್ಲಿ ಕೇಂದ್ರೀಕೃತವಾಗಿದೆ. ದಲಿತರ ಏಳ್ಗೆಗೆ ಅಂಬೇಡ್ಕರ್ ಕೊಡುಗೆಯನ್ನು ಗಮನದಲ್ಲಿಟ್ಟುಕೊಂಡರೆ ಅವರು ತಮ್ಮ ಉದ್ಧಾರಕ, ದೇವದೂತ ಎಂದು ದಲಿತರು ಭಾವಿಸುವುದು ಸಹಜವೇ. ಅಷ್ಟೇ ಅಲ್ಲ, ದಲಿತ ಸಮುದಾಯದ ಸ್ಥಿತಿಗತಿಯನ್ನು ಅವಲೋಕಿಸಿದರೆ ಅವರ ಮೂರ್ತೀಕರಣವೂ ಸಹಜವೇ. ಅಂಬೇಡ್ಕರ್ ಮೂರ್ತಿ ದೇವರ ಫೋಟೋಗಳ ಸ್ಥಾನ ಆಕ್ರಮಿಸಿಕೊಂಡಿದೆ. ದಲಿತರ ಆತ್ಮಗೌರವ, ಪ್ರತಿಷ್ಠೆ ಸ್ವಾಭಿಮಾನದ ಸಂಕೇತವಾಗಿದೆ. ಅವರಿಗೆ ಅದೊಂದು ಬೆಳಕು, ತಮ್ಮ ಹೋರಾಟಕ್ಕೆ ಒಗ್ಗೂಡಿಸುವ ಶಕ್ತಿ. ಇಷ್ಟೆಲ್ಲ ಆದದ್ದು ದುಷ್ಟ ಹಿತಾಸಕ್ತಿಗಳ ಕೈವಾಡಕ್ಕೆ ಬಲಿಯಾಯಿತು. ಅಂಥ ಮೊದಲ ಕೃತ್ಯ ಬಂದದ್ದು ಒಳಗಿನಿಂದಲೇ, ಕಾಲೇಜು ಕಲಿತ ನಗರೀಕರಣಗೊಂಡ ದಲಿತರಿಂದಲೇ. ಸ್ವಹಿತಾಸಕ್ತಿಗನುಗುಣವಾಗಿ ಅವರು ಆ ಮೂರ್ತಿಗೆ ಮನಸೋಇಚ್ಛೆ ಬಣ್ಣ ಬಳಿದುಕೊಂಡರು. ಆ ಮೂರ್ತಿಯಲ್ಲಿ ಕ್ರಾಂತಿಕಾರಿ ಬದಲಾವಣೆ ಬಯಸಿದ ಅಂಬೇಡ್ಕರ್ ನಾಪತ್ತೆಯಾಗಿ ಜಾತಿ ಆಧರಿತ ಮೀಸಲಾತಿ ಪ್ರತಿಪಾದಕ, ಸಂವಿಧಾನಶಿಲ್ಪಿ, ಸರಕುಸಂಸ್ಕೃತಿ ವಿರೋಧಿ ಮತ್ತು ಮನೋಕೇಂದ್ರಿತ ಬೌದ್ಧ ಪ್ರತಿಪಾದಕ ಎಂದೆಲ್ಲ ಬಿಂಬಿಸಲ್ಪಟ್ಟ ಅಂಬೇಡ್ಕರ್ ಮೈದಾಳಿದರು. ಚುನಾವಣಾ ರಾಜಕೀಯ ಬರಬರುತ್ತ ಸ್ಪರ್ಧಾತ್ಮಕವಾಗುತ್ತ ಹೋದಹಾಗೆ, ಮಧ್ಯಮ ಜಾತಿಗಳ ಪ್ರಾದೇಶಿಕ ಪಕ್ಷಗಳು ತಲೆಯೆತ್ತಿದ ಹಾಗೆ, ರಾಜಕಾರಣಿಗಳು ವೋಟ್‌ಬ್ಯಾಂಕ್ ಆಗಿ ದಲಿತರ ಪ್ರಾಮುಖ್ಯತೆಯನ್ನರಿತರು. ಅಂಬೇಡ್ಕರ್ ಮೂರ್ತಿಯನ್ನು ದಲಿತರನ್ನು ಸೆಳೆಯುವ ಉಪಕರಣವಾಗಿ ಬಳಸಿದರು.


ಇದ್ದಕ್ಕಿದ್ದಂತೆ, ಇದುವರೆಗೆ ಮುಖ್ಯವಾಹಿನಿಯಿಂದ ನಿರ್ಲಕ್ಷ್ಯಕ್ಕೊಳಗಾದ ಅಂಬೇಡ್ಕರ್ ಎಲ್ಲರ ಪ್ರೀತಿಪಾತ್ರರಾದರು. ಅದೇ ರಾಜಕಾರಣ ಅವರ ಪ್ರತಿಮೆಗಳನ್ನು ನಿಲ್ಲಿಸತೊಡಗಿತು. ರಸ್ತೆಗೆ ಅವರ ಹೆಸರಿಡತೊಡಗಿತು. ಸ್ತುತಿಗೀತೆ ಹಾಡಿತು. ಈ ಮೂರ್ತಿಯನ್ನು ಇನ್ನಷ್ಟು ಬಲಗೊಳಿಸುತ್ತಾ ವಿರೂಪಗೊಳಿಸುತ್ತಾ ದಲಿತರನ್ನು ವಾಸ್ತವದಿಂದ ದೂರ ಕರೆದೊಯ್ಯಲು ಪ್ರಯತ್ನಿಸಿತು.


ಹೀಗೆ ದಲಿತರ ಮನಸ್ಸಿನಲ್ಲಿ ಒಮ್ಮೆ ಅಂಬೇಡ್ಕರ್ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಬಳಿಕ ಅವರನ್ನು ಸೆಳೆಯಲು ಸ್ಪರ್ಧೆಗಿಳಿದವರಂತೆ ಒಬ್ಬರಿಗಿಂತ ಒಬ್ಬರು ಭಕ್ತಿ ಪ್ರದರ್ಶಿಸತೊಡಗಿದರು. ಮುಖ್ಯವಾಹಿನಿಯ ರಾಜಕಾರಣಿಗಳಿಂದ ವಸೂಲಿ ಕೇಳುವಮಟ್ಟಕ್ಕೆ ದಲಿತ ರಾಜಕಾರಣ ಇಳಿದ ಬಳಿಕ ಸ್ವಘೋಷಿತ ನಾಯಕರುಗಳು, ತಮ್ಮನ್ನೇ ತಾವು ಕಟ್ಟಾ ಅಂಬೇಡ್ಕರ್ ಅನುಯಾಯಿ ಎಂದು ಘೋಷಿಸಿಕೊಂಡು ಪ್ರತ್ಯಕ್ಷರಾಗಿ ದಲಿತರ ಬೆಂಬಲ ಬಯಸತೊಡಗಿದರು. ಅತಿ ಗಟ್ಟಿಯಾಗಿ ಅಂಬೇಡ್ಕರ್ ಕುರಿತು ಮಾತನಾಡಿದವ ದೊಡ್ಡ ನಾಯಕನೆನಿಸಿಕೊಂಡ. ಅಸಂಬದ್ಧವಾಗಿ ಅಂಬೇಡ್ಕರ್ ಭಕ್ತಿ ಪ್ರದರ್ಶಿಸಿದಷ್ಟೂ, ಕಟ್ಟಾ ಅಂಬೇಡ್ಕರ್‌ವಾದಿ ಎನಿಸಿಕೊಂಡ. ಈ ಪ್ರಕ್ರಿಯೆಯಲ್ಲಿ ನಿಜವಾದ ಅಂಬೇಡ್ಕರ್ ಮರೆತುಹೋದರು. ಪ್ರತಿಮೆಗಳ ಕೆಡವಿದ ಸತ್ಯಶೋಧಕ, ಶೋಷಿತರ ಪರವಾಗಿ ನಿರ್ಭಯವಾಗಿ ಹೋರಾಡಿದ, ಶೋಷಣೆ, ವಂಚನೆಗಳಿಲ್ಲದ ವಿಶ್ವವನ್ನು ಕನಸಿದ ಅಂಬೇಡ್ಕರ್ ಕಳೆದುಹೋದರು. ದಲಿತರ ದೈನಂದಿನ ಬದುಕಿನ ಕಷ್ಟ ಪರಿಹಾರಕ್ಕಾಗಿ ಅವರು ಹೋರಾಡಿದರೆಂಬುದನ್ನು ಮರೆಯಲಾಯಿತು. 'ಮುಕ್ತಿ ಕೋನ್ ಪಾಥೆ?' ಎಂಬ ಅವರ ಲೇಖನವನ್ನು ಓದಿದರೆ ತಿಳಿಯುತ್ತದೆ; ಅವರು ಬೌದ್ಧ ಧರ್ಮದೆಡೆಗೆ ನಡೆದಿದ್ದೂ ದೌರ್ಜನ್ಯಕ್ಕೆ ಪಕ್ಕಾಗುವ ಹಿಂದೂ ಧರ್ಮದ ಅಸ್ತಿತ್ವವನ್ನು ನಿರಾಕರಿಸಿಯೇ. ತಮ್ಮ ಜೀವನದ ಕೊನೆಯಲ್ಲಿ ತಾನು ಮಾಡಿದ ಪ್ರಯತ್ನಗಳಿಂದ ಬೆರಳೆಣಿಕೆಯಷ್ಟು ನಗರದ ಕಲಿತ ದಲಿತರಿಗಷ್ಟೇ ಉಪಯೋಗವಾಯಿತು, ಹಳ್ಳಿಯ ದಲಿತನಿಗೆ ಹೆಚ್ಚೇನೂ ಮಾಡಲಾಗಲಿಲ್ಲ ಎಂದು ಅವರು ಪರಿತಪಿಸಿದ್ದೂ ಇದೆ.

ಕಾರ್ಟೂನ್ ವಿವಾದ

ಈ ಮೂರ್ತೀಕರಣವೇ ಕಾರ್ಟೂನ್ ವಿವಾದದ ಹಿಂದಿರುವುದು. ಸಮಾಜ ಅದನ್ನು ನೇತ್ಯಾತ್ಮಕವಾಗಿ ನೋಡುವ ಸಾಧ್ಯತೆಗಳಿದ್ದಾಗ್ಯೂ ಆ ಕಾರ್ಟೂನ್ ಅನ್ನು ಪಠ್ಯಪುಸ್ತಕದಲ್ಲಿ ಇಡುವುದು ಅಗತ್ಯವಿತ್ತೇ ಎಂಬ ಬಗ್ಗೆ ನಾನು ಚರ್ಚಿಸಬಯಸುವುದಿಲ್ಲ, ಆದರೆ ಅದು ಆರು ವರ್ಷಗಳಿಂದ ಅಲ್ಲಿ ಇತ್ತು, ಇಲ್ಲಿಯವರೆಗೆ ಅದು ಏನೂ ಸಮಸ್ಯೆ ಆಗಿಲ್ಲವೆಂದರೆ ಭವಿಷ್ಯದಲ್ಲೂ ಅದರಿಂದ ಏನೂ ಆಗುತ್ತಿರಲಿಲ್ಲ. ಇತಿಹಾಸವನ್ನು ಯಥಾವತ್ತಾಗಿ ಅದರ ಎಲ್ಲ ಮಗ್ಗುಲಿನೊಂದಿಗೆ ಪರಿಚಯಿಸುವ ದೃಷ್ಟಿಯಿಂದ ಆ ಕಾರ್ಟೂನ್ ಹಾಕಲಾಗಿತ್ತು ಎಂದು ಪಠ್ಯಪುಸ್ತಕ ಸಮಿತಿಯಲ್ಲಿದ್ದ ಸುಭಾಶ್ ಪಾಲ್ಶೀಕರ್ ವಿವರಣೆ ನೀಡಿದರೂ ಅದನ್ನು ಹಲವು ರೀತಿಯಲ್ಲಿ ಅರ್ಥೈಸುವ ಸಾಧ್ಯತೆಯಿದೆ ಎನ್ನುವುದನ್ನು ಅಲ್ಲಗಳೆಯಲಾಗುವುದಿಲ್ಲ, ಆದರೆ ಇದಕ್ಕಾಗಿ ಅವರ ಕಚೇರಿಯನ್ನು ಧ್ವಂಸ ಮಾಡಬೇಕಿಲ್ಲ. ರಿಪಬ್ಲಿಕನ್ ಪ್ಯಾಂಥರ್ಸ್ ಎಂಬ ಕ್ರಾಂತಿಕಾರಿ, ಅಸಾಂವಿಧಾನಿಕ ತತ್ವಗಳನ್ನು ನಂಬುವ ತೀವ್ರಗಾಮಿ ಗುಂಪು ಪಾಲ್ಶೀಕರ್ ಅವರ ಮೇಲೆ ದಾಳಿ ನಡೆಸಿದ್ದು ದುಃಖಕರ. ಅಂಬೇಡ್ಕರ್ ಮೂರ್ತಿ ದಲಿತರಲ್ಲಿ ಎಷ್ಟು ಆಳವಾಗಿ ಅಂತರ್ಗತವಾಗಿದೆಯೆಂದರೆ ಅವರ ಕ್ರಾಂತಿಯ ರಾಜಕಾರಣವನ್ನೂ ಮರೆಸಿಬಿಡುವಷ್ಟು ಎನ್ನುವುದನ್ನು ಇದು ತೋರಿಸುತ್ತದೆ ಅಷ್ಟೇ.


ಪ್ರತಿಮೆಯಾಗಿರುವ ಅಂಬೇಡ್ಕರ್


ದಲಿತರನ್ನು ಕೊಂದ ರಣವೀರ್ ಸೇನೆ...



ಬಥಾನಿ ತೋಲಾ ತೀರ್ಪಿನ ವಿರುದ್ಧ ಪ್ರತಿಭಟನೆ

ಈ ವಿವಾದ ಸಂಸತ್ತಿನಲ್ಲಿ ಶುರುವಾಗಿದ್ದು ಮಾಯಾವತಿಯಿಂದ. ಇತ್ತೀಚಿನ ಉತ್ತರ ಪ್ರದೇಶ ಚುನಾವಣೆ ಸೋಲಿನನಂತರ ತಾನು ದಲಿತ ನಾಯಕಿ ಎಂದು ಮಾಯಾವತಿ ಸಾಬೀತುಪಡಿಸಲು ಬಯಸುತ್ತಿರುವಂತಿದೆ. ಅಷ್ಟೇ ಅಲ್ಲ, 2014ರ ಲೋಕಸಭಾ ಚುನಾವಣೆಗೂ ಸಿದ್ಧವಾಗುತ್ತಿರುವಂತಿದೆ. ಮಾಯಾವತಿಯ ಬಹುಜನ ಸಮಾಜ ಪಾರ್ಟಿಯ ಮೂಲ ತತ್ವವೇ ಪ್ರತಿಮಾ ರಾಜಕಾರಣ. ತಾವೇನು ಕಡಿಮೆ ಎಂಬಂತೆ ಉಳಿದ ದಲಿತ ನಾಯಕರೂ; ವಿವೇಚನೆ ಕಡಿಮೆಯಿರುವ, ಶಿವಸೇನಾ-ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿರುವ ರಾಮದಾಸ ಅತವಳೆ, ಒಮ್ಮೆ ಡಿಎಂಕೆ ಮಗದೊಮ್ಮೆ ಎಐಎಡಿಎಂಕೆ ಎಂದು ಗಾಳಿ ಬಂದತ್ತ ತೂರುವ ತೊಲ್ ತಿರುಮವಲವನ್ (ವಿಡುತಲೈ ಚಿರುತೈಗಳ್ - ತಮಿಳುನಾಡಿನ ದಲಿತ್ ಪ್ಯಾಂಥರ್ಸ್) ಸಹ ಕಾರ್ಟೂನ್ ವಿರುದ್ಧ ದನಿಯೆತ್ತಿದರು.

ಅಂಬೇಡ್ಕರ್ ಮೂರ್ತಿ ಮತ್ತು ಮೀಸಲಾತಿ ಈ ಎರಡು ಬಿಟ್ಟು ಹೋರಾಡಲು ಬೇರೆ ವಿಷಯಗಳೇ ಇಲ್ಲ ಎನ್ನು... ಹಾಗೆ!

ಗುಣಮಟ್ಟದ ಶಿಕ್ಷಣದ ಕೊರತೆ, ಕಡಿಮೆಯಾಗುತ್ತಿರು... ಉದ್ಯೋಗಾವಕಾಶ, ಕೆಲವೇ ಜನರನ್ನು ಅದರಲ್ಲೂ ನಗರೀ... ಸುಸ್ಥಿತಿಯಲ್ಲಿರುವವರನ್ನೇ ತಲುಪುವ ಮೀಸಲಾ... ಕುಂದುತ್ತಿರುವ ಸಾರ್ವಜನಿಕ ಆರೋಗ್ಯ ಸೇವಾಲಭ್ಯ... ಕಡಿಮೆಯಾಗುತ್ತಿರುವ ಪ್ರಜಾಪ್ರಭುತ್ವವಾದಿ ಅವಕಾಶ... ಈ ಎಲ್ಲವೂ ನಾಯಕರಿಗೆ ಹೋರಾಟ ಕಟ್ಟು... ವಿಷಯಗಳಾಗಲೇ ಇಲ್ಲ.

ದಲಿತ ರಕ್ತ

ಆದ್ದರಿಂದ ಬಥಾನಿ ತೋಲಾ ಹತ್ಯಾಕಾಂಡದ... ಭಾಗಿಯಾಗಿದ್ದ ರಣವೀರ ಸೇನೆಯ 23 ಜನ ಆರೋಪಿಗ... ಖುಲಾಸೆಯಾದರೆ ಅದು ದಲಿತ ನಾಯಕರಿಗೆ ಪ್ರಶ್ನಾರ್ಹವ... ಸುವುದಿಲ್ಲ. ಬಥಾನಿ ತೋಲಾ ಒಂದೇ ಅಲ್ಲ, ಎಷ್ಟೋ... ದೌರ್ಜನ್ಯ ಪ್ರಕರಣಗಳಲ್ಲಿ ತೀರ್ಪು ಹೊರಬಿದ್ದಿರುವ... ನೋಡಿದರೆ ಗೊತ್ತಾಗುತ್ತದೆ. ಉದಾ: ಆಂಧ್ರಪ್ರದೇಶ... ಕರಂಚೇಡು ಪ್ರಕರಣ. ಹೈಕೋರ್ಟ್ 50 ಜ... ಆರೋಪಿಗಳನ್ನೂ ಆರೋಪಮುಕ್ತಗೊಳಿಸಿತು. 23 ವ... ಕಳೆದ ತರುವಾಯ ಸುಪ್ರೀಂಕೋರ್ಟಿನಲ್ಲಿ ಒಬ್ಬ ಆರೋಪಿ... ಜೀವಾವಧಿ ಶಿಕ್ಷೆಯಾಯಿತು, ಉಳಿದ 30 ಜನರಿಗೆ ಮೂ... ವರ್ಷ ಜೈಲುವಾಸದಿಂದ ಹಿಡಿದು ವಿವಿಧ ಪ್ರಮಾಣ... ಶಿಕ್ಷೆ ವಿಧಿಸಲಾಯಿತು. ಮಹಾರಾಷ್ಟ್ರದ ಖೈರ್ಲಾಂ... ಪ್ರಕರಣದಲ್ಲೂ ಅಷ್ಟೇ, ಸಾರ್ವಜನಿಕ ಅಭಿಪ್ರಾಯಕ್ಕೆ ಹೆದ... ವಿಶೇಷವಾಗಿ ನೇಮಕಗೊಂಡಿದ್ದ ಸೆಷನ್ಸ್ ಕೋರ್ಟ್ ಆ... ಜನರಿಗೆ ಮರಣದಂಡನೆ ಮತ್ತು ಇಬ್ಬರಿಗೆ ಜೀವಾವ... ಶಿಕ್ಷೆ ನೀಡಿತು. ಮೂರ್ಖರಂತೆ ಆ ತೀರ್ಪನ್ನು ಸ್ವಾಗತಿ... ಸಂಭ್ರಮಾಚರಣೆಗೈದ ದಲಿತ ನಾಯಕರು 35 ಆರೋ... ಗಳನ್ನು ಖುಲಾಸೆ ಮಾಡಲಾಗಿದೆ ಎಂದೂ; ಕಠಿಣ ಶಿಕ್ಷೆ... ಅಗತ್ಯವಿರುವ ಆರೋಪಗಳಾದ ಸಂಚು, ಲೈಂಗಿಕ ಹಿಂ... ಮತ್ತು ಜಾತಿಜಗಳ ಇಲ್ಲವೆಂದೂ ಹೇಳಿದ್ದನ್ನು ಮರೆ... ಬಿಟ್ಟರು. ಬಿಹಾರದ ಲಕ್ಷ್ಮಣಪುರ-ಬಾತೆಯ ರಣವೀ... ಸೇನೆಯ ಹತ್ಯಾಕಾಂಡದಲ್ಲಿ ಕೆಳ ನ್ಯಾಯಾಲಯದ ತೀರ್ಪು... ಹೆಚ್ಚುಕಮ್ಮಿ 13 ವರ್ಷಗಳ ನಂತರ ಬಂತು. 16 ಜನರಿ... ಮರಣದಂಡನೆ, 10 ಜನರಿಗೆ ಜೀವಾವಧಿ ಮತ್ತು 5000... ದಂಡದ ಶಿಕ್ಷೆ ವಿಧಿಸಿ ಉಳಿದ 19 ಜನರನ್ನು ಸೂ... ಸಾಕ್ಷಿಗಳಿರಲಿಲ್ಲವೆಂದು ಬಿಡುಗಡೆ ಮಾಡಿತು. ಇದೆಲ್ಲ ಏ... ಹೇಳುತ್ತದೆಂದರೆ ಸಾರ್ವಜನಿಕರ ಒತ್ತಡಕ್ಕೆ ಸಿಲುಕುವ ಕೆ... ನ್ಯಾಯಾಲಯಗಳು ಕಠಿಣ ಶಿಕ್ಷೆ ವಿಧಿಸಿದ್ದರೂ ಹೈಕೋರ್ಟ್... ಅದನ್ನು ವಜಾಗೊಳಿಸುತ್ತದೆ. ಮತ್ತೆ ಕೇಸನ್ನು ಮುಂದು... ವರೆಸಿದರೆ ಸುಪ್ರೀಂಕೋರ್ಟ್ ಅದರಲ್ಲಿ ಕೆಲ ಭಾಗವನ್ನ... ಎತ್ತಿ ಹಿಡಿಯುತ್ತದೆ. ಈ ದೀರ್ಘ ಕಾನೂನು ಸಮ... ಎಷ್ಟು ಜನಸಾಮಾನ್ಯ ದಲಿತನಿಗೆ ಎಟುಕುತ್ತದೆ? ಇದ... ಸಹಜವಾಗೇ ನ್ಯಾಯವನ್ನು ಕೊನೆಯ ತೀರ್ಪಿನಿಂದ ದೂ... ಒಯ್ಯುತ್ತದೆ.


ಸಾಮಾಜಿಕ ನ್ಯಾಯ ಮತ್ತ... ಸಬಲೀಕರಣ ಮಂತ್ರಿ ಮುಕುಲ್ ವಾಸ್ನಿ... 2012 ಏಪ್ರಿಲ್ 17ರಂದು ಮಾ... ನಾಡುತ್ತ ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆ... ಪ್ರಮಾಣ ಅತಿ ಕಡಿಮೆಯಾದ ಬ... (3%-8%) ಆತಂಕ ವ್ಯಕ್ತಪಡಿಸಿದ್ದರು... ಒಲ್ಲದ ಮನಸ್ಸಿನಿಂದ ದೌರ್ಜನ್ಯ ಪ್ರಕರ... ದಾಖಲಿಸಿಕೊಳ್ಳುವ ಪೊಲೀಸರು, ಕೇಸ... ದುರ್ಬಲಗೊಳಿಸುವ ತನಿಖಾ ನೀತಿನಿ... ಮಾವಳಿ ಮತ್ತು ಇನ್ನಿತರ ನೆಪಗಳ... ಸರಿಯಾಗಿ ವಾದಮಂಡಿಸದ ವಕೀಲ... ಇವೆಲ್ಲವೂ ಕೋರ್ಟುಗಳು ದೌರ್ಜ... ಪ್ರಕರಣಗಳಲ್ಲಿ ರಾಜಕೀಯ ಒತ್ತಡ... ಮಣಿಯುತ್ತಾರೆ ಹಾಗೂ ತಮಗಿಷ್ಟ ಬಂದಂತೆ ತಿರುಚಿ... ತೀರ್ಪು ನೀಡುತ್ತಾರೆ ಎನ್ನುವುದನ್ನು ಸಾಬೀತುಮಾಡುತ್ತ...

ಬಥಾನಿ ತೋಲಾ ಪ್ರಕರಣದಲ್ಲಿ ಕೋರ್ಟ್ ಕಣ್ಣಾ... ಕಂಡ ಸಾಕ್ಷಿಗಳನ್ನು ಅವರು ಸಾಕ್ಷಿಯಾಗಿರಲಿಕ್ಕಿಲ್ಲವೆಂದ... ಹೇಳಿ ಸಾಕ್ಷ್ಯ ನಿರಾಕರಿಸಿತು. ಅವರು ಸಾಕ್ಷಿಯಾಗಿದ್ದರೆ ಅವರು... ಬದುಕುಳಿಯುತ್ತಿರಲಿಲ್ಲವೆನ್ನುವುದು ಕೋರ್ಟಿನ ವಾ... ಅವರು ಆ ಸ್ಥಳದಲ್ಲಿದ್ದಿದ್ದರೆ ಅವರ ಕೊಲೆಯೂ ಆಗುತ್ತಿ... ಎನ್ನುವುದು ಅದರ ಅಭಿಮತ.

ಈ ಎಲ್ಲ ಸಮಸ್ಯೆಗಳ ಮೂಲ ಏನೆಂದರೆ ಕಾನೂನ... ವ್ಯವಸ್ಥೆಗೆ ಉತ್ತರದಾಯಿತ್ವ ಇಲ್ಲದೇ ಇರುವುದು. ತಮ... ಹೋರಾಟ ಶುರುಮಾಡಲು ದಲಿತರಿಗೆ ಇದೊಂದ... ವಿವಾದವೆಂದು ತೋರುವುದಿಲ್ಲವೆ?

● ಡಾ.ಆನಂದ್ ತೇಲ್ತುಂಬ...

ಕನ್ನಡಕ್ಕೆ: ಡಾ.ಎಚ್.ಎಸ್.ಅನುಪಮಾ



ಮದುವೆ ಆಗಿ ಎರಡು ವರ್ಷ ಕಳೆದ ಮೇಲೆ ರೇಶನಿಗೆ ಸರ್ಕಾರಿ ನೌಕರಿ ಸಿಕ್ಕಿತ್ತು. ಇದು ಮನೆಯಲ್ಲಿ ವರಿಗೆಲ್ಲ ಖುಷಿ ತಂದಿತ್ತು. ಹೆಂಡತಿ ಸುಮಿತ್ರಳಿಗಂತೂ ಳತೀರದಷ್ಟು ಖುಷಿ. ಆದರೂ ಬಂದು ವಿಚಾರಿಸುವವರ ಮುಂದೆ "ಎಲ್ಲ ನಮ್ಮ ಜಮಾನರ ಮು" ಎಂದು ಹೇಳುತ್ತಿದ್ದಳು. ಕ್ಕಂದಿನಿಂದಲೂ ಒಟ್ಟಿಗೆ ಬೆಳೆದ ರೇಶ ಮತ್ತು ಸುಮಿತ್ರ ಮದುವೆ ಗುತ್ತಾರೆ ಎಂದು ಅವರಿಗೇ ತಿಳಿದಿರಲಿಲ್ಲ. ಇದು ದೊಡ್ಡವರಾದಾಗಲೂ ಸಹ ಚಿಕ್ಕವ ತೆಯ ಕಚ್ಚಾಡುತ್ತಿದ್ದರು. ಸುಮಿತ್ರಳಂತು ಬಾಯಿ ಮಾಡಿದರೆ ಮುಗಿಯಿತು, ಎಲ್ಲರೂ ಬಾಯಿ ಮುಚ್ಚಲೇ ಕು. ಸುರೇಶ ಸೌಮ್ಯ ಜೀವಿ, ಹೆಂಡತಿ ಅಂದರೆ ಣ. ಎರಡು ವರ್ಷ ಮಕ್ಕಳಾಗದಿದ್ದರೂ ಹೆಂಡತಿಗೆ ದು ಮಾತನ್ನದೆ ತನ್ನದು ಸಹ ಸಮಸ್ಯೆ ಇದೆಯೆಂದು ಳಿ ವೈದ್ಯರ ಬಳಿ ವಿಟಮಿನ್ ಮಾತ್ರೆಗಳನ್ನು ಬರೆಸಿಕೊಂಡು ಮಿತ್ರಳ ಒಟ್ಟಿಗೆ ನುಂಗುತ್ತಿದ್ದ.

ಊರೂರು ಸುತ್ತದ ಸುರೇಶನಿಗೆ ತನ್ನ ಜಿಲ್ಲೆಯಲ್ಲಿಯೆ ಸ ಸಿಕ್ಕಿದ್ದು ಸಂತಸ ತಂದಿತ್ತು. ಕೆಲಸಕ್ಕೆ ಹಾಜರಾಗಿ ದಿದ್ದ ಸುರೇಶ ಅಲ್ಲೆ ಮನೆ ಮಾಡಿಕೊಂಡು ಇರುವುದಾಗಿ ರ್ಮಾನಿಸಿಕೊಂಡಿದ್ದ. ಇದಕ್ಕೆ ಸುಮಿತ್ರಳ ಒಪ್ಪಿಗೆಯನ್ನು ಕ ಪಡೆದಿದ್ದ. ಮನೆಗೆ ಬಂದ ಸುರೇಶನಿಗೆ ತುಂಬು ದಯದಿಂದ ಸ್ವಾಗತ ಕಾದಿತ್ತು, ಸಿಹಿ ಮಾಡಿ ರೇಶನ ಬರುವಿಕೆಗಾಗಿಯೇ ಮನೆಯವರೆಲ್ಲ ಯುತ್ತಿದ್ದರು. ಮಾತುಕತೆ ಮುಗಿಸಿ ಖತೊಳೆದು ಬಂದ ಸುರೇಶನ ಮುಂದೆ ಸಿಹಿ ಯಸವಿಟ್ಟಾಗ "ಈಗ್ಯಾಕೆ ಸುಮಿ ಸಿಹಿ ಮಾಡಿದೆ. ಟ್ಟಿಗೆ ನನ್ನ ಮೊದಲ ತಿಂಗಳ ಸಂಬಳಕ್ಕೆ ರ್ಜರಿಯಾಗಿ ಮಾಡಬಹುದಿತ್ತಲ್ಲ?" ಎಂದ. ದಕ್ಕುತ್ತರಿಸಿದ ಸುಮಿತ್ರ "ಆಗ ಬೇಕಾದರೆ ಖಾರ ಮಾಡಿಕೊಂಡು ತಿನ್ನೋಣ. ಈಗ ಸಿಹಿ ತಿನ್ನು ಮಾವ" ಎಂದು ನಾಚಿಕೊಂಡಳು. ಆಕೆಯನ್ನು ನೆ ಇವತ್ತು ಹೊಸದಾಗಿ ನಾಚಿಕೊಳ್ಳುತ್ತಿದ್ದೀಯ" ದು ಮಾತು ಮುಂದುವರೆಸಿದವನೇ "ನಾಳೆ ಡಿಗೆ ಮನೆ ಹುಡುಕಲು ಹೇಳಿದ್ದೀನಿ. ಮನೆ ತಕ್ಷಣ ನೀನು ಬರುವಿಯಂತೆ ಆಯ್ತ?" ದು ಪ್ರಶ್ನಿಸಿದ. ಯಾವುದೊ ಗುಂಗಿನಲ್ಲಿ ಇದ್ದ ಮಿತ್ರ "ನಮ್ಮ ಜೊತೆಗೆ ಇನ್ನೊಬ್ಬರು ಮುತ್ತಿದ್ದಾರೆ" ಎಂದಳು. ತಲೆಕೆರೆದುಕೊಂಡ ರೇಶ "ಅಲ್ವೆ ನಾಳೆ ಮನೆ ನೋಡಿ ಒಟ್ಟಿಗೆ ಹೋಗೋಣ ದ್ರೆ ನಿನ್ನ ಜೊತೆಗೆ ಇನ್ನೊಬ್ಬರನ್ನು ಕರೆದುಕೊಂಡು ಮತ್ತೇನ ಅಂತಾಯಿದ್ದೀಯಲ್ಲ. ಮನೆ ನೋಡೋಕೆ ನೀನು ಕಾದರೆ ಬಾ ಆದರೆ ಇನ್ನೊಬ್ರು ಬೇಡ. ಆ ಜನಜಂಗುಳಿ ಲ್ಲಿ ಹಿಂಸೆ ಆಗತ್ತೆ" ಎಂದ. ಅದಕ್ಕೆ ಜೋರಾಗಿ ಮನೆಯ ಲ್ಲ ನಕ್ಕರು. ಸುರೇಶನಿಗೆ ಒಂದೂ ತಿಳಿಯದಾಯಿತು. ಪ್ರೊತ್ತಿಗೆ ಸುಮಿತ್ರ "ಥೂ ನಿನ್ನ, ನಾನು ಹೇಳಿದ್ದು ಇನ್ನು ಸು ತಿಂಗಳಿಗೆ ನಮ್ಮ ಮನೆಗೆ ಒಬ್ಬ ಪುಟ್ಟ ಸುರೇಶ ಬುತ್ತಾನೆ ಅಂತ" ಎಂದಳು. ಅಷ್ಟಕ್ಕೆ ಅರ್ಥಮಾಡಿಕೊಂಡ ರೇಶ "ನಿಜ! ಅಯ್ಯೋ ನನ್ನ ರಾಣಿ, ಮನೆಗೆ ಬರಬೇಕಾಗಿ ದು ಪುಟ್ಟ ಸುರೇಶ ಅಲ್ಲ, ಪುಟ್ಟ ಸುಮಿ" ಎಂದು ಮಿತ್ರಳನ್ನು ಎಂಜಲ ಕೈಯಲ್ಲೆ ಎತ್ತಿ ಒಂದು ಸುತ್ತಾಕಿದ. ಧ್ಯರಾತ್ರಿವರೆಗೆ ಮನೆಯವರೆಲ್ಲ ಮಾತನಾಡಿಕೊಂಡೇ ಕಾಲ ದರು. ನಾಳೆ ಭಾನುವಾರ ಮೊದಲ ಬಸ್ಸಿಗೆ ಬಾಡಿಗೆ ನೆ ಹುಡುಕಲು ಹೋಗಬೇಕಾಗಿದ್ದರಿಂದ ಅಲ್ಲಿಗೆ ಮಾತು ತು ಎಲ್ಲರೂ ಮಲಗಲು ಹೊರಟರು.

ಬೆಳಗ್ಗೆ ಬೇಗನೇ ಎದ್ದು ರೆಡಿಯಾದ ಸುರೇಶ ಮತ್ತು ಮಿತ್ರ ಬಸ್ಸು ಹತ್ತಿ ಜಿಲ್ಲಾ ಕೇಂದ್ರವನ್ನು ತಲುಪಿದರು. ಹೋಟೆಲೊಂದರಲ್ಲಿ ಸುಮಿತ್ರಳಿಗೆ ಇಷ್ಟವಾದ ಮಸಾಲೆದೋಸೆಯನ್ನು ತಿಂದು ಮನೆ ಹುಡುಕಲು ಹೊರಟರು. ಸುರೇಶನ ಆಫೀಸಿನ ಸುತ್ತ ಒಳ್ಳೊಳ್ಳೆ ಮನೆಗಳಿದ್ದವು. ಆದರೆ ಅವುಗಳ ಬಾಡಿಗೆ ಅತಿ ಹೆಚ್ಚಿತ್ತು. ರ್ಚ ಮಾಡಿ ಸುರೇಶ ಇದ್ದದ್ದರಲ್ಲೆ ತಕ್ಕಮಟ್ಟಿನ ಮನೆ ಹುಡುಕಲು ತನ್ನ ಆಫೀಸಿನ ನೌಕರರೊಬ್ಬರಿಗೆ ಹೇಳಿದ್ದನಾದರು ವರು ಮರೆತಿದ್ದರು. ಅದಕ್ಕೆ ಖುದ್ದು ಗಂಡ ಹೆಂಡತಿಯರಿಬ್ಬರು 'ಬಾಡಿಗೆಗೆ ಮನೆ ಖಾಲಿ ಇದೆ' ಎಂಬ ಫಲಕವನ್ನು ನೋಡುತ್ತಾ ಹೊರಟವರಿಗೆ ಆರಂಭದಲ್ಲಿಯೆ ಂದು ಮನೆ ಕಂಡಿತು. ಗೇಟಿನ ಒಳಹೋಗಿ ಮಾಲೀಕರ ಮನೆಯ ಕರೆಗುಂಡಿಯನ್ನು ಒತ್ತಿದೊಡನೆ ಒಳಗಿಂದ ಹೆಣ್ಣು ಧ್ವನಿಯೊಂದು "ಯಾರದು?" ಎಂದು ಪ್ರಶ್ನಿಸಲು ಏನು ಹೇಳಬೇಕೆಂದು ತಿಳಿಯದ ಸುರೇಶ ಸುಮ್ಮನೆ ನಿಂತದ್ದನ್ನು ನೋಡಿ ಸುಮಿತ್ರ "ಬಾಡಿಗೆ ಮನೆ ನೋಡಲು ಬಂದಿದ್ದೀವಿ" ಎಂದಳು. ಸ್ವಲ್ಪ ಹೊತ್ತಿನಲ್ಲೆ ಎದುರು ಕಿಟಕಿಯಿಂದ ಪ್ರತ್ಯಕ್ಷವಾದ ದಢೂತಿ ಹೆಂಗಸು "ಇಲ್ಲಿ ಬನ್ನಿ ಪ್ಲೀಸ್" ಎಂದದ್ದನ್ನು ಕಂಡು ಕಿಟಕಿಯ ಬಳಿ ಸುಮಿತ್ರ ಹೊರಟಳು. ಸುಮಿತ್ರಳನ್ನು ಕಂಡಕೂಡಲೆ "ನೀವು ಬ್ರೋಕರ್ ಕಡೆಯವರ?" ಎಂದು ಪ್ರಶ್ನಿಸಿದಳು ಮನೆಯ ಮಾಲೀಕೆ. "ನಾವು ಹಾಗೆ ಮನೆ ಹುಡುಕಿಕೊಂಡು ಬಂದಿದ್ದೇವೆ ಅಷ್ಟೆ" ಎಂದಳು ಸುಮಿತ್ರ. ಕಪ್ಪಗೆ ದುಂಡನೆ ಮುಖವಿದ್ದ ಸುಮಿತ್ರಳನ್ನು ನೋಡಿ ಏನನ್ನೋ ಅಂದಾಜಿಸುವಂತೆ ನೋಡುತ್ತಿದ್ದ ಮನೆ ಮಾಲೀಕೆ "ಇಲ್ಲಿ ಪಕ್ಕದ್ದೆ ಬಾಡಿಗೆ ಮನೆ. ಸಂಸಾರಸ್ಥರಿಗೆ ಮಾತ್ರ ನಾವು ಮನೆ ಕೊಡುತ್ತೇವೆ. ಆದರಲ್ಲೂ ಬ್ರಾಹ್ಮಣರೆ ಆಗಿರಬೇಕು" ಎಂದಳು.

ಮೊದಲಿನಿಂದಲೂ ತಮ್ಮ ಊರಿನ ಮನೆ ಬಿಟ್ಟು ವಾಸ ಮಾಡದ ಸುರೇಶ ಮತ್ತು ಸುಮಿತ್ರರಿಗೆ ಇದು ಹೊಸ ಅನುಭವವೇ ಆಗಿತ್ತು. ಅವರಿವರ ಬಳಿ ಕೇಳಿದ್ದ ಸಂಗತಿಯನ್ನು ಇವರು ಪ್ರತ್ಯಕ್ಷವಾಗಿ ಗಮನಿಸಿದ್ದರು. ಊರಿನ ಮೇಲ್ಜಾತಿ ಕುಟುಂಬಗಳು ಸಹ ಇವರನ್ನು ಮನೆಗೆ ಸೇರಿಸಿಕೊಳ್ಳುತ್ತಿರಲಿಲ್ಲವಾದರು ಅವರ ಮನೆ ಬಳಿ ತೆರಳುವಂತಹ ಕೆಲಸವೇನು ಇವರಿಗೆ ಇರುತ್ತಿರಲಿಲ್ಲ, ಕೆಲಸವೇನಿದ್ದರೂ ಅವರ ಹೊಲಗಳಲ್ಲಿ ಮಾತ್ರ. ಆದರೆ ವಿದ್ಯಾವಂತರೇ ತುಂಬಿರುವ ಸಿಟಿಗಳಲ್ಲೂ ಇಂತಹ ನೀಚ ಪದ್ಧತಿಯನ್ನು ನೋಡಿ ಇಬ್ಬರಿಗೂ ಆಶ್ಚರ್ಯವಾಯಿತು. ಸೌಮ್ಯವಾಗಿ ಸುರೇಶ "ಇರಲಿ ಬಿಡಿ ಅಮ್ಮ, ನಾವು ಬರ್ತೀವಿ" ಎಂದು ಮುಂದೆ ಹೆಜ್ಜೆ ಇಡುತ್ತಿದ್ದಾಗ ಸುಮಿತ್ರ ರೇಗಿ "ಅಮ್ಮ ತಾಯಿ, ಟೂ ಲೆಟ್ ಬೋರ್ಡ್ ಕೆಳಗಡೆ ಬ್ರಾಹ್ಮಣರಿಗೆ ಮಾತ್ರ ಅಂತ ಬರೆಸು. ನಮ್ಮಂತೋರಿಗೆ ಸಮಯ ಉಳಿಯತ್ತೆ" ಎಂದಳು. ಅದಕ್ಕುತ್ತರವಾಗಿ ಅವಳಿಗೆ

ಬಾಡಿಗೆ ಮನೆ



ದಡ್ ಎಂಬ ಕಿಟಕಿ ಬಾಗಿಲು ಮುಚ್ಚಿದ ಶಬ್ದ ಉತ್ತರಿಸಿತ್ತು.

"ಈ ಜಾತಿ ಇಂತ ಸಿಟಿನೇ ಬಿಟ್ಟಿಲ್ಲವಲ್ಲ ಮಾವ, ನಮ್ ಊರಿನ ಗೌಡರ ತರಾನೆ ಈಯಮ್ಮನು ಅನಿಸ್ತಾಳೆ. ನೋಡೋಕೆ ಕುಂಕುಮ ಹಾಕ್ಕೊಂಡು ಸಂಪನ್ನಳಂಗೆ ಕಾಣ್ತಳೆ. ಆದ್ರೆ ಮನಸಿನೊಳಗೆ ವಿಷ ತುಂಬಿಕೊಂಡಿದ್ದಾಳೆ. ಬ್ರಾಹ್ಮಣರೇ ಬೇಕಂತೆ ಇವಳಿಗೆ. ದಿನಾ ಹಣೆಗೆ ಹಾಕೊ ಕುಂಕುಮಾನ ಬ್ರಾಹ್ಮಣರೇ ಮಾಡ್ತಾರೇನು ಮಾವ? ಇವಳ ಸೀರೆ ಕುಬುಸಾನ ಬ್ರಾಹ್ಮಣರೆ ಮಾಡ್ತಾರ? ಹೊಲಿತಾರ?" ಹೀಗೆಯೆ ಸುಮಿತ್ರಳ ಮಾತು ಮುಂದುವರೆಯುತ್ತಿರಲು ಅವಳ ಕೈಹಿಡಿದು ಸಮಾಧಾನಪಡಿಸುತ್ತಿದ್ದ ಸುರೇಶನಿಗೆ ಮತ್ತೊಂದು ಬಾಡಿಗೆ ಮನೆ ಖಾಲಿ ಇರುವ ಫಲಕ ಕಂಡಿತು.

ಗೇಟಿನ ಬಳಿ ಹೋದತಕ್ಷಣ ಒಳಗಿದ್ದ ನಾಯಿಯು ಬೊಗಳಲು ಶುರುಮಾಡಿತು. ನಾಯಿಯ ಸದ್ದು ಕೇಳಿ ಹೊರಬಂದ ಮಾಲೀಕನಿಗೆ "ಬಾಡಿಗೆಗೆ ಮನೆ ಬೇಕಾಗಿತ್ತು" ಎಂದ ಸುರೇಶ. "ಒಂದು ನಿಮಿಷ ಬಂದೆ" ಎಂದು ಒಳಹೋದ ಮಾಲೀಕ ತನ್ನ ಹೆಂಡತಿಯನ್ನು ಕಳಿಸಿದ. ಹೊರಬಂದ ಮಾಲೀಕೆ "ಮನೆ ನೋಡಿಕೊಂಡು ಬನ್ನಿ" ಎಂದು ಕೀಲಿಕೈ ಕೊಟ್ಟಳು. ಮಹಡಿಯ ಮೇಲಿದ್ದ ಮನೆಯನ್ನು ನೋಡಲು ಮೆಟ್ಟಿಲುಗಳನ್ನು ಹತ್ತುತ್ತಿರುವಾಗ ಏನನ್ನೋ ಜ್ಞಾಪಿಸಿಕೊಂಡವಳಂತೆ ಮನೆ ಮಾಲೀಕೆ ಸುರೇಶನನ್ನು ತಡೆದು ನಿಲ್ಲಿಸಿ "ನಿಮ್ಮ ಬ್ರೋಕರ್ ಎಲ್ಲಿ?" ಎಂದು ಕೇಳಿದಳು. "ನಾವು ಯಾವುದೇ ಬ್ರೋಕರ್ ಕಡೆಯಿಂದ ಬಂದವರಲ್ಲ, ಹಾಗೆ ಬೋರ್ಡ್ ನೋಡಿ ಬಂದವರು" ಎಂದಕೂಡಲೆ ಬೆಚ್ಚಿಬಿದ್ದ ಮಾಲೀಕೆ "ನೀವು ಯಾವ ಕೆಟಗರಿಗೆ ಬರ್ತೀರ?" ಎಂದು ಕೇಳಿದಳು. ಕಣ್ಣು ಕೆಂಪಗಾಗಿಸಿಕೊಂಡ ಸುಮಿತ್ರ ಮರುಪ್ರಶ್ನಿಸುತ್ತ "ನಿಮಗೆ ಯಾವ ಕೆಟಗರಿಯವರು ಬೇಕು?" ಎಂದು ಕೇಳಿದಳು. "ನೋಡಿ, ನಮಗೆ ಲಿಂಗಾಯತರೇ ಬೇಕು, ಅದರಲ್ಲು ಸಾದರರಾದರೆ ಉತ್ತಮ" ಎಂದಳು. ಗಂಡನ ಕೈಲಿದ್ದ ಕೀಲಿಯನ್ನು ಕಿತ್ತುಕೊಂಡು ಮಾಲಿಕೆಯ ಕೈಗೆ ಕುಕ್ಕಿಸಿದ ಸುಮಿತ್ರ "ನಿಮ್ಮ ಟೂಲೆಟ್ ಬೋರ್ಡಿನ ಕೆಳಗೆ ಸಾದಾರ ಲಿಂಗಾಯತರಿಗೆ ಮಾತ್ರ ಎಂದು ಬರೆಸಿ" ಎಂದು ಹೊರಡುತ್ತಿದ್ದಂತೆ, ಸಿಡುಕಿ ಮಾತಾಡಿದ ಮಾಲೀಕೆ "ನಿನ್ನನ್ನಾರು ಬಾರಮ್ಮ ಮನೆ ನೋಡು ಅಂದೋರು? ನಮ್ಮನೆ ನೋಡಬೇಕಂದ್ರೆ ಬ್ರೋಕರ್ ಕಡೆಯಿಂದಾನೆ ಬರಬೇಕು. ನಾಗರಿಕತೆಯಿಲ್ಲದ ಜನಗಳು" ಎಂದು ಬೈದುಕೊಳ್ಳುತ್ತ ಬೋರ್ಡನ್ನೆ ಕಿತ್ತುಹಾಕಿದಳು.

ಇತ್ತ ನಡೆಯುತ್ತಲೆ ಕಿರುಚಾಡುತ್ತಿದ್ದ ಸುಮಿತ್ರಳನ್ನು ಸಮಾಧಾನಪಡಿಸುವಷ್ಟರಲ್ಲಿ ಸುರೇಶನಿಗೆ ಸಾಕುಸಾಕಾಯಿತು. "ಅವಳಾವಳೋ ಬ್ರಾಹ್ಮಣರು ಬೇಕು ಅಂದಳು, ಇವಳ್ಯಾವಳೊ ಲಿಂಗಾಯತರೊಳಗೆ ಸಾಧರು ಬೇಕಂತಾಳೆ" ಎಂದು ಗೊಣಗುತ್ತಲೆ ನಡೆಯುತ್ತಿದ್ದಳು ಸುಮಿತ್ರ. "ನಮ್ ಮನೆಗೆ ಆ ಜಲಗಾರರ ಸ್ನೇಹಿತೆ ವಾಣಿ ಬಂದಾಗಲೂ ನಮ್ಮಜ್ಜಿ ಇದೇ ತರಹ ಅವ್ರ ಜಾತಿ ಕೇಳಿ ಮನೆಯಿಂದ ಹೊರಗೆ ನಿಲ್ಲಿಸಿದ್ದಳು. ಅವಳ ಮುಖ ಮುಚ್ಚ, ಅದಕ್ಕೆ ಬೇಗ ಸತ್ತಳು ಪಾಪಿಷ್ಟೆ. ನಮ್ಮಪ್ಪ ನಮ್ಮಮ್ಮಾನು ಹಂಗೆ ಆಡ್ತಾವೆ. ಆದರೆ ಒಂದು ಸಾರೀನು ಮನೆಗೆ ಬರಬೇಡಿ ಅಂತ ಹೇಳಿಲ್ಲ. ಅದೇ ನನ್ನ ಪುಣ್ಯ. ಅಲ್ಲ ಇವಕ್ಕೆಲ್ಲ ಏನು ಬಂದಿದೆ ಅಂತೀನಿ? ನಾಚಿಕೆ ಬುಟ್ಟು ಜಾತಿ ಜಾತಿ ಅಂತಾವಲ್ಲ ಮಾಮ. ಇವು ಓದಿ ಏನು ಪ್ರಯೋಜನ? ಇವರ್ ಮನೆಗೆ ಬುನಾದಿ ಹಾಕಿದ್ದು, ಇಟ್ಟಿಗೆ ಕಟ್ಟಿದ್ದು, ಸಿಮೆಂಟ್ ಮಾಡಿದ್ದು, ಬಾಗಿಲು ಕಿಟಕಿ ಮಾಡಿದ್ದು, ಸುಣ್ಣಬಣ್ಣ ಬಳಿದದ್ದು ಲಿಂಗಾಯತಾನಾ? ಅದರಲ್ಲು ಸಾದಾರರ? ಬ್ರಾಹ್ಮಣರಾ? ಅವರವರ ಜಾತಿಯವರ? ಎಷ್ಟು ಓದಿದ್ದರೇನಂತೆ. ನಮ್ಮಜ್ಜೀನೂ ಒಂದೆ ಇವ್ರೂ ಒಂದೆ. ಮನುಷ್ಯತ್ವವಿಲ್ಲದ ಮುಂಡೇವು. ಇಂತಾವಕ್ಕೆ ಅಂತಿಂಥ ಸಾವು ಬರಲ್ಲ ನೋಡು" ಹೀಗೆ ಸುಮಿತ್ರಳ ವಿಮರ್ಶೆ ನಡುವೆ ಬೈಗುಳ ಮುಂದುವರಿದೇ ಇತ್ತು. ಅದಕ್ಕೆ ಸುರೇಶ ತಲೆ ಹಾಕುತ್ತ ನಡೆಯುತ್ತಲೇ ಇದ್ದಂತೆ ಮುಂದೆ ಮತ್ತೊಂದು ಟೂ ಲೆಟ್ ಬೋರ್ಡ್ ಕಾಣಿಸಿತು. ಸುರೇಶ ಆ ಗೇಟಿನ ಬಳಿ ಹೊರಟಂತೆ ಅವನನ್ನೆ ಹಿಂಬಾಲಿಸಿದಳು ಸುಮಿತ್ರ. ಸುರೇಶ ಗೇಟಿನ ಬಾಗಿಲು ತೆಗೆಯಬೇಕೆನ್ನುವಷ್ಟರಲ್ಲಿ "ಮಾಮ" ಎಂದು ಕೂಗಿದ ಸುಮಿತ್ರಳ ಕಡೆ ತಿರುಗಿ "ಈಗೇನಾಯಿತು?" ಎಂದ. "ಒಳಗಡೆಗೆ ಹೋಗುವ ಮೊದಲು ಮನೆ ಮಾಲೀಕರ ಹೆಸರು ನೋಡು ಬಾ" ಎಂದಳು. ನಾಮಫಲಕದಲ್ಲಿ ಬೆಟ್ಟೇಗೌಡ, ಪಾರ್ವತಿ ಎಂದು ಬರೆದಿತ್ತು. "ಅದಕ್ಕೇನಂತೆ ಬಾ ಹೋಗೋಣ" ಎಂದ ಸುರೇಶ. "ತಲೆಕೆಟ್ಟಿದೆಯ ನಿನಗೆ? ನಮ್ಮೂರಿನಲ್ಲಿ ನಾವು ಗೌಡರ ಮನೆಯೊಳಗೆ ಹೋಗೋಕಾಗುತ್ತ? ಅವರು ನಮ್ಮನ್ನ ಬಿಡ್ತಾರ? ಒಂದು ಸಾರಿ ಹನುಮಂತನ ಗುಡಿಗೆ ನಮ್ಮವರು ಹೋಗಿದ್ದಕ್ಕೆ ಎಷ್ಟು ಜಗಳ ಆಗಿತ್ತು. ಗೌಡರುಗಳೆಲ್ಲ ನಮ್ಮನ್ನ ಹೇಗೆ ಬಡಿದಿದ್ದರು ನೆನಪಿಲ್ವ?" ಎಂದಳು.

ಸುಸ್ತಾಗಿದ್ದ ಸುರೇಶ ಸುಮಿತ್ರಳನ್ನು ಪಕ್ಕದಲ್ಲೆ ಇದ್ದ ಕಲ್ಲಿನ ಕಟ್ಟೆಯ ಮೇಲೆ ಕೂರಿಸಿ "ನೋಡು ಸುಮಿ, ನೀನು ತಿಳಿದುಕೊಂಡಿರುವ ಹಾಗೆ ಈ ಜಾತಿಯವರೆಲ್ಲ ಕೆಟ್ಟವರಲ್ಲ, ಅವರಲ್ಲೂ ಒಳ್ಳೆಯ ಮನಸ್ಸಿನವರಿದ್ದಾರೆ. ಜಾತಿವಿಚಾರ ಬಂದಾಗ ನಿಮ್ಮಪ್ಪ ಅಮ್ಮಾನೂ ಹೀಗೆ ಆಡ್ತಾರೆ. ನಿನ್ನ ತಮ್ಮನಿಗೆ ಬೇರೆ ಜಾತಿಯ ಹುಡುಗಿಯನ್ನು ಮದುವೆ ಮಾಡಿಸು ನೋಡೋಣ. ಇದನ್ನು ಸರಿ ಮಾಡಬೇಕಂದ್ರೆ ನಾವು ಮೊದಲು ಸರಿ ಆಗುತ್ತಾ ಜೊತೆಜೊತೆಗೆ ಬೇರೆಯವರನ್ನೂ ಸರಿ ಮಾಡಬೇಕು. ನಾವೆಲ್ಲ ಮನೇಲಿ ಅಂಬೇಡ್ಕರ್ ಅವರ ಫೋಟೊ ಇಟ್ಟುಕೊಂಡಿದ್ದೀವಿ. ಅವರಿಗೆ ಅಂಬೇಡ್ಕರ್ ಅಂತ ಹೆಸರಿಟ್ಟವರು ಒಬ್ಬ ಬ್ರಾಹ್ಮಣ ಶಿಕ್ಷಕರು. ಅಂಬೇಡ್ಕರ್ ಅವರ ಹೋರಾಟದಲ್ಲಿಯು ಸಹ ಎಷ್ಟೋ ದಲಿತರಲ್ಲದವರು ಸಹಾಯ ಮಾಡಿದ್ದರು. ಇನ್ನು ಆಗಿನ ಕಾಲದಲ್ಲಿ ದಲಿತನ ಜೊತೆ ಬ್ರಾಹ್ಮಣರ ಮಗಳ ಮದುವೆ ಮಾಡಿಸಿದ್ದು ಯಾರು? ಇದೇ ಲಿಂಗಾಯತರ ಹುಟ್ಟಿಗೆ ಕಾರಣರಾಗಿರುವ ಬಸವಣ್ಣನವರು. ಮೈಸೂರು ಪ್ರಾಂತದಲ್ಲಿ ದಲಿತರಿಗೆ ಪಾಠ ಮಾಡಲು ಶಿಕ್ಷಕರೆ ಮುಂದೆ ಬರಲಿಲ್ಲವಂತೆ. ಆಗ ದಲಿತರಿಗೆ ಪಾಠ ಮಾಡಿದ್ದು ಒಬ್ಬ ಗೌಡರು. ಮುಂದೆ ಅವರು ದಲಿತರಿಗೆ ಹಾಸ್ಟೆಲ್‌ಗಳನ್ನು ಸಹ ಮಾಡಿದರಂತೆ. ಇಂತಹ ಮಹಾತ್ಮರೆಲ್ಲ ಜಾತಿಯನ್ನು ಮೀರಿದವರು. ಎಲ್ಲ ಜಾತಿಯಲ್ಲೂ ಜಾತಿವಾದಿಗಳು ಇದ್ದಾರೆ, ಮಾನವತಾವಾದಿಗಳೂ ಇದ್ದಾರೆ" ಎಂದು ಸುಮಿತ್ರಳಿಗೆ ಹೇಳಿದಾಗ ಆಕೆಗೆ ಸ್ವಲ್ಪ ಸಮಾಧಾನವಾಯಿತು.



"ಸರಿ ನಡಿ" ಎಂದು ಅವಳೇ ಗೇಟು ತೆಗೆದಳು. ಒಳಗೆ ಹೋಗಿ ಕರೆ ಗುಂಡಿಯನ್ನು ಒತ್ತಿದಾಗ ಬಾಗಿಲನ್ನು ತೆರೆದ ಪುರುಷ ಕನ್ನಡಕಧಾರಿಯೊಬ್ಬರು ಪಕ್ಕದಲ್ಲಿಯೆ ಇದ್ದ ಹೆಂಚಿನ ಮನೆಯನ್ನು ತೋರಿಸಿ "ಅದೆ ಮನೆ" ಎಂದು ಹೇಳಿದ. ಸ್ವತಃ ಕೀಲಿಕೈ ತಂದವನೆ ಹೊರಗಿನ ಕಲ್ಲಿನ ಜಗುಲಿಯ ಮೇಲೆ ಕೂರಿಸಿ ಸುರೇಶನ ಪರಿಚಯಕ್ಕೆ ಮುಂದಾದ. "ನಿಮ್ಮದು ಯಾವ ಊರು? ಯಾವ ಮನೆ ದೇವರು? ಹೆಣ್ಣು ದೇವರಾವುದು?" ಮುಂತಾದ ಪ್ರಶ್ನೆಗಳೆಲ್ಲ ಬಂದ ಮೇಲೆ ಜಾತಿಯನ್ನು ಸಹ ಕೇಳಿದರು. ಪಕ್ಕದಲ್ಲೆ ಕುಳಿತಿದ್ದ ಸುಮಿತ್ರ ಸುರೇಶನ ಕೈ ಚಿವುಟಿ "ನಾವು ಕ್ರೈಸ್ತರು" ಎಂದಳು. ಅದಕ್ಕೆ ತಲೆಯಾಡಿಸಿ "ಓಹೋ ನೀವು ಯೇಸುವನ್ನು ನಂಬಿರುವವರು" ಎಂದು ಮೆಲ್ಲಗೆ ಹೇಳಿಕೊಂಡ ಮಾಲೀಕ ಮೇಲೆದ್ದು "ಮನೆ ನೋಡಿ ಬನ್ನಿ" ಎಂದು ಕರೆದುಕೊಂಡು ಹೋದ.

ಸುಮಿತ್ರಳ ಉಪಾಯ ಫಲಿಸಿದ್ದನ್ನು ನೋಡಿ ಸುರೇಶ ಕೂಡ ಸಂಭ್ರಮಿಸಿದ. ಆದರೆ ಮನೆಯೊಳಗೆ ಹೋಗಿ ನೋಡಿದಾಗ ಅವರಿಗೆ ನಿರಾಸೆ ಆಯಿತು. ಬಹಳ ದಿನಗಳಿಂದ ಈ ಮನೆಯಲ್ಲಿ ಯಾರೂ ವಾಸವಿಲ್ಲ ಎನ್ನುವ ಸಂಗತಿ ಎದ್ದು ಕಾಣುತಿತ್ತು. ಇಬ್ಬರಿಗೂ ಮನೆ ಇಷ್ಟವಾಗಲಿಲ್ಲ. ಮಾಲೀಕನಿಗೆ "ನಾವು ನಾಳೆ ಮತ್ತೆ ಬರುತ್ತೇವೆ" ಎಂದು ಹೇಳಿ ಹೊರಟರು. ಸಂಜೆತನಕ ಹೊಟ್ಟೆಗೆ ಊಟವಿಲ್ಲದೆ ಕೇವಲ ಎಳನೀರಲ್ಲೆ ಕಾಲಕಳೆದಿದ್ದ ಅವರುಗಳಿಗೆ ಜಾತಿ ಕೇಳದ ಕೆಲವು ಮನೆ ಸಿಕ್ಕಿದವಾದ ಅಂತಹವು ವಾಸ ಮಾಡಲು ಯೋಗ್ಯವಾಗಿರಲಿಲ್ಲ, ಕೆಲವು ಪಾಳು ಬಿದ್ದಿದ್ದವು. ಇಂತಹ ಮನೆಗಳನ್ನು ಬಾಡಿಗೆಗೆ ಕೊಡುತ್ತಿದ್ದುದೆ ದುಡ್ಡಿಗಾಗಿ. ಇನ್ನು ಕೆಲವು ಮನೆಗಳನ್ನು ದಲಿತರೆಂದ ಮೇಲೆ ಕೊಡಲು ಮುಂದಾದರೂ ಶರತ್ತುಗಳ ಸುರಿಮಳೆಯನ್ನೆ ಹರಿಸಿದರು. ಅವುಗಳಲ್ಲಿ 'ನೀರನ್ನು ಬೇರೆ ಕಡೆಯಿಂದ ತರಬೇಕು', 'ಉಪ್ಪು ಸೊಪ್ಪು ಎಂದುಕೊಂಡು ಮಾಲೀಕರ ಮನೆಗೆ ಹೋಗಬಾರದು', 'ಅಕ್ಕಪಕ್ಕದ ಮನೆಗೆ ಹೋಗಬಾರದು', 'ಯಾವುದೇ ಕಾರಣಕ್ಕೂ ನಿಮ್ಮ ನಿಜ ಜಾತಿಯನ್ನು ಹೇಳಬಾರದು'...

ಈ ರೀತಿ ಮನುಷ್ಯತ್ವಕ್ಕೆ ಬೆಲೆ ಇಲ್ಲದ ಊರಿನಲ್ಲಿ ಅಲೆದಾದ ಮೇಲೆ ಸಾಕುಸಾಕಾದ ದಂಪತಿಗಳು ಕೊನೆಗೆ ಬ್ರೋಕರನ್ನೆ ಭೇಟಿಯಾಗಿ ತಮ್ಮ ಕಷ್ಟವನ್ನು ಹೇಳಿಕೊಂಡಾದ ಮೇಲೆ "ಈ ಏರಿಯಾದಲ್ಲಿ ಇರುವವರೆಲ್ಲರೂ ಮೇಲ್ಜಾತಿಯವರು. ನಿಮ್ಮಂತವರು ವರ್ಷವಿಡೀ ಹುಡುಕಿದರೂ ಇಲ್ಲಿ ಸರಿಯಾದ ಮನೆ ನಿಮಗೆ ಸಿಗುವುದಿಲ್ಲ" ಎಂದು ಹೇಳಿ ಅವರಿಗಾಗಿ ಪಕ್ಕದಲ್ಲೆ ಇರುವ ಕಾಲೋನಿಯೊಂದರಲ್ಲಿ ಮನೆ ಕೊಡಿಸುತ್ತೇನೆ ಎಂದು ಭರವಸೆ ನೀಡಿದ. ಅದಾಗಲೆ ತಡವಾಗಿದ್ದ ಕಾರಣ ನಾಳೆ ಮನೆ ನೋಡಲು ಬರುವುದಾಗಿ ಹೇಳಿ ದಂಪತಿಗಳಿಬ್ಬರು ಅವನ ಫೋನ್ ನಂಬರ್ ತೆಗೆದುಕೊಂಡು ರಾತ್ರಿ ಬಸ್ಸನ್ನು ಹತ್ತಿದರು.

ಬಸ್ಸಿನಲ್ಲಿ ಆರಾಮಾಗಿ ಸುರೇಶ ನಿದ್ದೆ ಹೋದನಾದರೂ ಸುಮಿತ್ರಳಿಗೆ ಮಾತ್ರ ತಲೆ ತುಂಬ ಒಂದು ಪ್ರಶ್ನೆ ಕಾಡುತ್ತಿತ್ತು ಅದೇನೆಂದರೆ "ಬಾಡಿಗೆ ಕೇಳಲು ಹೋದ ಪ್ರತಿ ಮನೆಯಲ್ಲೂ ನಾಯಿಗಳನ್ನು ಸಾಕಿದ್ದರು. ಅದನ್ನು ಅವರ ಮಕ್ಕಳು ಮುದ್ದಾಡಿಯೆ ಮುದ್ದಾಡುತ್ತಾರೆ. ಮನೆಯೊಳಗೆ ಬಿಟ್ಟುಕೊಳ್ಳುತ್ತಾರೆ. ಪ್ರೀತಿಸುತ್ತಾರೆ. ಅದಕ್ಕೇನಾದರು ಆದರೆ ನೋವು ಪಡುತ್ತಾರೆ. ಅಳುತ್ತಾರೆ. ಆದರೆ ನಾವು ಅವರ ಹಾಗೆಯೆ ಮನುಷ್ಯರು. ಅವರಿಗೂ ನಮಗೂ ಅಂಗಾಂಗಗಳಲ್ಲಿ ಸ್ವಲ್ಪವೂ ವ್ಯತ್ಯಾಸವಿಲ್ಲ. ಆದರೆ ನಮಗೆ ಅವರ ಮನೆಗೂ ಪ್ರವೇಶವಿಲ್ಲ ಮನಸ್ಸಿಗೂ ಪ್ರವೇಶವಿಲ್ಲ. ಆ ನಾಯಿಗಿರುವ ಸ್ವತಂತ್ರ, ಬೆಲೆ ನಮಗೆ ಇಲ್ಲ. ಇದು ನ್ಯಾಯವಾ? ಇದು ಒಂದು ಧರ್ಮವಾ?" ಹೀಗೆ ಯೋಚಿಸುತ್ತಲೆ ಕೂತಿದ್ದಳು

● ವಿಕಾಸ್ ಆರ್. ಮೌರ್ಯ


ವಿಶೇಷ ಲೇಖನ

● ಇಸ್ಮತ್ ಫಜೀರ್

ವೈದ್ಯಕೀಯ ಕ್ಷೇತ್ರದ ವಾಣಿಜ್ಯೀಕರಣವೂ... ಆಮಿರ್ ಖಾನ್ ಹೇಳಿದ ಕಹಿ ಸತ್ಯವೂ...

"ಸತ್ಯಮೇವ ಜಯತೆ" ರಿಯಾಲಿಟಿ ಶೋದಲ್ಲಿ ಆಮಿರ್ ಖಾನ್ ವೈದ್ಯಕೀಯ ಲೋಕದ ಹುಳುಕುಗಳ ಕುರಿತಂತೆ ಬೆಳಕು ಚೆಲ್ಲಿದಾಗ ವೈದ್ಯ ಸಮೂಹ ಗರಂ ಆಗಿತ್ತು. ಅಷ್ಟಕ್ಕೂ ಆಮಿರ್ ಖಾನ್ ಹೇಳಿದ್ದರಲ್ಲಿ ತಪ್ಪೇನಿದೆ? ಇಂದು ವೈದ್ಯಕೀಯ ಕ್ಷೇತ್ರ ಯಾವ ಪರಿಯಲ್ಲಿ ವಾಣಿಜ್ಯೀಕರಣಗೊಂಡಿದೆ ಎಂಬುದನ್ನು ಓರ್ವ ಅರೆವೈದ್ಯಕೀಯ ವೃತ್ತಿಪರನಾಗಿ (Practicing Medical Laboratory Technologist) ನನ್ನ ಅರಿವಿನ ವ್ಯಾಪ್ತಿಯಲ್ಲಿರುವ ಕೆಲವು ವಿಚಾರಗಳನ್ನು ಇಲ್ಲಿ ಹಂಚಿಕೊಳ್ಳುತ್ತೇನೆ.

ಸುಮಾರು ನಾಲ್ಕು ವರ್ಷಗಳ ಹಿಂದೆ ನನ್ನ ಸಂಬಂಧಿಕರೊಬ್ಬರು ಮಲೇರಿಯಾ ರೋಗದ ಚಿಕಿತ್ಸೆಗಾಗಿ ಮಂಗಳೂರು ಹೊರವಲಯದ ಆಸ್ಪತ್ರೆಯೊಂದರಲ್ಲಿ ದಾಖಲಾಗಿದ್ದರು. ನಾಲ್ಕು ದಿನಗಳ ಬಳಿಕ ಚೇತರಿಸಿಕೊಂಡ ಅವರು ಇನ್ನೇನು ಡಿಸ್ಚಾರ್ಜ್ ಆಗಬೇಕು ಎನ್ನುವಷ್ಟರಲ್ಲಿ





ಅವರಿಗೆ ಹೊಟ್ಟೆನೋವು ಕಾಣಿಸಿಕೊಂಡಿತು. ಅವರನ್ನು ಪರೀಕ್ಷಿಸಿದ ತಜ್ಞ ವೈದ್ಯನೊಬ್ಬ ಅಲ್ಟ್ರಾಸೋನೋಗ್ರಫಿ (ಸ್ಕ್ಯಾನಿಂಗ್) ಮಾಡಿಸಿ ಎಂದು ಚೀಟಿ ಬರೆದು ಕೊಟ್ಟ. ಅದಾಗಿ ಕೆಲವು ನಿಮಿಷಗಳಲ್ಲಿ ನಾನು ಆ ರೋಗಿಯನ್ನು ಸಂದರ್ಶಿಸಲು ಆಸ್ಪತ್ರೆಗೆ ತೆರಳಿದ್ದೆ. ಅವರು ತನ್ನ ಅನಾರೋಗ್ಯದ ವಿಚಾರಗಳನ್ನು ನನಗೆ ತಿಳಿಸಿದ ಬಳಿಕ ವೈದ್ಯರು ಸ್ಕ್ಯಾನಿಂಗ್ ಮಾಡಿಸಲು ಬರೆದುಕೊಟ್ಟ ಚೀಟಿಯನ್ನು ತೋರಿಸಿದರು. ನಾನು ಅವರ ಹೊಟ್ಟೆ ನೋವಿನ ಲಕ್ಷಣಗಳನ್ನು ವಿಚಾರಿಸಿ ಬರೇ 50 ಪೈಸೆ ಬೆಲೆಯ ಒಂದು Rantac-150mg ಎಂಬ ಗ್ಯಾಸ್ಟ್ರಿಕ್‌ನ ಒಂದು ಮಾತ್ರೆ ತಂದು ಕೊಟ್ಟು, ಹೇಳಿದೆ; "ಮುಕ್ಕಾಲು ಗಂಟೆ ಕಾದು ನೋಡಿ ಕಡಿಮೆಯಾಗದಿದ್ರೆ ಆ ಬಳಿಕ ಸ್ಕ್ಯಾನಿಂಗ್ ಮಾಡಿಸಿ." ಅವರು ಮಾತ್ರೆ ಸೇವಿಸಿ ಅರ್ಧಗಂಟೆಯಲ್ಲಿ ಹೊಟ್ಟೆ ನೋವು ಮಾಯವಾಗಿಬಿಟ್ಟಿತು. ಇದು ಒಂದು ಉದಾಹರಣೆಯಷ್ಟೆ. ಕೇವಲ 50 ಪೈಸೆ ಬೆಲೆಯ ಒಂದು ಗ್ಯಾಸ್ಟ್ರಿಕ್‌ನ ಮಾತ್ರೆಯಲ್ಲಿ ಮುಗಿಸಬಹುದಾಗಿದ್ದ ಒಂದು ಕ್ಷುಲ್ಲಕ ಸಮಸ್ಯೆಗೆ 400 ರೂಪಾಯಿಯ ಸ್ಕ್ಯಾನಿಂಗ್ ಮಾಡಿಸಿ ಎಂದರೆ ಈ ವೈದ್ಯನ ಹಿಕಮತ್ತೇನಿರಬಹುದು?

ವೈದ್ಯಕೀಯದಲ್ಲಿ ಸ್ನಾತಕೋತ್ತರ ಎಂ.ಡಿ. ಪದವಿ ಗಳಿಸಿರುವ ವೈದ್ಯನಿಗೆ ಇಂತಹ ಬೇಸಿಕ್ ವಿಚಾರ ತಿಳಿದಿರಲಿಲ್ಲವೆಂದೇನಲ್ಲ, 400 ರೂಪಾಯಿಯ ಒಂದು ಸ್ಕ್ಯಾನಿಂಗ್ ಮಾಡಿಸಿದರೆ ಕನಿಷ್ಠ 20 ರೂ. ದಂತೆ ವೈದ್ಯನಿಗೆ ಪುಗಸಟ್ಟೆಯಾಗಿ 80 ರೂಪಾಯಿ ಕಮಿಷನ್ ದಕ್ಕುತ್ತದೆ...!

ಇದೇರೀತಿ ಯಾವುದೇ ವಿಶೇಷ ಪರೀಕ್ಷೆಯ ಅಗತ್ಯವಿಲ್ಲದ ಸಂದರ್ಭಗಳಲ್ಲಿ ರೋಗಿಗಳನ್ನು ಪರೀಕ್ಷಾ ಕೇಂದ್ರಗಳಿಗೆ ಕಳುಹಿಸಿ ಹತ್ತಾರು ಪರೀಕ್ಷೆ ಸ್ಕ್ಯಾನಿಂಗ್ ಅದೂ ಇದೂ ಎಂದು ಮಾಡಿಸಿ ಅನಗತ್ಯವಾಗಿ ರೋಗಿಗಳ ಜೇಬು ಬೋಳಿಸುವ ಚಾಳಿ ನಗರ ಪ್ರದೇಶಗಳ ಕೆಲವು ತಜ್ಞ ವೈದ್ಯರಿಗಿದೆ. ವೈದ್ಯಕೀಯ ಕ್ಷೇತ್ರವು ಯಾವ ಪರಿ ಕೆಟ್ಟು ಕೆರ ಹಿಡಿದುಹೋಗಿದೆಯೆಂದರೆ ಅಲ್ಲಿ ಮಾನವೀಯ ಮೌಲ್ಯಗಳಿಗೆ ಕಿಲುಬು ಕಾಸಿನ ಬೆಲೆಯೂ ಇಲ್ಲ, ಯಾವುದೇ ಪರೀಕ್ಷೆ ಮಾಡಿಸಿದರೂ ಕೆಲವು ವೈದ್ಯರಿಗೆ 20-40ರೂ. ವರೆಗೆ ಕಮಿಷನ್ ಸಿಗುತ್ತದೆ.

ಇನ್ನು ಕೆಲವು ವೈದ್ಯರಿಗೊಂದು ಕೆಟ್ಟ ಚಾಳಿಯಿದೆ. ಅವರು ಸೂಚಿಸಿದ ಪರೀಕ್ಷಾ ಕೇಂದ್ರಗಳಲ್ಲೇ ಪರೀಕ್ಷೆ ಮಾಡಿಸಬೇಕು. ಒಂದು ವೇಳೆ ರೋಗಿ ತನಗೆ ಆರ್ಥಿಕ ಮತ್ತು ಇತರ ಅನುಕೂಲತೆಗಳಿವೆ ಎಂಬ ಕಾರಣಕ್ಕೆ ಬೇರೆ ಯಾವುದಾದರೂ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಮಾಡಿಸಿ ವರದಿ ತಂದರೆ ಅದನ್ನು ಯಾವ ಮುಲಾಜೂ ಇಲ್ಲದೇ ತಿರಸ್ಕರಿಸಿ ಪುನಃ ತಾನು ಸೂಚಿಸಿದಲ್ಲಿಯೇ ಮಾಡಿಸಲು ನಿರ್ಬಂಧಿಸುವ ವೈದ್ಯರೂ ಇದ್ದಾರೆ. ವೈದ್ಯನಿಗೆ ಕಮಿಷನ್ ನೀಡದ ಪರೀಕ್ಷಾ ಕೇಂದ್ರಗಳ ವರದಿಗಳು ಯಾವತ್ತೂ ಇಂತಹ ವೈದ್ಯರಿಗೆ 'ಸರಿಯಿರುವುದಿಲ್ಲ' (ಕಮಿಷನ್ ಪಡೆಯದೆ ಅಗತ್ಯ ಪರೀಕ್ಷೆಗಳನ್ನು ಮಾಡಿಸುವ ವೈದ್ಯರ ಕ್ಷಮೆಯಿರಲಿ). "ಈ ವರದಿಯ ಆಧಾರದಲ್ಲಿ ಚಿಕಿತ್ಸೆ ನೀಡಿ ಏನಾದರೂ ಹೆಚ್ಚು ಕಡಿಮೆಯಾದರೆ ಪ್ರಾಣಕ್ಕೆ ಅಪಾಯವಾದರೆ ನಾನು ಜವಾಬ್ದಾರನಲ್ಲ" ಎಂದು ಕೆಲವು ವೈದ್ಯರು ರೋಗಿಗಳನ್ನು ಹೆದರಿಸುವುದೂ ಇದೆ.


ಇನ್ನು ಔಷಧಿಗಳನ್ನು ಬರೆಯುವಲ್ಲಿಯು ಲಾಭ ಬಡುಕುತನಕ್ಕೆ ಕೈ ಹಾಕುವ ವೈದ್ಯರೂ ಇದ್ದಾರೆ. ತನಗೆ ಯಾವ ಕಂಪನಿಯಿಂದ ಹೆಚ್ಚು ಉಡುಗೊರೆಗಳು, ಫ್ಯಾಮಿಲಿ ಫಾರಿನ್ ಟೂರ್ ಪ್ಯಾಕೇಜ್ ಗಿಫ್ಟ್‌ಗಳು ದೊರೆಯುತ್ತವೋ ಅದೇ ಕಂಪನಿಯ ಔಷಧಿಗಳನ್ನು ಬರೆದು ರೋಗಿಗಳಿಗೆ ತೊಂದರೆ ನೀಡುವ ವೈದ್ಯರುಗಳೂ ಇದ್ದಾರೆ. ಒಂದೇ ಔಷಧಿಯನ್ನು ಬೇರೆ ಬೇರೆ ಕಂಪನಿಗಳು ತಯಾರಿಸುತ್ತವೆ. ಬೇರೆ ಬೇರೆ ಕಂಪನಿಗಳ ದರಗಳಲ್ಲಿಯೂ ವ್ಯತ್ಯಾಸವಿರುತ್ತವೆ. ಒಂದು ಕಂಪನಿ ತಯಾರಿಸಿದ ಮಾತ್ರೆಗೆ ಐದು ರೂಪಾಯಿ ಬೆಲೆಯಿದ್ದರೆ, ಇನ್ನೊಂದು ಕಂಪನಿ ತಯಾರಿಸುವ ಅದೇ ಔಷಧಿ ಹೊಂದಿರುವ ಮಾತ್ರೆಗೆ ಹತ್ತು ರೂಪಾಯಿಯೂ ಇರುತ್ತದೆ. (ಸಾಮಾನ್ಯವಾಗಿ ಒಂದೇ ಔಷಧಿ ಹೊಂದಿರುವ ಬೇರೆ ಬೇರೆ ಕಂಪನಿಗಳು ತಯಾರಿಸುವ ಮಾತ್ರೆಗಳ ದರಗಳಲ್ಲಿನ ವ್ಯತ್ಯಾಸಗಳನ್ನು ಸೋಂಕು ನಿವಾರಕಗಳಲ್ಲಿ (Antibiotics) ಕಾಣಲು ಸಾಧ್ಯ) ಇವುಗಳಲ್ಲಿ ಯಾವ ಕಂಪನಿಯ ಮಾತ್ರೆ ಸೇವಿಸಿದರೂ ಫಲಿತಾಂಶ ಒಂದೇ ರೀತಿಯಿರುತ್ತದೆ. ಇಂತಹ ಸಂದರ್ಭಗಳಲ್ಲಿ ಕೆಲವು ಕಮರ್ಷಿಯಲ್ ದೃಷ್ಟಿಕೋನದ ವೈದ್ಯರು ತಮ್ಮ ವೈಯಕ್ತಿಕ ಲಾಭಕ್ಕಾಗಿ ರೋಗಿಗೆ ದುಬಾರಿ ಬೆಲೆಯ ಮಾತ್ರೆ ಬರೆದು ಕೊಟ್ಟು ತೊಂದರೆ ನೀಡುವುದೂ ಇದೆ.

ಕೆಲವು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳು, ಹೈಟೆಕ್ ಆಸ್ಪತ್ರೆಗಳು ವೈದ್ಯರಿಗೆ, ಅರೆವೈದ್ಯಕೀಯ ವೃತ್ತಿಪರರಿಗೆ ದೊಡ್ಡ ದೊಡ್ಡ ಕಮೀಷನ್ ಪ್ಯಾಕೇಜುಗಳನ್ನು ನೀಡುತ್ತವೆ. ಓರ್ವ ರೋಗಿಗೆ ಇಂತಹ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಿರಿ ಎಂದು ತನ್ನ ಸಂಸ್ಥೆಯ ಮೊಹರು ಹಾಕಿ ಒಂದು ಚೀಟಿ ಬರೆದು ಕೊಟ್ಟರೆ ರೋಗಿಯ ಚಿಕಿತ್ಸೆಗೆ ಆಸ್ಪತ್ರೆಗಳು ವಿಧಿಸುವ ಶುಲ್ಕದ 20ರೂ. ದುಡ್ಡನ್ನು ರೆಫರ್ ಮಾಡಿದವನಿಗೆ ತಲುಪಿಸುವ ವ್ಯವಸ್ಥೆಯೂ ಇದೆ. ಈ ಕಮೀಷನ್ ನೀಡುವ 20ರೂ. ಮೊತ್ತವನ್ನು ಬೇರೆ ಬೇರೆ ಸೇವೆಗಳ ಹೆಸರಲ್ಲಿ ಒಂದಕ್ಕೆರಡು ಸೇರಿಸಿಯೇ ಅಂತಹ ಹೈಟೆಕ್ ಆಸ್ಪತ್ರೆಗಳು ಬಿಲ್ ಮಾಡುತ್ತವೆ.

ಸ್ವಂತ ಆಸ್ಪತ್ರೆಗಳನ್ನು, ಡಯೋಗ್ನೋಸ್ಟಿಕ್ ಸೆಂಟರ್‌ಗಳನ್ನು ಹೊಂದಿರುವ ವೈದ್ಯರ ಬಳಿಗೆ ಅತೀ ಸಾಮಾನ್ಯ ಕಾಯಿಲೆಗೆ ಚಿಕಿತ್ಸೆಗೆ ಹೋದರೆ ರೋಗಿಯನ್ನು ಅನಗತ್ಯವಾಗಿ ಅಡ್ಮಿಟ್ ಮಾಡುವುದು, ಅನಗತ್ಯ ಪರೀಕ್ಷೆ ಮಾಡಿಸುವ ಮಹಾ(?) ವೈದ್ಯರೂ ಇದ್ದಾರೆ.

ಸಿಸೇರಿಯನ್ ಹೆರಿಗೆಯಂತೂ ಇತ್ತೀಚಿನ ದಿನಗಳಲ್ಲಿ ಒಂದು ಬೃಹತ್ ದಂಧೆಯೇ ಆಗಿಬಿಟ್ಟಿದೆ. ಗರ್ಭಿಣಿಗೆ ನೋವು ಇದೆಯೆಂದೋ, ನಿಶ್ಶಕ್ತಿಯಿದೆಯೆಂದೋ ಆಸ್ಪತ್ರೆಗಳಿಗೆ ಕೊಂಡೊಯ್ದರೆ ಎಂಟು ತಿಂಗಳಿಗೆ ಆಕೆಯ ಹೊಟ್ಟೆ ಸಿಗಿಯಲು ಅನೇಕ ವೈದ್ಯರು ಸಿದ್ಧರಾಗುತ್ತಾರೆ. ಗರ್ಭಿಣಿಯ ಸಂಬಂಧಿಕರನ್ನು ಮತ್ತು ಸ್ವತಃ ಗರ್ಭಿಣಿಯನ್ನೂ ಬ್ಲ್ಯಾಕ್‌ಮೇಲ್ ಮಾಡುತ್ತಾರೆ. "ಮಗುವಿನ ಹೊಕ್ಕುಳ ಬಳ್ಳಿ ಕುತ್ತಿಗೆಗೆ ಸುತ್ತು ಬಿದ್ದಿದೆ, ಮಗುವಿನ ಹೃದಯ ಬಡಿತ ಕಡಿಮೆ ಇದೆ, ಗರ್ಭಕೋಶದ ಬಾಯಿ ತೆರೆಯುವ ಸಾಧ್ಯತೆ ಕಡಿಮೆ ಇದೆ, ಮಗು ಹೊಟ್ಟೆಯೊಳಗೆ ಮಲವಿಸರ್ಜಿಸಿದೆ, ಗರ್ಭಿಣಿಗೆ ಅತಿಯಾಗಿ ದ್ರವ ವಿಸರ್ಜನೆ (Fluid discharge) ಆಗಿದೆ, ಸಿಸೇರಿಯನ್ ಮಾಡದಿದ್ದರೆ ಮಗು ಜೀವಂತ ಸಿಗದಿದ್ದರೆ ನಾನು ಜವಾಬ್ದಾರರಲ್ಲ" ಹೀಗೆ ಏನೇನೋ ಕಾರಣ ನೀಡಿ ಗರ್ಭಿಣಿಯನ್ನೂ ಆಕೆಯ ಸಂಬಂಧಿಕರನ್ನೂ ಹೆದರಿಸಿ ಅವರು ಸಿಸೇರಿಯನ್ ಹೆರಿಗೆಗೆ ಒಪ್ಪುವಂತೆ ಮಾಡುತ್ತಾರೆ. ಎಷ್ಟೇ ವಿದ್ಯಾವಂತನಾದರೂ, ಪ್ರಜ್ಞಾವಂತನಾದರೂ ಪ್ರಾಣಾಪಾಯವಿದೆ ಎಂದರೆ ಆತ ಹೆದರುತ್ತಾನೆ. ಸರಕಾರಿ ಆಸ್ಪತ್ರೆಗಳಲ್ಲಿ ಸಿಸೇರಿಯನ್ ಹೆರಿಗೆ ಪ್ರಕರಣಗಳ ಪ್ರಮಾಣವನ್ನು ಗಮನಿಸಿದರೆ ಸಿಸೇರಿಯನ್ ಹೆರಿಗೆಗಳ ಅಗತ್ಯ ಎಷ್ಟು ಎಂದು ಅರಿವಾಗುತ್ತದೆ. ಖಾಸಗಿ ನರ್ಸಿಂಗ್ ಹೋಮ್‌ಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ 70% ಹೆರಿಗೆಗಳು ಸಿಸೇರಿಯನ್ ಮೂಲಕವೇ ನಡೆಯುತ್ತವೆ. ಆದರೆ ಸರಕಾರಿ ಆಸ್ಪತ್ರೆಗಳಲ್ಲಿ ಸಿಸೇರಿಯನ್ ಹೆರಿಗೆಗಳ ಪ್ರಮಾಣ 5%. ಮಾತ್ರ. ಸಾಮಾನ್ಯ ಹೆರಿಗೆಗೆ ಮಧ್ಯಮ ಮಟ್ಟದ ಆಸ್ಪತ್ರೆಗಳಲ್ಲಿ 10ರಿಂದ 12 ಸಾವಿರ ರೂಪಾಯಿ ಖರ್ಚಾದರೆ ಸಿಸೇರಿಯನ್ ಹೆರಿಗೆಗೆ 35-40 ಸಾವಿರ ರೂಪಾಯಿವರೆಗೆ ತಗಲುತ್ತದೆ. ಸಿಸೇರಿಯನ್ ಎಂಬ ಹಗಲುದರೋಡೆಯ ಕಷ್ಟ ಅನುಭವಿಸಿದವರೆಲ್ಲರಿಗೂ ಇದು ಗೊತ್ತಿರುವ ಸತ್ಯ.

ಚಿಕ್ಕ ವೈದ್ಯರಿಗೆ ಕಮಿಷನ್ ನೀಡಿ ರೋಗಿಗಳನ್ನು ತಮ್ಮ ಬಳಿಗೆ ರೆಫರ್ ಮಾಡುವಂತಹ ತಜ್ಞ ವೈದ್ಯರುಗಳ ದಂಧೆಯೂ ಇದೆ. ಇಂತಹ ಮೋಸದ ಒಂದು ಉದಾಹರಣೆ: ಸುಮಾರು ಐದು ವರ್ಷಗಳ ಹಿಂದೆ ನನ್ನ ಹತ್ತಿರದ ಸಂಬಂಧಿ ಅಸ್ತಮಾ ರೋಗಿಯೊಬ್ಬರಿಗೆ ಅಸ್ತಮಾ ಉಲ್ಬಣಿಸಿತ್ತು, ಅವರ ಕುಟುಂಬ ಸ್ನೇಹಿತನೂ ಮತ್ತು ಕುಟುಂಬ ವೈದ್ಯನೂ ಆಗಿರುವ ಎಂ.ಬಿ.ಬಿ.ಎಸ್. ವೈದ್ಯನ ಬಳಿಗೆ ತುರ್ತು ಚಿಕಿತ್ಸೆಗೆ ಕೊಂಡೊಯ್ದರು. ಆ ವೈದ್ಯ ಮಹಾಶಯ ರೋಗಿಯನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸುವಂತೆ ಸೂಚಿಸಿ ಮಂಗಳೂರಿನ ಓರ್ವ (ಕು)ಖ್ಯಾತ ಶಸ್ತ್ರ ಚಿಕಿತ್ಸಕ ವೈದ್ಯನಿಗೆ ರೋಗಿಯನ್ನು ರೆಫರ್ ಮಾಡಿದ. ಸಾಮಾನ್ಯ ಜನರಿಗೆ ಯಾವ ವೈದ್ಯ ಯಾವ ವಿಷಯದಲ್ಲಿ ತಜ್ಞ ಎಂಬ ಬಗ್ಗೆ ದೊಡ್ಡ ಜ್ಞಾನವೇನೂ ಇರುವುದಿಲ್ಲ. ಅಸ್ತಮಾ ರೋಗಿಯೊಬ್ಬನನ್ನು ಓರ್ವ ಫಿಸಿಶಿಯನ್‌ಗೋ ಅಥವಾ ಶ್ವಾಸಕೋಶ ಸಂಬಂಧೀ ಕಾಯಿಲೆಗಳ ಕುರಿತ ನುರಿತ ವೈದ್ಯನಿಗೋ ರೆಫರ್ ಮಾಡುವುದು ಬಿಟ್ಟು ಓರ್ವ ಶಸ್ತ್ರ ಚಿಕಿತ್ಸಕ (General Surgen)ನಿಗೆ ರೆಫರ್ ಮಾಡುವುದರ ಹಿಂದಿನ ಉದ್ದೇಶ ಕಮಿಷನ್ ಗಳಿಸಲು ಎಂಬುದು ಸ್ಪಷ್ಟ. ಶಸ್ತ್ರಚಿಕಿತ್ಸಕ ಆ ರೋಗಿಯನ್ನು ಇನ್ನೋರ್ವ ಪಿಸಿಶಿಯನ್‌ಗೆ ರೆಫರ್ ಮಾಡಿದ. ರೋಗಿಗೆ ನಿಜ ವಾಗಿ ಚಿಕಿತ್ಸೆ ನೀಡುತ್ತಿರುವವನು ಫಿಸಿಶಿಯನ್ ಆದರೂ ರೋಗಿ ಆಸ್ಪತ್ರೆಯಲ್ಲಿರುವಷ್ಟು ಕಾಲ ಶಸ್ತ್ರ ಚಿಕಿತ್ಸಕನೂ ದಿನಕ್ಕೆರಡು ಬಾರಿ ರೌಂಡ್ಸ್‌ಗೆ ಬಂದು ಸುಮ್ಮಸುಮ್ಮನೆ ರೋಗಿಯ ರಕ್ತದೊತ್ತಡ ಮತ್ತು ದೇಹದ ಉಷ್ಣಾಂಶ ಪರೀಕ್ಷಿಸಿ ಹೋಗುತ್ತಿದ್ದ. ಒಂದು ವಿಸಿಟ್‌ಗೆ 200 ರೂಪಾಯಿಯಂತೆ ತನ್ನ ಶುಲ್ಕವನ್ನೂ ಪಡೆಯುತ್ತಿದ್ದ. ಮಾತ್ರವಲ್ಲದೇ ಇಂತಹ ವೈದ್ಯರುಗಳು ತಾವು ರೆಫರ್ ಮಾಡಿದ ವೈದ್ಯರುಗಳಿಂದಲೂ ಕಮಿಷನ್ ಗಿಟ್ಟಿಸುತ್ತಾರೆ. ಹಾಗೆಯೇ ತಮಗೆ ರೆಫರ್ ಮಾಡಿದ ಚಿಕ್ಕ ವೈದ್ಯರಿಗೂ ಕಮಿಷನ್ ನೀಡುತ್ತಾರೆ. ವೈದ್ಯಕೀಯ ಜಗತ್ತಿನಲ್ಲಿ ಇದೊಂದು ಹಳೆಯ ದಂಧೆ.



ಇನ್ನು ಅನೇಕ ಬಾರಿ ಬಡ ರೋಗಿಗಳು ದುಡ್ಡಿನ ಮುಖ ನೋಡದೇ ಅತ್ಯುತ್ತಮ ಚಿಕಿತ್ಸೆ ಬಯಸಿ ದುಬಾರಿ ದುಡ್ಡು ಪೀಕಿಸುವ ದೊಡ್ಡ ದೊಡ್ಡ ವೈದ್ಯರ ಬಳಿಗೆ ಹೋಗುತ್ತಾರೆ. ಇಂತಹ ಸಂದರ್ಭಗಳಲ್ಲಿ ಚಿಕಿತ್ಸೆಯ ಬಳಿಕ ಬಡರೋಗಿ "ಡಾಕ್ಟ್ರೇ ಎಷ್ಟಾಯಿತು?" ಎಂದು ಕೇಳಿದರೆ ಮುಖ ಸಿಂಡರಿಸುವ ವೈದ್ಯ ಮಹಾಶಯರೂ ಇದ್ದಾರೆ. ಯಾಕೆ ಗೊತ್ತೇ? ಇದೇ ವೈದ್ಯ ಮಹಾಶಯರುಗಳ ಬಳಿಗೆ ಬರುವ ಕೆಲವು ಶ್ರೀಮಂತ ರೋಗಿಗಳು ಫೀಸು ಎಷ್ಟೆಂದು ವಿಚಾರಿಸದೇ ಸಾವಿರ ರೂಪಾಯಿಯ ಗರಿಗರಿ ನೋಟನ್ನು ಎಸೆದು ಬಾಕಿ ಪಡೆಯದೇ ಗತ್ತಿನಿಂದ ಹೋಗುತ್ತಾರೆ. ಇಂತಿರುವಾಗ ಬಡರೋಗಿಗಳು ಮಡಿಕೆ ಮಡಿಕೆಯಾದ ಹತ್ತರ ನೋಟುಗಳನ್ನು ಎಣಿಸಿಕೊಡುವುದು ಕೆಲವು ವೈದ್ಯ ಮಹಾಶಯರ ಪಾಲಿಗೆ ಅವಮಾನವೆಂಬಂತೆನಿಸುತ್ತದೆ.

ಇನ್ನು ವೈದ್ಯಕೀಯ ಕಾಲೇಜುಗಳಲ್ಲಿನ ಹುಳುಕಿನ ಒಂದು ಪುಟ್ಟ ಸ್ಯಾಂಪಲ್ ಇಂತಿದೆ. ಕೋಟ್ಯಂತರ ರೂಪಾಯಿ ಡೊನೇಶನ್ ಪಡೆಯುವ ಕೆಲವು ವೈದ್ಯಕೀಯ ಕಾಲೇಜುಗಳು ಸೂಕ್ತ ಮತ್ತು ಅಗತ್ಯವಿರುವ ಸಿಬ್ಬಂದಿಗಳನ್ನು ನೇಮಿಸುವುದೂ ಇಲ್ಲ, ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದ 'ದೊಡ್ಡ ಮನುಷ್ಯರು' ತಪಾಸಣೆಗೆ ಬರುವಾಗ ಮುಂಚಿತವಾಗಿ ತಿಳಿಸಿಯೇ ಬರುತ್ತಾರೆ. ಆ ಸಂದರ್ಭಗಳಲ್ಲಿ ಕೆಲವು ಬಾಡಿಗೆ ಸಿಬ್ಬಂದಿಗಳನ್ನು ಎರಡು ದಿನಗಳ ಕಾಲಕ್ಕೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುತ್ತಾರೆ. ಹೀಗೆ ಎರಡು ದಿನಗಳ ಮಟ್ಟಿಗೆ ಬಾಡಿಗೆಗೆ ಪಡೆಯುವ ವೈದ್ಯಕೀಯ ಸಿಬ್ಬಂದಿಗಳ ಬಾಡಿಗೆ ಇಂತಿದೆ. ಓರ್ವ ಸ್ನಾತಕೋತ್ತರ ಪದವೀಧರ ವೈದ್ಯನಿಗೆ ಊಟ ತಿಂಡಿ ಪ್ರಯಾಣದ ಖರ್ಚು ಕಳೆದು ಒಂದು ದಿನದ ಬಾಡಿಗೆ 7,000/- ರೂಪಾಯಿಗಳು, ಎಂಬಿಬಿಎಸ್ ವೈದ್ಯನಿಗೆ ಖರ್ಚು ಕಳೆದು ದಿನದ ಬಾಡಿಗೆ 5,000/- ರೂಪಾಯಿಗಳು, ಅರೆವೈದ್ಯಕೀಯ ಸಿಬ್ಬಂದಿಗೆ ಖರ್ಚು ಕಳೆದು ದಿನದ ಬಾಡಿಗೆ 2,000/- ರೂಪಾಯಿಗಳು. (ವೈದ್ಯಕೀಯ ಕಾಲೇಜೊಂದರಲ್ಲಿ ಅರೆವೈದ್ಯಕೀಯ ಸಿಬ್ಬಂದಿಯಾಗಿ ಸೇವೆ ಸಲ್ಲಿಸುತ್ತಿದ್ದಾಗ ನಾನು ಕಂಡ ಅನುಭವವಿದು)


ಅನೇಕ ವೈದ್ಯಕೀಯ ಕಾಲೇಜುಗಳು ಕಡಿಮೆ ಸಂಬಳಕ್ಕೆ ಸಿಗುತ್ತಾರೆಂದು ಯಾವುದೇ ಮಾನ್ಯತೆ ಇಲ್ಲದ ನಕಲಿ ಅರೆ ವೈದ್ಯಕೀಯ ಸರ್ಟಿಫಿಕೇಟುಗಳನ್ನು ಹೊಂದಿರುವ ಸಿಬ್ಬಂದಿಗಳನ್ನೇ ಕೆಲಸಕ್ಕಿಟ್ಟುಕೊಳ್ಳುತ್ತವೆ. ಓರ್ವ ಅರ್ಹ ಅರೆ ವೈದ್ಯಕೀಯ ಸಿಬ್ಬಂದಿ ಹತ್ತುಸಾವಿರ ರೂಪಾಯಿಗಿಂತ ಕಡಿಮೆ ವೇತನಕ್ಕೆ ಕೆಲಸ ಮಾಡಲು ಸಿದ್ಧನಿರುವುದಿಲ್ಲ, ಆದರೆ ಮಾನ್ಯತೆಯಿರದ ಸಂಸ್ಥೆಗಳಲ್ಲಿ ಶಿಕ್ಷಣ ಪಡೆದು ನಕಲಿ ಪ್ರಮಾಣ ಪತ್ರಗಳೊಂದಿಗೆ ಬರುವಾತ 5,000/- ರೂಪಾಯಿಗೆ ದುಡಿಯಲು ಸಿದ್ಧನಿರುತ್ತಾನೆ.

ಮಂಗಳೂರಿನ ಹೆಚ್ಚಿನ ವೈದ್ಯಕೀಯ ಕಾಲೇಜುಗಳಲ್ಲಿ ಕೇರಳ ಮೂಲದ ಮಾನ್ಯತೆಯಿರದ ಸಂಸ್ಥೆಗಳಲ್ಲಿ ಅರೆ ವೈದ್ಯಕೀಯ ಶಿಕ್ಷಣ ಪಡೆದ ಅನೇಕ ಅರೆವೈದ್ಯಕೀಯ ಸಿಬ್ಬಂದಿಗಳು ಸೇವೆ ಸಲ್ಲಿಸುತ್ತಿದ್ದಾರೆ. ಇಂತಹವರಿಂದ ತರಬೇತಿ ಪಡೆದ ವೈದ್ಯರ ಅರಿವಿನ ಮಟ್ಟ ಎಂತಹದ್ದಿರಬಹುದೆಂದು ಊಹಿಸಿ.

40-50 ಲಕ್ಷ ರೂಪಾಯಿ ಖರ್ಚು ಮಾಡಿ ಎಂಬಿಬಿಎಸ್, 80 ಲಕ್ಷದಿಂದ ಒಂದು ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡಿ ಸ್ನಾತಕೋತ್ತರ ವೈದ್ಯ ಪದವಿ ಪಡೆದು ಬರುವ ವೈದ್ಯರುಗಳಿಗೆ ಈ ಪರಿಯಾಗಿ ರೋಗಿಗಳ ಜೇಬು ಕತ್ತರಿಸದೇ ಅವರು ಶಿಕ್ಷಣ ಪಡೆಯಲು ಹೂಡಿದ ಬಂಡವಾಳವನ್ನು ವಾಪಾಸು ಪಡೆಯಲು ಸಾಧ್ಯವಿಲ್ಲ. ಅವರುಗಳಿಗೆ ತಾವು ಹೂಡಿರುವ ಬಂಡವಾಳದ ಮುಂದೆ ಮಾನವೀಯ ಮೌಲ್ಯಗಳು ನಗಣ್ಯವೆನಿಸಬಹುದು. ಈ ದೇಶದ ವೈದ್ಯಕೀಯ ಕ್ಷೇತ್ರವನ್ನು ಸುಧಾರಣೆ ಮಾಡಬೇಕೆಂದರೆ ಮೊಟ್ಟ ಮೊದಲನೆಯದಾಗಿ ವೈದ್ಯಕೀಯ ಶಿಕ್ಷಣದ ವಾಣಿಜ್ಯೀಕರಣವನ್ನು ತಡೆಗಟ್ಟಲೇಬೇಕು.

ವೈದ್ಯಕೀಯ ಕ್ಷೇತ್ರದಲ್ಲಿ ಇಂತಹ ದರೋಡೆಕೋರರ ಮಧ್ಯೆಯೂ ಅತ್ಯಂತ ಮಾನವೀಯ ಸೇವೆ ನೀಡುವ, ರೋಗಿಗಳ ಆರ್ಥಿಕ ಪರಿಸ್ಥಿತಿಯನ್ನು ಅರಿತು ಶುಲ್ಕ ಪಡೆಯುವ, ಅಗತ್ಯದ ಪರೀಕ್ಷೆಗಳನ್ನು ಮಾತ್ರ ಮಾಡಿಸುವ ಸಜ್ಜನ ವೈದ್ಯರೂ ಇದ್ದಾರೆ. ಸಾಮಾನ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ವೃತ್ತಿ ನಿರ್ವಹಿಸುವ ವೈದ್ಯರುಗಳು ನಗರ ಪ್ರದೇಶಗಳ ವೈದ್ಯರಿಗಿಂತ ಹೆಚ್ಚು ಮಾನವೀಯ ಅಂತಃಕರಣವನ್ನು ಹೊಂದಿರುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ವೃತ್ತಿನಿರತ ವೈದ್ಯರಿಗೆ ರೋಗಿಯ ಕೌಟುಂಬಿಕ ಹಿನ್ನೆಲೆ, ಆರ್ಥಿಕ ಪರಿಸ್ಥಿತಿ ಇತ್ಯಾದಿಗಳ ಸ್ಪಷ್ಟ ಅರಿವೂ ಇರುತ್ತದೆ. ನಗರ ಪ್ರದೇಶಗಳಿಗೆ ಹೋಲಿಸಿದಾಗ ಹೆಚ್ಚು ಜನಾನುರಾಗಿ ವೈದ್ಯರಿರುವುದು ಗ್ರಾಮೀಣ ಪ್ರದೇಶಗಳಲ್ಲಿ ಎಂಬುದು ವಾಸ್ತವ. ವೈದ್ಯರುಗಳು ಗ್ರಾಮೀಣ ಸೇವೆ ಮಾಡಲೇಬೇಕೆಂಬ ನಿಯಮಾವಳಿಯನ್ನು ಕಡ್ಡಾಯಗೊಳಿಸಬೇಕು ಮತ್ತು ಬಲಿಷ್ಠಗೊಳಿಸಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಮಾಡುವುದರಿಂದ ವೈದ್ಯರುಗಳು ಜನರ ನಾಡಿಮಿಡಿತವನ್ನು ಅರಿಯಲು ಸಾಧ್ಯವಿದೆ.

ಆಮಿರ್ ಖಾನ್ ಹೇಳಿಕೆಯ ವಿರುದ್ಧ ಗರಂ ಆಗಿರುವ ವೈದ್ಯಕೀಯ ಸಮೂಹವು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಇದಾಗ್ಯೂ ಆಮಿರ್ ಖಾನ್‌ರ ಹೇಳಿಕೆಯನ್ನು ಕೆಲವು ಮಾನವೀಯತೆಯ ಪರವಿರುವ, ವೈದ್ಯಕೀಯ ಕ್ಷೇತ್ರದ ವಾಣಿಜ್ಯೀಕರಣದ ವಿರುದ್ಧವಿರುವ ವೈದ್ಯಕೀಯ ಸಂಘಟನೆಗಳು ಸಮರ್ಥಿಸಿ ಆಮಿರ್ ಖಾನ್‌ಗೆ ಬೆಂಬಲ ನೀಡಿರುವುದು ಸಂತಸದಾಯಕ.



ಆಲ್ದಾಳರಿಗೆ ಗುಲಬರ್ಗಾ ವಿ.ವಿ ಎಂದೋ ಗೌರವ ಡಾಕ್ಟರೇಟ್ ನೀಡಿ ಗೌರವಿಸಬೇಕಿತ್ತು. ಎಲ್ಲಕ್ಕೂ ಮಿಗಿಲಾಗಿ ಇವರ ನಾಟಕಗಳನ್ನು ಅಧ್ಯಯನಕ್ಕೊಳಪಡಿಸಬೇಕಿದೆ. ಜೊತೆಗೆ ಇವರು ರಚಿಸಿದ ಇನ್ನಿತರ ಬರಹಗಳನ್ನು ಸರಕಾರವೇ ಪ್ರಕಟಿಸಿ ಕಡಿಮೆ ಬೆಲೆಯಲ್ಲಿ ಓದುಗರಿಗೆ ತಲುಪಿಸಬೇಕಿದೆ. ಹಾಗೆ ನೋಡಿದರೆ ಪ್ರಶಸ್ತಿ, ಪುರಸ್ಕಾರಗಳಿಂದ ಯಾರೂ ದೊಡ್ಡವರಾಗುವುದಿಲ್ಲ... ಆಲ್ದಾಳ ಮಾಸ್ತರರು ತಮ್ಮ ಸಾಧನೆಯಿಂದಲೇ ಜನಮಾನಸದಲ್ಲಿ ನಿಂತಿದ್ದಾರೆ. ಅತ್ಯುತ್ತಮ ನಾಟಕಗಳನ್ನು ನೀಡುವ ಮೂಲಕ ವೃತ್ತಿರಂಗ ಭೂಮಿಯ ಉಳಿವಿಗೆ ಕಾರಣರಾಗಿದ್ದಾರೆ. ಅಷ್ಟೇಯಲ್ಲ, ವಿವಿಧ ಸಮುದಾಯಗಳು ಸೌಹಾರ್ದಯುತವಾಗಿ ಬದುಕುವಂತೆ ನಾಟಕಗಳ ಮೂಲಕ ಪ್ರೇರೇಪಿಸಿದ್ದಾರೆ.

ಎಲ್.ಬಿ.ಕೆ ಆಲ್ದಾಳ ಸೌಹಾರ್ದ ಬದುಕಿನ ಸಂಕೇತ

...ಲಾಲ್ ಮುಹ್ಮದ್ ಬಂದೇನವಾಜ್ ಖಲೀಫ್ ಆಲ್ದಾಳ
...ಬಾದ್ ಕರ್ನಾಟಕ ಭಾಗದಲ್ಲಿ ಎಲ್.ಬಿ.ಕೆ. ಆಲ್ದಾಳ
...ದೇ ಪ್ರಸಿದ್ಧಿ ಪಡೆದವರು. ಮುಸ್ಲಿಂ ಜನಸಂಖ್ಯೆಯ
...ಹುಳ್ಳ ಇರುವ ಕಲಬುರ್ಗಿ ಮತ್ತು ಹೈದ್ರಾಬಾದ್
...ಟಕದ ಜಿಲ್ಲೆಗಳಲ್ಲಿ ಕೋಮುಗಲಭೆಗಳು ಸಂಭವಿಸದೆ
...ವುದಕ್ಕೆ ಆಲ್ದಾಳ ಅವರ ಕೊಡುಗೆ ಅಪಾರ. ಹಾಗಂತ
... ಭಾಗದ ಜಿಲ್ಲೆಗಳಲ್ಲಿ ಕೋಮುಗಲಭೆಗೆ ಪ್ರಚೋದನೆ
...ಸುವ ಕೆಲಸ ನಡೆದೇ ಇಲ್ಲ ಎಂದಲ್ಲ... ಸಂಘಪರಿವಾರದ
...ರ್ಯಕರ್ತರು, ಪ್ರಮೋದ್ ಮುತಾಲಿಕನ ಪಡೆ ನಿರಂತರ
...ಯತ್ನಿಸುತ್ತಲೇ ಇರುತ್ತವೆ. ಶರಣರ, ಸಂತರ ಹಾಗೂ
...ಫಿಗಳ ತತ್ವಾದರ್ಶಗಳನ್ನು ನಾಟಕಗಳ ಮೂಲಕ ಜನಮನ
... ಬಿತ್ತುತ್ತಿರುವ ಆಲ್ದಾಳರಂತಹ ಅನೇಕರ ಪ್ರಯತ್ನದಿಂದಾಗಿ
...ಮುವಾದಿ' ಶಕ್ತಿಗಳ ಪ್ರಯತ್ನಕ್ಕೆ ಹಿನ್ನಡೆಯಾಗುತ್ತಿದೆ.
... ಕೋಮುಸೌಹಾರ್ದತೆಗಾಗಿ ನಿರಂತರ ದುಡಿಯುತ್ತಿರುವ,
...ತ ವೃತ್ತಿರಂಗಭೂಮಿಗೆ ಅಪಾರ ಕೊಡುಗೆ ನೀಡಿರುವ
...ಳ ಅವರಿಗೆ ಕರ್ನಾಟಕ ಸರಕಾರದ ಪ್ರತಿಷ್ಠಿತ 'ಗುಬ್ಬಿ
...ಣ್ಣ ಪ್ರಶಸ್ತಿ' ಎಂದೋ ಸಲ್ಲಬೇಕಿತ್ತು. ದುರಂತವೆಂದರೆ
...ಹ ಪ್ರಶಸ್ತಿಗಳು ಯಾರಿಗೆ ನೀಡಬೇಕು ಎನ್ನುವುದು
...ತಿವಾದಿ' ಶಕ್ತಿಗಳೇ ನಿರ್ಧರಿಸುವುದರಿಂದ ಆಲ್ದಾಳ
...ರಿಗೆ ಸಿಕ್ಕಿರಲಿಲ್ಲ. ಆದರೆ ಈ ಬಾರಿ ಗುಬ್ಬಿ ವೀರಣ್ಣ
...ಸ್ತಿಯ ಆಯ್ಕೆ ಸಮಿತಿಗೆ ಹಿರಿಯ ರಂಗತಜ್ಞ ಹಾಗೂ
...ತ್ಯತೀತವಾಗಿ ಆಲೋಚಿಸುವ ಡಾ.ಕೆ.ಮರುಳಸಿದ್ದಪ್ಪ ಅವರು
...ಕ್ಷರಾಗಿದ್ದರು. ಸಿ.ಬಸವಲಿಂಗಯ್ಯನವರಂತಹ ರಂಗಕರ್ಮಿ
... ಆಯ್ಕೆ ಸಮಿತಿಯ ಸದಸ್ಯರಾಗಿದ್ದರು. ಇದೆಲ್ಲದರ
...ಣಾಮವಾಗಿ ಎಪ್ಪತ್ನಾಲ್ಕರ ಇಳಿವಯಸ್ಸಿನ ಆಲ್ದಾಳ
...ಮು ಗುಬ್ಬಿ ವೀರಣ್ಣ ಪ್ರಶಸ್ತಿಗೆ ಭಾಜನರಾಗುವಂತಾಯಿತು.

...ಕಲಬುರ್ಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಮಳ್ಳಿಗ್ರಾಮ
...ವಾದ ಆಲ್ದಾಳ ಅವರು ಜನಿಸಿದ್ದು 05-11-1938ರಲ್ಲಿ,
...ರ ಹುಟ್ಟೂರು ಬಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ
...ಪಟ್ಟ ಪಿ.ಟಿಯಲ್ಲಿ, ಬಡ ಮುಸ್ಲಿಂ ಕುಟುಂಬಕ್ಕೆ ಸೇರಿದ
...ರು ಬಾಲ್ಯದಲ್ಲೇ ಅಪ್ಪನನ್ನು ಕಳೆದುಕೊಂಡರು. ಅಪ್ಪ
...ದೇನವಾಜ ತೀರಿಕೊಳ್ಳುತ್ತಲೇ ಇವರ ತಾಯಿ ಹುಸೇನಬಿ
... ವಾಸ್ತವ್ಯವನ್ನು ತವರುಮನೆಯಾದ ಸುರಪುರ
...ಲೂಕಿನ ಆಲ್ದಾಳ ಗ್ರಾಮಕ್ಕೆ ಬದಲಾಯಿಸಿದರು. ತಾಯಿಯ
...ತಿಲು, ಸೋದರ ಮಾವಂದಿರ ಆಶ್ರಯದಲ್ಲೇ ಬೆಳೆದ
...ಲ್ದಾಳ ಅವರು ಬಾಲ್ಯದಲ್ಲೇ ರಂಗಾಸಕ್ತರಾದರು. ಇವರ
...ಯ ಸೋದರ ಮಾವ ಕೊಂಕಣಿ ಭಾಷೆಯ ಕೃತಿಯನ್ನು
...ಡಕ್ಕೆ ಅನುವಾದಿಸಿ 'ಪಂಡಿತರ' ವಲಯದಲ್ಲಿ ಮನ್ನಣೆ
...ದ್ದರು. ನಡುವಿನ ಮಾವ ಕನ್ನಡದ ಮೇರು ಪರ್ವತವೇ
...ದ್ದರಂತೆ. ಇವರ ಒಡನಾಟದಲ್ಲಿ ಸಾಹಿತ್ಯ, ಸಂಗೀತ
...ಜವಾಗಿಯೇ ಒಲಿದವು.

...'ಕನಕಾಂಗಿ' ಬಯಲಾಟದಲ್ಲಿ 'ಕೃಷ್ಣ'ನ ಪಾತ್ರ
...ಹಿಸುವ ಮೂಲಕ ವೃತ್ತಿರಂಗಭೂಮಿಗೆ ಪಾದಾರ್ಪಣೆ
...ಡಿದ ಆಲ್ದಾಳ ಅವರು ಹಿಂದಿರುಗಿ ನೋಡಲೇ ಇಲ್ಲ.
...ದ್ಧ ನಾಟಕಕಾರರಾದ ಮೋಹನಚಂದ ಕಿರಣಗಿ,
...ಹನಾಚಾರ್ಯ ಜೋಶಿ ಹಾಗೂ ಸಗರ ಕೃಷ್ಣಾಚಾರ್ಯರ
...ತಿಯಲ್ಲಿ ತಾಲೀಮು ನಡೆಸಿದ ಆಲ್ದಾಳ ಅವರು
...ಭೂಮಿಯನ್ನು ನಂಬಿ ಬದುಕತೊಡಗಿದರು. ಆರಂಭದ
...ಗಳಲ್ಲಿ ಅಭಿನಯ ಇವರ ಮೊದಲ ಆದ್ಯತೆಯಾಗಿತ್ತು.
...ನಯದ ಜೊತೆ ಹಾರ್ಮೋನಿಯಂ ಬಾರಿಸುವುದನ್ನು
...ತುಕೊಂಡರು. 'ಚಿತ್ರಾಂಗದಾ', 'ಬಂಧುದ್ರೋಹ',
...ಶ್ಚಂದ್ರ' ನಾಟಕಗಳಿಗೆ ಹಾರ್ಮೋನಿಯಂ ಮಾಸ್ತರರಾಗಿ
... ಮಾಡಿ ಜನಪ್ರಿಯರಾದರು. ಹಾಗಾಗಿಯೇ ಅವರ
...ನೊಂದಿಗೆ 'ಮಾಸ್ತರ್' ಎಂಬ ಪದ ಸೇರಿಕೊಂಡಿತು.
...ರ ಕರ್ನಾಟಕದ ಹಳ್ಳಿಗಳಲ್ಲಿ 'ಆಲ್ದಾಳ ಮಾಸ್ತರ' ಎಂದು
... ಪಡೆದರು. 1962 ರಲ್ಲಿ 'ಪತಿಭಕ್ತಿ' ಹೆಸರಿನ ನಾಟಕ
ಬರೆಯುವ ಮೂಲಕ ನಾಟಕಕಾರರಾಗಿ ಬೆಳಕಿಗೆ ಬಂದರು. ಇಲ್ಲಿಯವರೆಗೆ ಸುಮಾರು ನೂರಕ್ಕೂ ಹೆಚ್ಚು ನಾಟಕಗಳನ್ನು ರಚಿಸಿರುವ ಆಲ್ದಾಳ ಮಾಸ್ತರರು ಅನೇಕ ಜೀವನ ಚರಿತ್ರೆ, ತತ್ವಗೀತೆ, ಅಷ್ಟೋತ್ತರ ಶತನಾಮಾವಳಿಗಳನ್ನು ಬರೆದು ಹೆಸರುವಾಸಿಯಾಗಿದ್ದಾರೆ.

ಅವಧೂತ ಪರಂಪರೆಯ ವಿಶ್ವರಾಧ್ಯರನ್ನು ಕುರಿತು ಬರೆದ ನಾಟಕ ಆಲ್ದಾಳ ಮಾಸ್ತರರಿಗೆ ಅಪಾರ ಜನಪ್ರಿಯತೆಯನ್ನು ತಂದು ಕೊಟ್ಟಿತು. ಆ ನಾಟಕ ಹಳ್ಳಿಹಳ್ಳಿಗಳಲ್ಲಿ ಮನೆ ಮಾತಾಯಿತು. ಜಾತಿ, ಸಂಪ್ರದಾಯಗಳ ಪೊಳ್ಳುತನವನ್ನು ಅನಾವರಣಗೊಳಿಸುವ ಈ ನಾಟಕ ಮನುವಾದದ ಒಟ್ಟು ತಿರುಳನ್ನೇ ಗೇಲಿಗೊಳಪಡಿಸುತ್ತದೆ. ಹೆಚ್ಚುಕಡಿಮೆ ಮಂಟೆಸ್ವಾಮಿ ಹಾಗೆ ನಡೆದುಕೊಳ್ಳುತ್ತಿದ್ದ ವಿಶ್ವರಾಧ್ಯರು ನಾಜೂಕಿನ ಮತೀಯ ವ್ಯವಸ್ಥೆಯ ವಿರುದ್ಧ ಕೆಂಡಕಾರಿದ ಮಹಾನ್ ಬಂಡುಕೋರ. ಸಂತ. 'ವಿಶ್ವರಾಧ್ಯ ಮಹಾತ್ಮೆ' ನಾಟಕದ ಪ್ರಯೋಗಗಳು ಹೆಚ್ಚುತ್ತಾ ಹೋದಂತೆ, ಆಲ್ದಾಳ ಮಾಸ್ತರರಿಗೆ ಸ್ಟಾರ್ ವ್ಯಾಲ್ಯೂ ಬರತೊಡಗಿತು. 'ಷಣ್ಮುಖ ಶಿವಯೋಗಿ', 'ಅಳ್ಳಳ್ಳಿ ಅಯ್ಯಪ್ಪಯ್ಯ ಮಹಾತ್ಮೆ' ನಾಟಕಗಳು ಸಾವಿರಾರು ಪ್ರಯೋಗ ಕಂಡವು. ಹಿಂದೂ- ಮುಸ್ಲಿಂ ಭಾವೈಕ್ಯತೆಗೆ ಹೆಸರಾದ ತಿಂಥಣಿ ಮೌನೇಶ್ವರ ಕುರಿತಾದ ನಾಟಕಕ್ಕೆ ಈ ಹೊತ್ತಿಗೂ ಅಪಾರ ಬೇಡಿಕೆ ಇದೆ...

ಆಲ್ದಾಳ ಮಾಸ್ತರರ ಜನಪ್ರಿಯತೆಗೆ ಮಾರುಹೋಗಿ ಶ್ರೀಗುರು ಹಾನಗಲ್ ಕುಮಾರೇಶ್ವರ ನಾಟ್ಯ ಸಂಘದ ಮಾಲಿಕರಾದ ಎಲ್.ಬಿ. ಶೇಖ ಮಾಸ್ತರರು 'ಕುಂಟ ಕೋಣ', 'ಮೂಕಜಾಣ' ಹಾಗೂ 'ಹಾರಕೂಡ ಚನ್ನಬಸವ ಶಿವಯೋಗಿ' ನಾಟಕಗಳನ್ನು ಬರೆಸಿದರು. ಈ ನಾಟಕಗಳು ಅಪಾರ ಜನಮನ್ನಣೆ ಗಳಿಸಿದವು. ಆಲ್ದಾಳ ಮಾಸ್ತರರು ನಾಟಕಗಳೆ ಬರೆಯಲಿ, ತತ್ವಪದಗಳೇ ರಚಿಸಲಿ, ಅವುಗಳ ತಿರುಳು ಮಾತ್ರ ಜಾತ್ಯತೀತ ಸಮಾಜ ನಿರ್ಮಾಣದ್ದಾಗಿರುತ್ತದೆ. ಹಾಗಂತ ಅವರು ಎಲ್ಲೂ ನೇರ ಬೋಧನೆಗೆ ಇಳಿಯುವುದಿಲ್ಲ, ಅವಧೂತ ಪರಂಪರೆಯ ಮಹಾತ್ಮರ ಜೀವನ ವೃತ್ತಾಂತಗಳನ್ನು ನಿರೂಪಿಸುತ್ತಲೇ ಪ್ರೇಕ್ಷಕರ ಮನದೊಳಗೆ ಬಹುದೊಡ್ಡ ತತ್ವವನ್ನು ಬಿತ್ತಿರುತ್ತಾರೆ.

ಆಲ್ದಾಳ ಮಾಸ್ತರರ ನಡೆ-ನುಡಿಯಲ್ಲಿ ಸರಳತೆ-ಸಜ್ಜನಿಕೆ ಇದೆ. ಹಿರಿಯರಲ್ಲಿ ಹಿರಿಯರಾಗಿ, ಕಿರಿಯರಲ್ಲಿ ಕಿರಿಯರಾಗಿ ಬೆರೆಯುವ ಇವರು ಯಾವತ್ತೂ ಜನಪ್ರಿಯತೆಗೆ ಮರುಳಾದವರಲ್ಲ, ಪ್ರಶಸ್ತಿ-ಪುರಸ್ಕಾರಗಳ ಬೆನ್ನು ಹತ್ತಿದವರಲ್ಲ... ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಈ ಹೊತ್ತಿಗೂ ವೃತ್ತಿರಂಗಭೂಮಿ ವೈಭವ ಮೆರೆಯಲು ಸಾಧ್ಯವಾದದ್ದು ಆಲ್ದಾಳ ಅವರ ಭಕ್ತಿ ಪ್ರಧಾನ ಹಾಗೂ ಸಾಮಾಜಿಕ ನಾಟಕಗಳಿಂದ. ಕೆಲವರು ಅಶ್ಲೀಲ ಮತ್ತು ದ್ವಂದ್ವಾರ್ಥಗಳ ಸಂಭಾಷಣೆಗಳಿಂದ ಪ್ರೇಕ್ಷಕರನ್ನು ಸೆಳೆಯಲು ಯತ್ನಿಸುತ್ತಾರೆ. ಆದರೆ ಆಲ್ದಾಳ ಮಾಸ್ತರರ ನಾಟಕಗಳು ಉದಾತ್ತ ಸಾಮಾಜಿಕ-ಧಾರ್ಮಿಕ ತತ್ವಾದರ್ಶಗಳ ಕಾರಣಕ್ಕೆ ಅಪಾರ ಜನಸಾಗರವನ್ನು ಆಕರ್ಷಿಸುತ್ತವೆ. ದುರಂತವೆಂದರೆ ಇಂತಹ ಮಹಾನ್ ನಾಟಕಕಾರರನ್ನು ಈ ಭಾಗದ ಅಕಾಡೆಮಿಕ್ ವಲಯದವರು ಕಡೆಗಣಿಸಿರುವುದು. ಸುಧಾಮೂರ್ತಿ, ಎಸ್.ಎಲ್.ಭೈರಪ್ಪನಂತಹ ಅನೇಕ ಮಂದಿ ಗುಲ್ಬರ್ಗಾ ವಿ.ವಿ.ಯಿಂದ ಗೌರವ ಡಾಕ್ಟರೇಟ್ ಗಿಟ್ಟಿಸಿಕೊಂಡಿದ್ದಾರೆ.

ಆಲ್ದಾಳರಿಗೆ ಗುಲಬರ್ಗಾ ವಿ.ವಿ ಎಂದೋ ಗೌರವ ಡಾಕ್ಟರೇಟ್ ನೀಡಿ ಗೌರವಿಸಬೇಕಿತ್ತು, ಎಲ್ಲಕ್ಕೂ ಮಿಗಿಲಾಗಿ ಇವರ ನಾಟಕಗಳನ್ನು ಅಧ್ಯಯನಕ್ಕೊಳಪಡಿಸಬೇಕಿದೆ. ಜೊತೆಗೆ ಇವರು ರಚಿಸಿದ ಇನ್ನಿತರ ಬರಹಗಳನ್ನು ಸರಕಾರವೇ ಪ್ರಕಟಿಸಿ ಕಡಿಮೆ ಬೆಲೆಯಲ್ಲಿ ಓದುಗರಿಗೆ ತಲುಪಿಸಬೇಕಿದೆ. ಹಾಗೆ ನೋಡಿದರೆ ಪ್ರಶಸ್ತಿ, ಪುರಸ್ಕಾರಗಳಿಂದ ಯಾರೂ ದೊಡ್ಡವರಾಗುವುದಿಲ್ಲ... ಆಲ್ದಾಳ ಮಾಸ್ತರರು ತಮ್ಮ ಸಾಧನೆಯಿಂದಲೇ ಜನಮಾನಸದಲ್ಲಿ ನಿಂತಿದ್ದಾರೆ. ಅತ್ಯುತ್ತಮ ನಾಟಕಗಳನ್ನು ನೀಡುವ ಮೂಲಕ ವೃತ್ತಿರಂಗ ಭೂಮಿಯ ಉಳಿವಿಗೆ ಕಾರಣರಾಗಿದ್ದಾರೆ. ಅಷ್ಟೇಯಲ್ಲ, ವಿವಿಧ ಸಮುದಾಯಗಳು ಸೌಹಾರ್ದಯುತವಾಗಿ ಬದುಕುವಂತೆ ನಾಟಕಗಳ ಮೂಲಕ ಪ್ರೇರೇಪಿಸಿದ್ದಾರೆ. ನಿರಂತರವಾಗಿ ಸಾಮಾಜಿಕ ಸ್ವಾಸ್ಥ್ಯ ಕಾಪಾಡುತ್ತಾ ಬಂದಿರುವ ಆಲ್ದಾಳ ಮಾಸ್ತರರಿಗೆ ಈ ಹೊತ್ತಿನಲ್ಲಿ 'ಗುಬ್ಬಿ ವೀರಣ್ಣ' ಪ್ರಶಸ್ತಿ ಸಂದಿರುವುದು ಅರ್ಥಪೂರ್ಣವಾಗಿದೆ.

ಗುಬ್ಬಿ ವೀರಣ್ಣನವರು ಹಳೆ ಮೈಸೂರು ಭಾಗದಲ್ಲಿ ವೃತ್ತಿ ರಂಗಭೂಮಿಯ ವೈಭವಕ್ಕೆ ಕಾರಣರಾದವರು. ಡಾ.ರಾಜಕುಮಾರ್ ಅವರಂತಹ ಮೇರು ನಟರಿಗೆ ಗರಡಿ ಮನೆಯಾದದ್ದು ಗುಬ್ಬಿ ವೀರಣ್ಣನವರ ಕಂಪನಿ. ಗುಬ್ಬಿ ವೀರಣ್ಣನವರು ನಾಟಕ ಕೇವಲ ಮನರಂಜನೆಗಾಗಿರುವ ಕಲಾಪ್ರಕಾರ ಎಂದು ಯಾವತ್ತೂ ಭಾವಿಸಿರಲಿಲ್ಲ, ನಾಟಕಗಳ ಮೂಲಕ ಸಮುದಾಯಗಳ ನಡುವೆ ಸಾಮರಸ್ಯ ಬದುಕಿನ ಎಳೆಗಳನ್ನು ಮತ್ತಷ್ಟು ಗಟ್ಟಿಗೊಳಿಸಿದವರು. ನಾಡಿನಲ್ಲಿ ಬಹುದೊಡ್ಡ ರಂಗಸಮಾಜ ನಿರ್ಮಾಣಕ್ಕೆ ಕಾರಣರಾದವರು. ಇಂತಹುದೇ ಉದ್ದೇಶಕ್ಕೆ ತಮ್ಮ ಇಡೀ ಜೀವನವನ್ನು ಸವೆಸಿದ ಆಲ್ದಾಳ ಮಾಸ್ತರರನ್ನು ಗುಬ್ಬಿ ವೀರಣ್ಣ ಪ್ರಶಸ್ತಿಗೆ ಆಯ್ಕೆ ಮಾಡಿದ್ದು ಸಕಾಲಿಕವಾಗಿದೆ.

ಬಡತನವನ್ನು ಬೆನ್ನಿಗೆ ಕಟ್ಟಿಕೊಂಡೇ ಸುದೀರ್ಘ ಐವತ್ತು ವರ್ಷಗಳ ಕಾಲ ರಂಗಸೇವೆ ಮಾಡಿರುವ ಆಲ್ದಾಳ ಅವರಿಗೆ ಎಲ್ಲ ವಲಯದ ಸಂವೇದನಾಶೀಲ ಮನಸುಗಳು ನೆರವಿಗೆ ಧಾವಿಸಬೇಕು. ಜಾತ್ಯತೀತ ತತ್ವಗಳಲ್ಲಿ ನಂಬಿಕೆ ಇಟ್ಟಿರುವ ಜನರು ಆಲ್ದಾಳ ಮಾಸ್ತರರಿಗೆ ಆರ್ಥಿಕ ಚೈತನ್ಯ ತುಂಬಿಕೊಡಲು ಯತ್ನಿಸಬೇಕು. ಆ ಮೂಲಕ ಆಲ್ದಾಳರು ಹೆಚ್ಚು ಕ್ರಿಯಾಶೀಲರಾಗಬಹುದೇನೋ. ಆಲ್ದಾಳ ಅವರ ರಂಗಸೇವೆ ಮುಂದಿನ ಪೀಳಿಗೆಗೆ ಆದರ್ಶಪ್ರಾಯವಾಗಿರುವಂತಹುದು. ಅವರ ರಂಗಸೇವೆಯ ಮಹತ್ವವನ್ನು ಮನವರಿಕೆ ಮಾಡಿಕೊಡುವ ಸಂಶೋಧನೆ, ದಾಖಲೀಕರಣ ಅಗತ್ಯವಾಗಿ ನಡೆಯಬೇಕಿದೆ. ಕಲಬುರ್ಗಿಯಲ್ಲಿ ಸ್ಥಾಪಿತವಾದ ಕೇಂದ್ರಿಯ ವಿಶ್ವವಿದ್ಯಾಲಯ ಆಲ್ದಾಳ ಮಾಸ್ತರರ ಸಾಧನೆ-ಸಿದ್ಧಿ ನಿರೂಪಿಸುವ ದಾಖಲೀಕರಣಕ್ಕೆ ಮುಂದಾಗಬೇಕಿದೆ.

ಆಲ್ದಾಳ ಅವರ ರಂಗಸೇವೆಯ ಹೆಜ್ಜೆಗುರುತುಗಳನ್ನು ಪರಿಶೀಲನೆಗೆ ಒಳಪಡಿಸುವುದರ ಜೊತೆಗೆ ಆ ಭಾಗದ ವೃತ್ತಿರಂಗಭೂಮಿಯ ಒಡಲೊಳಗೆ ಹುದುಗಿರುವ ಸೌಹಾರ್ದ ಪರಂಪರೆಯ ಹೆಣಿಗೆಯ ಎಳೆಗಳನ್ನು ನಮ್ಮ ಕಾಲಕ್ಕೆ ಮಾದರಿಯಾಗಿ ಬಿಡಿಸಿ ತೋರಿಸಬೇಕಿದೆ. ಶರಣರ, ಸಂತರ, ಸೂಫಿಗಳ ವಿಚಾರಧಾರೆಗಳನ್ನು ಆಲ್ದಾಳ ಅವರು ನಮ್ಮ ಕಾಲದವರೆಗೆ ತಲುಪಿಸಿದ್ದಾರೆ. ಇದು ಮುಂದಿನ ಪೀಳಿಗೆಗೂ ತಲುಪಬೇಕೆಂದರೆ ಅಧ್ಯಯನ, ದಾಖಲೀಕರಣ ನಡೆಯಬೇಕು. ಈ ಭಾಗದ ವಿ.ವಿ. ಗಳು ಹೆಚ್ಚು ಮುತುವರ್ಜಿ ವಹಿಸಬೇಕು.

● ಡಾ.ಸುಜಾತಾ ಜಂಗಮಶೆಟ್ಟಿ

2 ಸುಬ್ಬುಲಕ್ಷ್ಮಿಗೆ ಕಟಿಂಗ್‌ಗಳು

ಶ್ರೀಮಾನ್ ರಾಮಸುಬ್ಬನ್ ಬಹಳ ಆತ್ಮೀಯತೆಯಿಂದ ನನಗೆ ನಮಸ್ಕಾರ ಹೇಳಿದರು. ಅವರಿಗೆ ಕೆಲವು ದಾಸವಾಳದ ಕಟಿಂಗ್‌ಗಳು ಬೇಕಿತ್ತು. ಆ ದಿನ ನಾನು ಹುಲುಸಾಗಿ ಬೆಳೆದುಕೊಂಡಿದ್ದ ಗಿಡಗಳ ರೆಂಬೆಗಳನ್ನು ಕತ್ತರಿಸಿ ಹಾಕುತ್ತಿದ್ದೆ. ಅವರಿಗೆ ನಾನು ಒಂದಷ್ಟು ದಾಸವಾಳದ ಕಟಿಂಗ್‌ಗಳನ್ನು ತೆಗೆದುಕೊಳ್ಳಲು ಹೇಳಿದೆ. ಆದರೆ ಆತ ಹದಿನೈದು ರೆಂಬೆಕೊಂಬೆಗಳನ್ನು ಎತ್ತಿಕೊಂಡು ನನಗೆ ನಮಸ್ಕಾರ ಹೊಡೆದು ಜಾಗ ಖಾಲಿ ಮಾಡಿದ. ಈ ಮನುಷ್ಯ ಈ ಕೊಂಬೆಗಳನ್ನೆಲ್ಲ ಕತ್ತರಿಸಿ ಮರಳಿನಲ್ಲಿ ಊರಿ, ಅವು ಚಿಗುರಿ, ಹೂಬಿಟ್ಟು ಆ ಹೂವುಗಳನ್ನು ಈತ ದೇವರಿಗೆ ಅರ್ಪಿಸುವುದನ್ನು ಕಲ್ಪಿಸಿಕೊಳ್ಳುತ್ತಾ ನಿಂತೆ.

ರಾಮಸುಬ್ಬನ್ ನಮ್ಮ ಕಾಲೋನಿಯಲ್ಲಿ ಪ್ರತಿನಿತ್ಯ ಕಾಣಸಿಗುವ ಮನುಷ್ಯ. ದಿನವೂ ಅತ್ತಿತ್ತ ಓಡಾಡುತ್ತ ಆತ ಕೈತುಂಬಾ ಮನೆ ತೋಟದಲ್ಲಿ ಹಾಕುವ ಗಿಡಗಳನ್ನು ತರುವುದನ್ನು ನೋಡಿದೆ. ಮತ್ತು ಆತ ನಮ್ಮ ಬೀದಿಯ ಮುಂದಿನ ಬೀದಿಯಲ್ಲಿ ವಾಸವಿದ್ದ. ಆ ದಿನ ದಾಸವಾಳದ ಕಟಿಂಗ್‌ಗಳನ್ನು ಕೊಟ್ಟ ಮೇಲೆ ಆತ ನನ್ನ ಖಾಯಂ ಗಿರಾಕಿಯಾದ. ಒಮ್ಮೆ ಅವನು ನಮ್ಮನೆಯ ಬ್ಯಾಂಬೂ ಹುಲ್ಲು ಕೇಳಿದ್ದಕ್ಕೆ ಎರಡು ಪಾಟ್ ಬ್ಯಾಂಬೂ ಹುಲ್ಲು ಕೊಟ್ಟೆ. ಇನ್ನೊಮ್ಮೆ ಕ್ಯಾನ್‌ಗಿಡಗಳೂ ಮತ್ತೊಮ್ಮೆ ಮರಗಳ ಕೊಂಬೆಗಳನ್ನು ಕತ್ತರಿಸಿಕೊಂಡು ಹೋದ. ಹೀಗೆ ಬಂದಾಗ ಒಮ್ಮೆ ರಾಮಸುಬ್ಬನ್ "ನಿಮ್ಮಂತಹ ಉತ್ಸಾಹಿ ತೋಟಗಾರರಿರುವುದು ನಮ್ಮ ಕಾಲೋನಿಗೊಂದು ಶೋಭೆ" ಎಂದು ನನ್ನನ್ನು ಹೊಗಳಿದ. ಅದಕ್ಕೆ "ನಮ್ಮ ಕಾಲೋನಿಯ ಕೆಲವರಾದರೂ ತೋಟ ಮಾಡುವ ಹವ್ಯಾಸ ಬೆಳೆಸಿಕೊಂಡರೆ ಚೆನ್ನ" ಎಂದು ನನ್ನ ಆಸೆಯನ್ನು ವ್ಯಕ್ತಪಡಿಸಿದೆ.


ನನ್ನ ತೋಟಕ್ಕೆ ಮಾಮೂಲಾಗಿ ಬರುತ್ತಿದ್ದ ರಾಮಸುಬ್ಬನ್ ಅವರ ಮನೆ ತೋಟವನ್ನು ನೋಡಲು ಎಂದೂ ನನ್ನನ್ನು ಆಹ್ವಾನಿಸಲೇ ಇಲ್ಲ. ಒಂದು ದಿನ ಬೆಳಗಿನ ಗಾಳಿ ಸಂಚಾರಕ್ಕೆ ಹೊರಟಾಗ ರಾಮಸುಬ್ಬನ್ ನೆನಪಾದ. ಅವನ ಮನೆಯನ್ನು ನಮ್ಮ ಕಾಲೋನಿಯಲ್ಲಿ ಕಂಡುಹಿಡಿಯುವುದೇನೂ ಕಷ್ಟವಾಗಲಿಲ್ಲ. ಮನೆ ಗೇಟಿನ ಮೇಲೆ ಕಪ್ಪು ಬಣ್ಣದಲ್ಲಿ 'ರಾಮಸುಬ್ಬನ್' ಎಂದು ಢಾಳಾಗಿ ಬರೆದಿತ್ತು.

ಅದೊಂದು ಸಾದಾ ಮನೆ. ಸಾದಾ ಎನ್ನುವುದೂ ಆ ಮನೆಗೆ ಹೆಚ್ಚಾಗಿತ್ತು. ಮನೆ ಮುಂದಿನ ಜಾಗದಲ್ಲಿ ಒಂದು ರೋಗಗ್ರಸ್ಥ ನುಗ್ಗೆಮರ, ಒಂದೆರಡು ಒಡಕಲು ಪಾಟುಗಳು ಬಿದ್ದಿದ್ದವು. ರಾಮಸುಬ್ಬನ್ ಇಷ್ಟು ದಿನ ಸಂಗ್ರಹಿಸಿದ ಗಿಡಗಳೆಲ್ಲಾ ಏನಾದವೊ?

ಮನೆಬಾಗಿಲಿನಿಂದ ಹೊರಕ್ಕೆ ಇಣುಕಿದ ಹೆಂಗಸನ್ನು ನಾನು ಇದು ರಾಮಸುಬ್ಬನ್‌ರ ಮನೆಯೇ ಎಂದು ವಿಚಾರಿಸಿದೆ. ಆಕೆ 'ಹೌದು' ಎಂದು ತಲೆಯಾಡಿಸಿದಳು.

ನನ್ನ ಪರಿಚಯವನ್ನು ಹೇಳಿಕೊಂಡು ರಾಮಸುಬ್ಬನ್‌ರ ತೋಟವನ್ನು ನೋಡಲು ಬಂದಿದ್ದೇನೆಂದು ಆಕೆಗೆ ಹೇಳಿದೆ.

"ಅವರು ಹೊರಗಡೆ ಕೆಲಸದ ಮೇಲೆ ಹೋಗಿದ್ದಾರೆ. ನೀವು ಅವರ ತೋಟದಲ್ಲೇ ನಿಂತಿದ್ದೀರಲ್ಲ" ಎಂದಳು ಆಕೆ. ಆಕೆ ಮಾತಾಡಿದ ರೀತಿಯನ್ನು ನೋಡಿದರೆ ಜೋಕ್ ಮಾಡುತ್ತಿಲ್ಲ ಅನ್ನಿಸಿತು.



"ಇದೇನಾ ತೋಟ!" ಎಂದು ನಾನು ಕಣ್‌ಕಣ್ ಬಿಟ್ಟೆ. ಮುರುಕಲು ಪಾಟುಗಳೂ ಒಣಕಲು ನುಗ್ಗೆಮರವೂ ನನ್ನನ್ನು ಅಣಕಿಸಿದವು.

"ರಾಮಸುಬ್ಬನ್ ಆಗಾಗ್ಗೆ ಬಂದು ಅಷ್ಟೊಂದು ತರದ ಗಿಡಗಳನ್ನು ಈಸಿಕೊಂಡು ಬಂದರಲ್ಲಾ ಅವೆಲ್ಲಾ ಏನಾಯ್ತು?" ಎಂದು ನಾನು ಕೇಳಿದೆ.

"ಅದಾ? ಆ ಗಿಡಗಳನ್ನು ಅವರು ಸುಬ್ಬುಲಕ್ಷ್ಮಿಗೆ ಕೊಟ್ಟರು" ಎಂದು ಆಕೆ ಹೇಳಿದಳು.

"ಸುಬ್ಬುಲಕ್ಷ್ಮಿ? ಯಾರವಳು?"

"ಸುಬ್ಬುಲಕ್ಷ್ಮಿನಾ? ಅಲ್ಲಿ ನಿಂತಿದ್ದಾಳೆ ನೋಡಿ. ನಮ್ಮ ಮನೆಯವರ ಕಣ್ಮಣಿ" ಎಂದು ಆಕೆ ನುಗ್ಗೆಮರಕ್ಕೆ ಕಟ್ಟಿಹಾಕಿದ್ದ ಹಸುವಿನತ್ತ ಬೊಟ್ಟು ಮಾಡಿ ತೋರಿಸಿದಳು. ಹಸು ನಿರಾತಂಕವಾಗಿ ಕುಕ್ಕೆಯಲ್ಲಿದ್ದ ಮಲ್ಲಿಗೆ ಬಳ್ಳಿಯ ಎಲೆಗಳನ್ನು ಬಾಯಾಡಿಸುತ್ತಿತ್ತು!

ಇಂಗ್ಲಿಷ್ ಮೂಲ: ಓ.ಟಿ.ರವೀಂದ್ರನ್

ಕನ್ನಡಕ್ಕೆ : ಪದ್ಮ ಶ್ರೀರಾಮ್

ಅಪರಾಧಿ 2



ಬೀದಿಯಲಿ ಬಿದ್ದ
ರಕ್ತದ ಕಲೆಗಳನ್ನು
ಒರೆಸಲು ಬಂದೆ
ನನ್ನ ಕೈಗಳಿಗೆ ಬೇಡಿ ಬಿದ್ದವು.

ಜೈಲಿನ ಒಳಗಡೆಗೆ
ಹಲವಾರು ಕೈದಿಗಳು
ಬಿಟ್ಟು ಹೋದ ಅಂಗೈ ಗೆರೆಯ
ಗುರುತುಗಳನ್ನು
ಮುಟ್ಟಿ ಮುಟ್ಟಿ ನೋಡಿದೆ
ಇಡಿ ಬಂದಿಖಾನೆಯೇ
ನನ್ನಂತವರ ಅಂಗೈ ಗುರುತುಗಳಿಂದ
ತುಂಬಿಹೋಗಿದೆ.

ನನಗೆ ಯಾರಾದರೂ
ಜಾಮೀನು ನೀಡುತ್ತಾರೆಂದು
ಕಂಬಿಗಳ ಹಿಂದೆ ನಿಂತು ಕಾದೆ
ಯಾರೂ ಬರಲಿಲ್ಲ!
ಜಾಮೀನು ನೀಡುವವರು
ಬಜಿಯಾಗಿದ್ದಾರೆ!
ನಾನು ವ್ಯಾಪ್ತಿ ಪ್ರದೇಶದ ಹೊರಗಿದ್ದೇನೆ.

ಜೂನ್ 20 ರಂದು ಜೈಲಿನಿಂದ
ಬಿಡುಗಡೆಯಾದಾಗ
ರಸ್ತೆಯಲಿ ಬಂದು ನಿಂತೆ
ನನ್ನ ಸಂಗಾತಿ ಬೀದಿಗಳು ಮಾತ್ರ
ನನ್ನ ಮಾತಾಡಿಸಿದವು.

ನೋಡು,
ನನ್ನ ಜೊತೆ ಯಾರೂ ಮಾತಾಡ-
ಬಾರದೆಂದು ಅಘೋಷಿತ ಕರ್ಫ್ಯೂ
ಹೇರಲಾಗಿದೆ.
ಜನ ಬಂದೂಕಿನ ಅಂಗಡಿಗಳ ಮುಂದೆ
ಕ್ಯೂ ನಿಂತಿದ್ದಾರೆ.

ನನ್ನ ಮಾತು ನನ್ನ ಆಲೋಚನೆ
ನನ್ನ ಅಕ್ಷರ ಎಲ್ಲವನ್ನೂ
ಹದ್ದಿನ ಕಣ್ಣಿಟ್ಟು ಕಾಯಲಾಗುತ್ತಿದೆ.
ರಸ್ತೆಯಲಿ ಅಡ್ಡಾಡುವ ಜನಕ್ಕೂ
ನನ್ನ ಬಗ್ಗೆ ಅನುಮಾನ ಬಂದಿದೆ.
ನನ್ನ ಬಳಿ ಗಡಿಯಾರ ಇಲ್ಲ
ಗಂಟೆ ಹೊಡೆಯುವ ಬಗ್ಗೆ
ನಾನು ಕಾಯುವದಿಲ್ಲ
ಸೂರ್ಯ ತನ್ನ ಪಥ ಬದಲಿಸುವುದಿಲ್ಲ
ನಾನು ಒಬ್ಬನೇ ಹೊರಟಿದ್ದೇನೆ.

• ಬಸವರಾಜ ಹೂಗಾರ

ಅಪರೂಪದ ಫೋಟೋ



ಬೆಂಗಳೂರಿನಲ್ಲಿರುವ ಎಚ್‌ಎಎಲ್ ಕಾರ್ಖಾನೆಗೆ ಸರ್ ಎಂ. ವಿಶ್ವೇಶ್ವರಯ್ಯನವರು (ಬಲದಿಂದ ಎರಡನೆಯವರು) ಭೇಟಿ ನೀಡಿದಾಗ......

ಈಶ್ವರಪ್ಪ ಇರದ್ನೆ ಹೇಳ್ಳೈವುನೆ, ಅದರಲ್ಲೇನು ತ್ರೆಪ್ಪು!

"ಎಡೂರಪ್ಪ ತಿರಗ ಎದ್ದು ಕುಂತವುನಂತಲ್ಲ ಉಗ್ರಿ" ...ದು ಸೀರ ನಕ್ಕ.

"ಎದ್ದು ಕುಂತಗಳಕ್ಕೆ ಅವುನು ಮನಿಗಿದ್ದಾವತ್ತೊ? ...ತೂರ ಸಿದ್ದಿಂಗಪ್ಪನಿಗೆ ಅದೇ ಗ್ನಾನ ಅಂತ ಕುಂತು ...ತ್ತು ಕುರ್ಚಿ ಗ್ನಾನ ಅವುನಿಗೆ" ಎಂದ ಉಗ್ರಿ.

"ಈಗ ಮಾತ್ರ ಸುಮ್ಮನಿರಕ್ಕುಲ್ಲ ಅವುನು."

"ಆ ಕಡೆ ಕೋರ್ಟ್ಗೆ ಹಾಯ್ಕಂಡು ಹಗಿತಾ ಅದೆ.

...ಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

...ಕಡೆ ಸದಾನಂದ ನಗಾಡಿ ಕಂಡು ವಟ್ಟೆ ಉರುಸ್ತ ...ವುನೆ. ಹೈಕಮಾಂಡ್ ಕಿವುಡ್ರಿಗೆ ಎಡೂರಪ್ಪನ ಮಾತೇ ...ತ್ತಯಿಲ್ಲ, ಪಾಪ ಅವ್ರುನ ಕತೆ ಬ್ಯಾಡ."

"ಪೊಲೀಸ್ನೋರು ಅವುನ ಮಕ್ಕಳು, ಅಳಿಯನ್ನ ...ಡೋಗಿದ್ದರಂತಲ್ಲಾ ಯಾಕ್ಲ ಉಗ್ರಿ?" ಎಂದಳು ಜುಮ್ಮಿ.

"ತಗಂಡೋಗಿಲ್ಲ ಕಣೆ, ಇಚಾರಣೆ ಮಾಡ್ತ ಅವ್ರುರೆ. ...ಡೂರಪ್ಪನ ಮಕ್ಕಳು ಏನು ಮಾಡಿದ್ರೂ ಬಾಯಿ ...ಡ್ತಯಿಲವಂತೆ."

"ಅದ್ಯಾಕ್ ಬಾಯಿ ಬುಡ್ತಯಿಲ್ಲ?"

"ತಿಂದಿರದು ಗಂಟ್ಲಲ್ಲೇ ಇರದು ಅಲ್ವೆ ಅದು ...ಲೀಸ್ನೋರಿಗೂ ಕಾಣ್ತ ಅದೆ. ಅದ್ಕೆ ಅವರು ...ಯಿಬುಡ್ತಯಿಲವಂತೆ."

"ಅದೇನ್ ತಿನ್ನಕ್ಕೋಗಿದ್ರು?" ಎಂದ ಕಾಳಮಾವ.

"ನೋಡ ಮಾವ, ಯಾವನೇ ಅಧಿಕಾರಕ್ಕೆ ಬರ್ಲಿ ...ವುನ ಸಮಂದಿಗಳು ಕಾಸು ಕೀಳಕ್ಕೆ ರೆಡಿಯಾಗಿಬುಡ್ತರೆ. ...ಗೆ ಇಲ್ಲೆ ಉದಾರಣೆ ಕೊಡದಾದ್ರೆ, ಇದೇ ಚಲುವರಾಯ ...ಮ ಬಾಮೈದ್ದಿರು ಸೈಕಲ್ಲಲಿ ಓಡಾಡಿಕಂಡಿದ್ರು. ಯಾವತ್ತು ...ವುರ ಮಾವ ಮಂತ್ರಿಯಾದ್ನೊ ಅವತ್ತೇ ಇವ್ರುರ್ಯಲ್ಲ ಕಾರು ...ಡು ಓಡಾಡಕ್ಕೆ ಸುರು ಮಾಡಿದ್ರು ಗೊತ್ತೆ?"

"ಅವುನ ಬಾಮೈದ್ದಿರ ಮಾತಿರ್ಲಿ ಕಣೊ, ಅವುನ ...ಡೊಯರು ಅಂಗೆ ಆಗ್ಯವುರೆ. ಅವುರ್ಯಲ್ಲಾರತ್ರ ದೆವ್ವನಂತ ...ವೆ" ಎಂದ ಸೀರ.

"ಸರಿಯಪ್ಪ ಎಡೂರಪ್ಪನ ಮಕ್ಕಳು ಇನ್ಯಾಂಗಿರಬೇಕು ...ಹಾಕು. ಅವುರು ಅಪ್ಪ ಅಧಿಕಾರಕ್ಕೆ ಬಂದೇಟಿಗೆ ಗಣಿ ...ನಿಯೋರತ್ರ ಕಾಸು ಕಿತಗಂಡರಂತೆ. ಅದು ಸೂಟಕೇಸಲ್ಲಿ ...ಗಂಡಿದ್ರೆ ಸಿಗಾಯ್ತಿರಲಿಲವಂತೆ. ಚೆಕ್ ಮುಖಾಂತ್ರ ...ಗಂಡು ಸಿಕ್ಕಿಬಿದ್ದವುರೆ."

"ಓಹೊಹೊ, ಬೆಕ್ಕು ಸಿಗಾಯ್ಕಂಡದೆ ಅನ್ನು" ಎಂದ ...ರ.

"ಚಿಕ್ಕನ್ವಳಿಕೆ ಇವುರು ಸಿಗಾಯ್ಕಂಡವುರೆ ಕಣೊ."

"ಅಂಗೆ ನೋಡಿದ್ರೆ ಯಲ್ಲಾ ಒಂಥರಾ ಸಿಗಾಯ್ಕಂಡು ...ತ ಅವುರೆ ಕಣೊ ಉಗ್ರಿ" ಎಂದುಕೊಂಡು ವಾಟಿಸ್ಸೆ ...ದ.

"ನೀನ್ಯಾತರೊಳಿಕೆ ಸಿಗಾಯ್ಕಂಡಿದ್ದಿಲಾ?" ಎಂದಳು ಜುಮ್ಮಿ.

"ನಾನು ಸದ್ದಿಕೆ ಸದಾನಂದ ಗೌಡನ ನೆಮ್ಮದಿ ಕೇಂದ್ರದಲ್ಲಿ ಸಿಗಾಯ್ಕಂಡಿದ್ದಿನಿ."

"ಅದ್ಯಾಕಲ್ಲಿಗೋಗಿದ್ದೆ?"

"ಹೋಗ್ದೆ ಬೇಕಲ್ಲಕ್ಕ, ಇನ್ಕಂ ಸರ್ಟಿಫಿಕೇಟ್ ಬೇಕಾದೋರು, ಕ್ಯಾಸ್ಟ ಸರ್ಟಿಫಿಕೇಟ್ ಬೇಕಾದೋರು, ಆರ್‌ಟಿಸಿ ಬೇಕಾದೋರು ಯಲ್ಲ ಹೋಗಬೇಕು. ಅಂಗೆ ನಾನು ಇನ್‌ಕಮ್ ಸರ್ಟಿಫಿಕೇಟ್ ತಗಳನಾ ಅಂತ ಹೋಗಿದ್ದೆ. ಅದ್ಯಾವನು ನೆಮ್ಮದಿ ಕೇಂದ್ರ ಅಂತ ಕರದ್ನೊ ಏನೊ ಥೂ ಅವುನಮ್ಮನ್."

"ಅದ್ಯಾಕ್ಲ ಅಂಗೆ ಬೈತಿ?"

"ಬೈಯ್ಯದಲ್ಲ ಕಣಕ್ಕ, ಉಗಿಬೇಕು. ಆ ನೆಮ್ಮದಿ ಕೇಂದ್ರದಲ್ಲಿ ಯರಡು ಹುಡುಗಿರು ಕುಂತವುರೆ ಕಂಪ್ಯೂಟರ್ ಮುಂದೆ. ಅವರ ಸುತ್ತ ನಲವತ್ತು ಜನ ಮುತ್ತಿಗಂಡವುರೆ. ಹತ್ತು ಗಂಟೆಗೆ ಕರಂಟು ಬಂದ್ರೆ, ಯರಡು ಗಂಟೆಗೆ ಹೊಂಟೋಯ್ತದೆ. ಈತರ ನಾನು ಯರಡು ದಿನದಿಂದ ತಿರುಗ್ತಾಯಿದ್ದಿನಿ. ಅಕಸ್ಮಾತ್ ನನಿಗೆ ಇನ್‌ಕಂ ಸರ್ಟಿಫಿಕೇಟ್ ಸಿಕ್ಕಿದ್ರೆ ಅದ ಅಫಿಡವಿಟ್ ಮಾಡುಸಬೇಕು. ಅದ್ಕ ಮೊದ್ಲ ಟೈಪ್ ಮಾಡುಸಬೇಕು. ಲಾಯರ್ ನಾರಾಯಣಪ್ಪನ್ನ ಹಿಡದು ಸಯಿನು ತಗೊಬೇಕು. ಅವುನ ಕೈಗೆ ಐವತ್ತು ರೂಪಾಯಿ ಕೊಡಬೇಕು. ಹೋಯ್ತಾ ಬತ್ತಾ ಆಟೋಚಾರ್ಜು, ಬಸ್ ಚಾರ್ಜು, ಮೀಲ್ಸು ಅಂತ ಕನಿಷ್ಠ ಇನ್ನೂರು ರೂಪಾಯಿ ಆಯ್ತದೆ. ಕೂಲಿ ಮಾಡೋರಾದ್ರೆ ಒಂದೆರಡು ದಿನದ ಕೂಲಿ ಹೋಯ್ತು, ಇಂತ ಯವಾರಕ್ಕೆ ನೆಮ್ಮದಿ ಕೇಂದ್ರ ಅಂತ ಹೆಸುರು ಮಡಿಗ್ಯವುರೆ. ಇದು ಸರಿಯೆ ನೀನೆ ಹೇಳು ದೊಡಪ್ಪ"

"ಅವ್ಯಲ್ಲ ನನಿಗೇನು ಗೊತ್ತಾದವುಲ?"

"ಸುಖ ಪುರುಸ ಬುಡಪ್ಪ ನೀನು. ಸದ್ದಿಕೆ ನೀನು ಮತ್ತು ದೇವೇಗೌಡ ಇಬ್ಬರೂ ಸುಖ ಪುರುಷರು. ಅದಕ್ಕೆ ನೋಡು ದ್ಯಾವೇಗೌಡ ಲೈಫ್ ಹಿಸ್ಟರಿ ಬರೀತ ಕುಂತಿದ್ದನಂತೆ."

"ಲೈಫ್ ಇಟ್ರಿ ಅಂದ್ರೇನ್ಲ?"

"ಜೀವನಚರಿತ್ರೆ ಅಂತ. ದೇವೇಗೌಡ್ರು ಲೈಫ್ ಹಿಸ್ಟರಿ ಏನಾರ ಬರದು ಪ್ರಕಟಿಸಿದ್ರೆ ಅದ ಓದಿದ ಮ್ಯಾಲೆ ತಿರಗ ನಾವೊಂದು ರಿಯಲ್ ಲೈಫ್ ಹಿಸ್ಟರಿ ಬರಿಬೇಕಾಯ್ತದೆ. ನನಿಗಿರೊ ಡವುಟ್ ಪ್ರಕಾರ ಬರದೇ ಬರಿಬೇಕಾಯ್ತದೆ."

"ಯಾಕ್ಲ?"

"ಯಾಕೆ ಅಂದ್ರೆ, ದ್ಯಾವೇಗೌಡ್ರು ಏನೇನು ಮರೆಮಾಚಿ ಬರದಿರತರೊ ಅದನ್ಯಲ್ಲ ನಾವು ಸರಿಯಾಗಿ ಬರಬೇಕಾಯ್ತದೆ ದೊಡಪ್ಪ, ಆಗ್ಲೆ ಬರವಣಿಗೆಗೆ ನ್ಯಾಯ ಸಿಗದು."

"ಬರಿತಿ ನೀನು. ಬರಿಯಕ್ಕೆ ಬಂದಿದ್ರೆ ಇನ್ನೂ ಆದ್ತಿದ್ದೆ."

"ಕೂಲಿ ಕೊಟ್ಟು ಬರುಸ್ತಿವಿ. ಈಗೇನು ಜನ ಯಾವ ಕೈಲಸಕ್ಕೂ ಸಿಗತರೆ. ಒಟ್ಟಿನಲ್ಲಿ ಅವುರಿಗೇನಾರ ಪಾಯ್ದೆಯಿರಬೇಕು ಅಷ್ಟೆಯ."

"ದ್ಯಾವೇಗೌಡ ಲೈಪಿಸ್ಟರಿ ಬರಿಯದ್ಯಾಕೊ. ಅವುನು ಮಾಡಿದ್ದು ಯಲ್ಲಾರಿಗೂ ಗೊತ್ತದೆ."

"ನೀನು ತಪ್ಪು ತಿಳಕಂಡಿದ್ದಿ ಕಣೊ ಉಗ್ರಿ. ದ್ಯಾವೇಗೌಡ್ರು ಪುಲ್‌ಟೈಂ ರಾಜಕಾರಣಿ. ಅದರಲ್ಲೂ ಅವುರು ನೈಟ್‌ಟೈಂ ರಾಜಕಾರಣ ಮಾಡಿರದೇ ಜಾಸ್ತಿ. ಅದೇನು ಮಾಡಿದ್ರು ಅಂತ ನೋಡನಿರೊ. ಹಿಸ್ಟರಿ ಈಚೆಗೆ ಬರ್ಲಿ."

"ನೋಡೊ, ಯಾವನೇ ಆಗ್ಲಿ ತನ್ನ ಪರವಾಗೇ ಬರಕತ್ತನೆ. ತನ್ನ ಪರವಾಗೇ ಮಾತಾಡ್ತನೆ ಗೊತ್ತ."

"ಆದ್ರೆ ಬಿಜೆಪಿಲಿ ಇನ್ನೊಬ್ಬರ ಪರ ಮಾತಾಡರು ಅವುರೆ ಕಣೊ. ಆ ರೇಣುಕಾಚಾರಿ ಇನ್ನು ಆ ತರದವು ಎಡೂರಪ್ಪನ ಪರ ಯಂಗೆ ಮತಾಡ್ತರೆ ನೋಡು."

"ಅದಷ್ಟೇ ಅಲ್ಲ ಕಣೊ, ಇಡೀ ಬಿಜೆಪಿಗಳೆ ಪಾರ್ಟಿ ಪರ ಮಾತಾಡ್ತವೆ. ಅದರಲ್ಯಲ್ಲ ಇತ್ತೀಚೆಗೆ ಈಶ್ವರಪ್ಪ ಮಾತ್ರ



ಇದ್ದಿದ್ದ ಇದ್ದಂಗೆ ಮಾತಾಡಿ ಸಿಗಾಯ್ಕಂಡ."

"ಅವುನೇನು ಮಾತಾಡಿ ಸಿಗಾಯ್ಕಂಡಾ?" ಎಂದಳು ಜುಮ್ಮಿ.

"ಅಯ್ಯೋ, ಅವುನ ಮಾತೆ ಒಂದು ಕತಿಯಾಯ್ತು ಕಣಕ್ಕ. ನಾವು ಬಿಜೆಪಿ ಸರ್ಕಾರ ಮಾಡಿದ್ದು ಯಂಗೇ ಅಂದ್ರೆ, ಹಾದಿಬೀದಿಲಿ ಹೋಗವುನ್ಯಲ್ಲ ಹಿಡಕಂಡು ಬಂದು, ಜಾತಿಯತೆ ಮಾಡಿ, ದುಡ್ಡು ಸುರುದು ಸರ್ಕಾರ ಮಾಡಿದ್ವೊ ಅಂದುಬುಟ್ಟ ಅತ್ತಗೆ."

"ಇರದ್ನೇ ಮಾತಾಡ್ತವುನಲ್ಲೊ, ಅವುನೇಳಿರದ್ಯಲ್ಲ ಸರಿಯಾಗ್ಯದೆ."

"ಅದೇನೂ ನಿಜ ಕಣೊ ಉಗ್ರಿ. ಈ ತರ ಮಾಡಿದ ಸರ್ಕಾರಕ್ಕೆ ಒಬ್ಬ ಮುಖ್ಯಮಂತ್ರಿ ಅಂತ ಇದ್ದ. ಅವುನ ಮಾನಮರಿಯಾದಿ ಏನಾಗಬೇಕೇಳು. ಅಂತ ಗತಿಗೆಟ್ಟ ಸರ್ಕಾರದ ಮುಖ್ಯಮಂತ್ರಿ ಎಡೂರಪ್ಪ ಅನ್ನಂಗಾಯ್ತಲ್ಲೊ."

"ನಿಜ ಅವುನ ಮಾತು ಅಲ್ಲಿಗೆ ಬತ್ತದೆ. ಈಶ್ವರಪ್ಪ ಯಾವ ಮುಲಾಜು ಇಲ್ದೆ ಮಾತಾಡ್ತವುನೆ. ಅಂದ್ರೆ ಅವ್ರುನ ಬದ್ದಿಗೆ ನೀರು ಬುಟಗಂಡವುನೆ."

"ದಪ್ಪುನೆಟ್ಟ. ಅವುನ ಹೇಳಿಕೆ ಪ್ರಕಾರ ಹಾದಿಬೀದಿವು ಅಂದ್ರೆ ಆ ಗೂಳಿ ಹಟ್ಟಿ ತರದವು. ಅವು ಯಾವ ಪಾರ್ಟಿಗೂ ಸೇರಿದವಲ್ಲ ಮತ್ತೆ ಯಾವ ಪಾರ್ಟಿಗಾದ್ರು ಸೇರ್ತವೆ. ಅಂಥಾ ಗತಿಗೆಟ್ಟ ನನ್ನ ಮಗನವು."

"ಯಮ್ಮೆಲ್ಲೆಗಳ ಮ್ಯಾಲೆ ಅಂಗ್ಯಲ್ಲ ಲಗುವಾಗಿ ಮಾತಾಡಬ್ಯಾಡ ಕಂಡ್ಯ" ಎಂದ ಕಾಳಮಾವ.

"ಸಾರಿ ದೊಡಪ್ಪ, ಆ ಗೂಳಿಹಟ್ಟಿ ಶೇಖರ ವಿಧಾನಸಭೆಲಿ ಅಂಗಿ ಬಿಚ್ಚಗಂಡು ಕುರ್ಚಿ ಮ್ಯಾಲೆ ನಿಂತಿದ್ದ, ಅದ್ಕೆ ಸಿಟ್ಟು ಬಂದು ಅಂಗಂದೆ."

"ಯಮ್ಮೆಲ್ಲೆಗಳು ಬ್ಯಲೆ ಕಳಕಂಡು ಭಾಳದಿನಾಗ್ಯದೆ ಬುಡೊ."

"ಊ ಕಣೊ ಉಗ್ರಿ. ಈಶ್ವರಪ್ಪನ ಎಗ್‌ಜಾಂಪಲ್ ಮುಗುಸ್ತಿನಿರು. ಇನ್ನ ಜಾತಿಯತೆ ಅನ್ನೊ ಮಾತಂದವುನೆ. ಇವತ್ತು ಎಡೂರಪ್ಪನ ಸುತ್ತ ಇರೊ ಜನ ನೋಡಿದ್ರೆ ಸಾಕು, ಅದರಲ್ಲೂ ಸೋಮಣ್ಣನ ಮಕನೋಡಿದ್ರೆ, ಅವುನ್ಯಾಕ್ ಎಡೂರಪ್ಪನ ಹತ್ಯಕೆ ಬಂದ ಅನ್ನದು ಗೊತ್ತಾಯ್ತದೆ. ದುಡ್ಡಿನ ವಿಷಯ ತಗಂಡ್ರೆ, ಪೈನಾನ್ಸಿಯರ್ರೆ ಜೈಲಲ್ಲವುನೆ. ಯಾರೂ ಅಂತ ಹೇಳಂಗಿಲ್ಲ."

"ಅವುನ ಫ್ರೆಂಡ್ ರಾಮುಲು ಪಾರ್ಟಿ ಕತೆಯೇನೂ ಅಂತ."

"ಅದೊಂದು ಭಂಡ ಪಾರ್ಟಿ ಕಣೊ ಉಗ್ರಿ. ಕರ್ನಾಟಕದ ಗಣಿ ಭಗದು ಮಾರಿ, ಅದು ಅಕ್ರಮವಾಗಿ ಹಗದು ಮಾರಿ, ಕೇಸಾಕಿಸಿಕೊಂಡು, ಮುಂದೆ ನಮಿಗೆ ಕರ್ನಾಟಕ ಆಳೊ ಹಕ್ಕೊ ಇದೆ ಅಂತ ಮಾತಾಡಿಕಂಡು, ಪಾದಯಾತ್ರೆ ಬಂದ ಅಂದ್ರೆ, ಕರ್ನಾಟಕ ಎಲ್ಲಿಗೆ ಬಂದು ನಿಂತದೆ ಲೆಕ್ಕಹಾಕು."

"ಅದಿರ್ಲಿ ಕಣೊ, ಅವುನತ್ರ ಕಾಸೀಸಗಂಡು ಕೆಲುವು ಪೇಪರ್‌ನೋರು, ಬುದ್ಧಿಜೀವಿಗಳ್ಯಲ್ಲ ಜ್ವತೆಲಿದ್ದರಂತಲ್ಲ ಹೇಳು."

"ಏ ಅವುರೊಂಥರ ಯಾಚಕರು ಕಣೊ. ಸಾಮಾನ್ಯವಾಗಿ ಯಾಚಕರಿಗೆ ಯಾವ ಮಾನ ಮರಿಯಾದಿನೂ ಇರದಿಲ್ಲ, ಹಿಂದೆ ರಾಜಮಾರಾಜರತ್ರ ಇದ್ರು. ಆನಂತರ ಪಾಳೇಗಾರತ್ರ ಇದ್ರು. ಅವುರಾದ ಮ್ಯಾಲೆ, ರೌಡಿಗಳು, ರಾಜಕಾರಣಿಗಳತ್ರ ಇದ್ರು. ಅಂಥೋರು ಯಾವ ಕಾಲಕೂ ಇರತರೆ. ಆದರೆ ನಮ್ಮ ಸದಾನಂದ ಗೌಡರತ್ರ ಅಂಥೋರು ಇರದು ಕಷ್ಟ."

"ಅದ್ಯಾಕಪ್ಪ?"


"ಅವುನೆ ಇನ್ನೊಬ್ಬರತ್ರ ಇರಂಗವುನೆ ಅದ್ಕೆ!"

...ೋಗಪ್ಪನವರಿಗೆ...

ಈಗ ಸಾಹಿತ್ಯ ವಿಮರ್ಶೆ ನಮ್ಮ ಪತ್ರಿಕೆಯಲ್ಲಿ ಮುಖ್ಯವಾಗುತ್ತಿದೆ. ಹದಿನೇಳನೇ ಪುಟದಲ್ಲಿ 'ಪುಸ್ತಕಾವಲೋಕನ' ...ತ್ತು 'ಬರೆವ ಬದುಕು' ಬರುತ್ತವೆ. ಸಾಹಿತ್ಯ ಕುರಿತ ಇನ್ನಾವುದಾದರೂ ಸ್ವಾರಸ್ಯಕರ ವಿಷಯವಿದ್ದರೆ ಹದಿನಾರನೇ ...ಟವನ್ನೂ ಬಳಸಿಕೊಳ್ಳುತ್ತೇವೆ.

ಸಾಹಿತ್ಯ ವಿಮರ್ಶೆಯಲ್ಲಿ ಒಂದು ಪುಸ್ತಕಕ್ಕೆ, ಒಬ್ಬ ಸಾಹಿತಿಗೆ, ಸಾಹಿತ್ಯ ಸಂದರ್ಭಕ್ಕೆ ...ಮ್ಮ ಸ್ಪಂದನ ಕೊಡುವುದು ನಮ್ಮ ಉದ್ದೇಶ. ಕೆಲವು ಸಲ ಅವಸರವಾಗಿ ...ಸ್ತಕಗಳ ನೋಡಿದರೂ ನಮ್ಮ ಉದ್ದೇಶಕ್ಕೆ ಚ್ಯುತಿ ಬರಬಾರದು. ನಾವು ...ರೆದದ್ದು ಎಷ್ಟು ಸೂಕ್ಷ್ಮವೂ ಖಚಿತವೂ ಆಗಿರಬೇಕೆಂದರೆ ಅದಕ್ಕೆ ವಸ್ತುನಿಷ್ಠೆ ...ನೇಹವಾಗಿ ಕೂಡಿಬರಬೇಕು. ಯಾರ ಮುಖವನ್ನೂ ನೋಡಿ ಮಣೆ ಹಾಕದ ...ತ್ತಮ ಸಾಹಿತ್ಯ ಸಮಾಜಕ್ಕೆ ಮುಖ್ಯ. ಅದು ಜನರ ಅಭಿರುಚಿಯನ್ನು ತಿದ್ದುವ ...ಲಕ ಅವರ ವರ್ತನೆಯನ್ನು, ಜೀವನ ಕ್ರಮವನ್ನು ತಿದ್ದುತ್ತದೆ ಎಂಬ ವಿಶ್ವಾಸದಿಂದ ...ವು ಬರೆಯುತ್ತೇವೆ. ಇದು ನೈತಿಕ ಸುಧಾರಣೆಯಲ್ಲ; ಅನುಭವದ ಮೂಲಕ ...ತ್ವವನ್ನು ಪಕ್ವಗೊಳಿಸುವ ಪ್ರಕ್ರಿಯೆ. ಆದ್ದರಿಂದಲೇ ನಾವು ಧೈರ್ಯವಾಗಿ, ಸ್ಪಷ್ಟವಾಗಿ, ...ಕ್ಷ್ಮವಾಗಿ ಬರೆಯಬೇಕು; ಜುಂಬತನದಿಂದ ಬರೆಯಕೂಡದು. ಓದುಗರನ್ನು ...ಂದಲಗೊಳಿಸುವುದಕ್ಕಾಗಿ ಅಥವಾ ಮೋಸಗೊಳಿಸುವುದಕ್ಕಾಗಿ ಬರೆಯಕೂಡದು.

ನಾವು ಈಚೆಗೆ ರೂಪಿಸುತ್ತಿರುವ ವಿಮರ್ಶಕರಲ್ಲಿ ಯೋಗಪ್ಪನವರ ಪುಸ್ತಕಾವಲೋಕನಗಳನ್ನು ...ವು ಗಮನಿಸಬಹುದು. ಸರಳವಾಗಿ ಬರೆಯುವ ಯೋಗಪ್ಪನವರು ವಿಚಾರವಂತರು. ಸಾಹಿತ್ಯದ ವಿದ್ಯಾರ್ಥಿಯಾಗಿ ...ವು ಬಗೆಯ ಕೃತಿಗಳನ್ನು ಬಲ್ಲವರು. ಇವರ ಬಹುಪಾಲು ವಿಮರ್ಶೆ ಸಮರ್ಪಕವಾಗಿರುತ್ತವೆ. ಆದರೆ



ಇನ್ನೂ ದೋಷಗಳಿವೆ: ವಿಮರ್ಶಕನಿಗೆ ಬೇಕಾದ ಧೈರ್ಯ ಹೆಚ್ಚಾಗಿ ವಿನಯ ಕಡಿಮೆಯಾದರೆ, ಆತುರ ಹೆಚ್ಚಾಗಿ ಹೃದಯವಂತಿಕೆ ಕಡಿಮೆಯಾದರೆ ಆಗಬಹುದಾದ ತಪ್ಪು ಇವರ ಕೆಲವು ಪುಸ್ತಕಾವಲೋಕನಗಳಲ್ಲಿ ಇರುತ್ತದೆ. ಆದ್ದರಿಂದ ಎಂ.ಎಸ್. ಶ್ರೀರಾಮ್ ಕತೆಗಳನ್ನು ಕುರಿತು ಬರೆದದ್ದನ್ನು ಓದಿ ಈ ಕಾಗದ ಬರೆದೆ. ಇಂಥ ಹಿತವಚನವನ್ನು ಗುಟ್ಟಾಗಿ ಹೇಳುವ ಅಗತ್ಯವಿಲ್ಲವಾದ್ದರಿಂದ ಅವರಿಗೆ ಬರೆದ ಕಾಗದವನ್ನು ಇಲ್ಲಿ ಕೊಡುತ್ತಿದ್ದೇನೆ:



ಪ್ರಿಯ ಯೋಗಪ್ಪ,

ಎಂ.ಎಸ್. ಶ್ರೀರಾಮ್ ಮೇಲೆ ಬರೆದ review ನಿಮ್ಮ fairness ಬಗ್ಗೆ ಅನುಮಾನ ಬರುವಂತೆ ಮಾಡುತ್ತದೆ. ನಮ್ಮಲ್ಲಿ ಬರುವ reviewಗಳು ಕಠೋರ ವಸ್ತುನಿಷ್ಠೆಯಿಂದ ಕೂಡಿದ್ದರೂ ಸತ್ಯಕ್ಕೆ ಹತ್ತಿರ ಇರಬೇಕು. ಕೃತಿ ಮೊದಲ ಓದಿಗೆ ಕೊಡುವ ಸಂತೋಷವನ್ನೆಲ್ಲ ಹೇಳಿಬಿಡಬೇಕು. ಆಮೇಲೆ ಆ ಸಂತೋಷದ ಇತಿಮಿತಿಗಳನ್ನು ವಿವರಿಸಬಹುದು. ಶ್ರೀರಾಮ್ ಪುಸ್ತಕ ನೀವು ಹೇಳಿರುವಷ್ಟು ಕೆಟ್ಟದಾಗಿಲ್ಲ-this is one of our best sensibilities, ಯಾವ ಜಾತಿ, ಹಿನ್ನೆಲೆ, ವರ್ಗದವನಾಗಲಿ, ಅವನಿಗೆ ಸಲ್ಲಬೇಕಾದ ತೀರ್ಪು ಸಂದಾಯವಾಗಿಬಿಡಬೇಕು. ಇಲ್ಲದಿದ್ದರೆ ನಾವು ಪ್ರಜಾವಾಣಿ, ಕನ್ನಡ ಪ್ರಭದ ಸಬಲ ಗುಮಾಸ್ತರಂತೆ ಆಗಿಬಿಡುತ್ತೇವೆ. ಶರ್ಮರ ಬಗ್ಗೆಯೂ ಸ್ವಲ್ಪಮಟ್ಟಿಗೆ ಹೀಗೇ ಅನ್ನಿಸಿದ್ದರಿಂದ ಈ ಕಾಗದ.

ನಿಜ, ನಾವು ಸದಾ ಶ್ರೇಷ್ಠ ಕೃತಿಗಳ ಅವಲೋಕನ ಮಾಡುವುದಿಲ್ಲ, ಆದರೆ ಶ್ರೇಷ್ಠತೆಯ ಅಂಶಗಳಿಗೆ ನಾವು ಜಡವಾಗಬಾರದು. ಇದೆಲ್ಲ ನಿಮ್ಮ ಮಾರ್ಗದರ್ಶನಕ್ಕಾಗಿ. ಎರಡೂ ಮೂರು ದಿನದ ಹಿಂದೆ ಬರೆಯಬೇಕಾದ್ದನ್ನು ಈಗ ಬರೆದಿದ್ದೇನೆ.

ಜೂನ್ 18, 1997

ಮತ್ತೇನು? ಈ ಕಡೆ ಬನ್ನಿ.

‘ಸ್ವಾಭಿಮಾನ’ ಅನ್ನೋದು ಎಲ್ಲದೆ?

‘ಥೂ, ಥೂ ಏನ್ ಜನಾರಿ ನಮ್ಮೋರು’ ಎಂದು ಬಹಳ ಬೇಸರ ವ್ಯಕ್ತಪಡಿಸಿದರು ಸ್ವಾಮಿಯೋರು. ಬೆಳಗಿನ ವಾಕಿಂಗ್‌ನಲ್ಲಿ ಮಾನಮರ್ಯಾದೆ ಇಲ್ಲದ ಜನ ಏನೋ ಮಾಡಬಾರದ್ದನ್ನ ಮಾಡವೆ. ಅದಕ್ಕೆ ಇವರು ಇಷ್ಟೊಂದು ಬೇಸರಪಟ್ಟುಕೊಂಡಿದ್ದಾರೆ ಅನ್ನಿಸಿತು. ‘ಏನಾಯಿತು ಸಾರ್’ ಅಂದೆ. ‘ಸ್ವಲ್ಪನೂ ಸ್ವಾಭಿಮಾನಾನೇ ಇಲ್ಲಲ್ಲ ಇವಕ್ಕೆ’ ಎನ್ನುತ್ತಾ ಜ ಹಾಗರದ ಬಗ್ಗೇನೆ ಅಸಹ್ಯಪಡುವಂತೆ ಮುಖ ಕ ಡಿದರು. ಸ್ವಾಮಿಯೋರು ಸುಮ್‌ಸುಮ್ಮನೆ ಹಾಗೆಲ್ಲ ಕ ಸಿದವರಲ್ಲ, ಏನೋ ಬಲವಾದ ಕಾರಣವೇ ಇರಬೇಕು. ಜನರ ಇತ್ತೀಚಿನ ನಡವಳಿಕೆ ಚಿತ್ರವನ್ನ ಕಣ್ಣಮುಂದೆ ತರಿಸಿಕೊಳ್ಳುತ್ತಿದ್ದೆ. ಅವರೇ ಮುಂದುವರೆಸಿದರು. ‘ಸ್ವಾಭಿಮಾನಿಗಳು ಅನ್ಬೇಕು ಕಣ್ರೀ ಆಂಧ್ರದವರನ್ನ, ಇದ್ದರೆ ಹಾಗೆ ಇರಬೇಕು’ ಅಂದರು. ನನಗೆ ಆ ಮಾತು ಸಮ್ಮತವಾಗಲಿಲ್ಲ, ಅವರಿಗಿಂತ ನಾವೇನು ಕಡಿಮೆ? ಯಾವುದರಲ್ಲಿ ಕಡಿಮೆ? ‘ಏನ್ಸಾರ್ ಹಿಂಗಂತೀರಿ? ನನಗೇನೋ ಈ ಮಾತು ಸರಿಯಲ್ಲ ಅನ್ನಿಸುತ್ತೆ’ ಅಂತ ನಿಷ್ಠುರವಾಗಿಯೇ ಹೇಳಿದೆ. ‘ಇನ್ನೇನ್ರೀ ಹೇಳಬೇಕು ಇವರ ಯೋಗ್ಯತೆಗೆ? ಮೊನ್ನೆ ಮೊನ್ನೆ ಚುನಾವಣೆ ನಡೀತಲ್ಲ ಆಂಧ್ರದಲ್ಲಿ...’ ಎಂದು ಮುಂದೇನೋ ಹೇಳಬೇಕು ಅಂತಿದ್ದರು. ರಾಜಕೀಯ “ಪ್ರಜ್ಞೆ” ನನಗೂ ಇದೆ ಎಂದು ತೋರಿಸಿಕೊಳ್ಳಲು ಸೊಗಸಾದ ಅವಕಾಶ ದೊರೆತಿತ್ತು. ‘ಅದೇ ಅವರು ಸ್ವಾಭಿಮಾನಿಗಳು ಆಗಿರುವ ಹೊತ್ತಿಗೇನೆ ವೈಎಸ್‌ಆರ್ ಕಾಂಗ್ರೆಸ್ ಜಯಭೇರಿ ಹೊಡೆಸಿದರು. ಅಲ್ವಾ ಸಾರ್’ ಅಂತ ಮೂಗು ತೂರಿಸಿದೆ. ‘ಏಯ್ ಅದು ಬಿಸಾಕ್ರಿ. ಅದಕ್ಕಲ್ಲಾರಿ’ ಎಂದು ಹೇಳಿ ನನ್ನ ರಾಜಕೀಯ ತಿಳಿವಳಿಕೆಯನ್ನೇ ಮೂಲೆಗೆ ವಗಾಯಿಸಿದರು. ‘ಇನ್ನು ಯಾವುದಕ್ಕೆ ಸಾರ್’ ಅನ್ನೋರೀತೀಲಿ ಅವರ ಮುಖ ದೃಷ್ಟಿಸಿದೆ. ‘ಒಂದು ಓಟಿಗೆ ಕಣ್ರಿ. ಎಷ್ಟೇಳಿ ಒಂದೇ ಓಟಿಗೆ ಹದಿನೈದು ಸಾವಿರ ರೂಪಾಯೀರಿ. ಹದಿನೈದು ಸಾವಿರ ಪೀಕಿಸಿದ್ರಂತೆ ಕಣ್ರಿ.. ನಮ್ಮೋವು ಅವೆ. ಅಮ್ಮಮ್ಮ ಅಂದ್ರೆ ಸಾವಿರ ಕೊಟ್ಟರೆ ಸಾಕು. ಅಷ್ಟಕ್ಕೆ ಚಿನ್ನದ ಬೆಟ್ಟವೇ ಸುರಿದಂಗಾಯ್ತು ಅಂತ ಓಟು ಕೊಡ್ತವೆ. ಇವ್‌ಕ್ಕೇನಾದರೂ ಸ್ವಾಭಿಮಾನ ಅನ್ನೋದು ಇದೆಯೇನ್ರಿ?’ ಎನ್ನುತ್ತಾ ಒಂದು ರೀತಿಯಾಗಿ ಮುಖ ಮಾಡಿಕೊಂಡರು.

ಅವರ ಮಾತಿನಿಂದ ನಮಗೂ ಅಂತಹ ಸ್ವಾಭಿಮಾನ ಇರಬೇಕಾಗಿತ್ತು ಅನ್ನಿಸಿತು. ಹಾಗೇ ಯೋಚಿಸಿದೆ. ಇಂತಹ ಸ್ವಾಭಿಮಾನಿಗಳಿಂದ ಆಯ್ಕೆಯಾದವನ ಸ್ವಾಭಿಮಾನ ಏನೂ ಸುಮ್ಮನಿರಲು ಬಿಡುವುದಿಲ್ಲ. ಮಾಡಬಾರದ ಕೆಲಸ ಮಾಡಿಸುತ್ತೆ, ಹಾಕಬಾರದ ಕಡೆ ಕೈ ಹಾಕುವಂತೆ ಮಾಡುತ್ತೆ, ಸ್ವಾಭಿಮಾನಿ ಮತದಾರರು ಇದು ತಿಳಿದ ನಂತರ ಏನು ಮಾಡುತ್ತಾರೆ? ಮುಂದಿನ ಚುನಾವಣೇಲಿ ರೇಟು ಹೆಚ್ಚು ಮಾಡುತ್ತಾರೆ! ‘ಅವನು ಸರಿಕನಯ್ಯಾ ದುಡ್ಮಾಡೋದ್ರಲ್ಲಿ ಅವನ ಬುಟ್ರಿಲ್ಲ, ಹಂಗಿರಬೇಕಪ್ಪಾ’ ಅಂತ ತಾರೀಫು ಮಾಡ್ತಾರೆ! ಅಂದಮೇಲೆ ‘ಸ್ವಾಭಿಮಾನ’ ಅನ್ನೋದು ದುಡ್ಡಿಲ್ಲದೆ ಅಂದ ಹಾಗಾಯಿತು ಅಲ್ಲವಾ...!

ಪಶ್ಚಾತ್ತಾಪಕ್ಕಾಗಿ ಪಾದಯಾತ್ರೆ

ಕೆರಳಿದರು ರೆಡ್ಡಿ ಬ್ರದರ್ಸ್.

ಮಂತ್ರಿಯಾಗಿದ್ದ ಸೋದರನಿಗೆ ಸೆರೆವಾಸ ಎಂದರೇನು?

ಸಿಡಿದೆದ್ದಿತು ಅವರ ‘ಸ್ವಾಭಿಮಾನ’!

ಏನು ಮಾಡಿತು ಅದು?

ಡೀಲ್ ಮಾಡಿಸಿತು. ಅದೂ ನ್ಯಾಯಾಧೀಶರೊಂದಿಗೆ!

ಎಂತಹ ಡೀಲ್ ಅದು?

ಪ್ಯಾಕೇಜ್ ಡೀಲ್ ಅಂತೆ! ಒಬ್ಬರಿಗೆ ಜಾಮೀನು



ನೀಡಿದರೆ ಇಷ್ಟು. ಎಲ್ಲರಿಗೂ ನೀಡಿದರೆ ಇಷ್ಟು. ಇದು ಪ್ಯಾಕೇಜು.

ಕೊಟ್ಟರೆ ಹಣ? ಸಿಕ್ಕಿತೆ ಜಾಮೀನು?

ಅವರು ಮೊದಲೇ ವ್ಯವಹಾರಸ್ಥರು. ಹಣ ಪಡೆದ ನ್ಯಾಯಾಧೀಶ ತಾರಮ್ಮಯ್ಯ ಆಡಿದರೆ? ಕೊಟ್ಟ ಹಣ ಹಿಂಪಡೆಯುವುದು ಹೇಗೆ? ಇದೊಂದು ರೀತಿ ಕದ್ದು ಬಸರಾದಂಗೆ. ಬಸರಿ ಎಂದು ಹೇಳುವ ಹಾಗೂ ಇಲ್ಲ, ಮಗೂನೂ ಹೆರುವಂತಿಲ್ಲ, ಹಂಗಾಗಿ ಬಿಡುತ್ತೆ. ಅದಕ್ಕೆ ಮುಂಗಡ ಇಷ್ಟು ಕೋಟಿ, ಕೆಲಸ ಆದಮೇಲೆ ಇಷ್ಟು ಕೋಟಿ ಅಂತ ಮಾತುಕತೆ ಆಗಿತ್ತಂತೆ. ಮಾತಿನಂತೆಯೇ ಸುಗಮವಾಗಿ ಎಲ್ಲವೂ ನಡೆಯುತ್ತಿತ್ತಂತೆ. ಆದರೆ ಡೀಲು ಎಲ್ಲೋ ಡೀಲಾ ಆಗಿರಬೇಕು. ಜಾಮೀನು ಸಿಕ್ಕಿದರೂ ಮುಕ್ತಿ ಸಿಗಲಿಲ್ಲ, ದೊರೆತ ಜಾಮೀನು ಹೋಯಿತು. ಜಾಮೀನು ನೀಡಿದ ನ್ಯಾಯಾಧೀಶರೇ ಜೈಲು ಪಾಲಾದರು!

ಈ ನಡುವೆ ಮುಂದೆ ಬಂದರು ‘ಸ್ವಾಭಿಮಾನಿ!’

ಯಾರವರು?

ಊರಿಗೆಲ್ಲ ಒಬ್ಬಳೇ ಪದ್ಮಾವತಿ! ಕರ್ನಾಟಕಕ್ಕೆಲ್ಲ ಒಬ್ಬನೇ ‘ಸ್ವಾಭಿಮಾನಿ’. ಅದೇ ಶ್ರೀರಾಮುಲು!

ಸಂಕಟ ಬಂದಾಗ ವೆಂಕಟರಮಣ. ಜೈಲು ಪಾರಾಗಲು ರಾಜಕೀಯ ಪಕ್ಷ!

ಉದಯಿಸಿತು ಹೊಸಪಕ್ಷ!

ಯಾವುದು ಅದು?

ಸ್ವಂತಿಕೆ ಇಲ್ಲದವರಿಗೆ ತೆಲುಗರು ನಡೆದ ದಾರಿಯೇ ಹೆದ್ದಾರಿ!

ಎನ್.ಟಿ.ರಾಮರಾವ್ ತೆಲುಗರ ಸ್ವಾಭಿಮಾನ ಎತ್ತಿಹಿಡಿದರು. ಅದರ ಪ್ರತೀಕವಾಗಿ ಉದಯಿಸಿತು ‘ತೆಲುಗು ದೇಶಂ’ ಪಕ್ಷ.

ರೈತಸಂಘವೂ ಸ್ಥಾಪಿಸಿತು ಒಂದು ಪಕ್ಷ- ‘ಕನ್ನಡ ದೇಶ’. ತೆಲುಗು ದೇಶಂ ಹೆಸರಿನ ಕನ್ನಡ ಅವತಾರ!

ಆಂಧ್ರಪ್ರದೇಶದಲ್ಲಿ ‘ತೆಲುಗು ದೇಶಂ’ ಪಕ್ಷ ಅಧಿಕಾರ ಹಿಡಿಯಿತು. ಕರ್ನಾಟಕದಲ್ಲಿ ಕನ್ನಡ ದೇಶ ನೆಲಕಚ್ಚಿತು.

ಅಲ್ಲಿ ಉದಯಿಸಿತು ವೈಎಸ್‌ಆರ್ ಕಾಂಗ್ರೆಸ್, ಇಲ್ಲಿ ಬಿಎಸ್‌ಆರ್ ಕಾಂಗ್ರೆಸ್!

ಆ ಕಾಂಗ್ರೆಸ್‌ನಂತೆಯೇ ಈ ಕಾಂಗ್ರೆಸ್ ಜನಮನ್ನಣೆ ಪಡೆಯುವುದಂತೆ!

ಏನೇ ಆಗಲಿ. ಎರಡೂ ಪಕ್ಷಗಳಿಗೂ ಸಾಮ್ಯತೆ ಇದೆ.

ಪಕ್ಷಗಳ ನಾಯಕರದ್ದು ಒಂದೇ ದಂಧೆ. ಅಕ್ರಮ ಹಣ ಸಂಪಾದನೆ. ಆ ಹಣವೆ ಜನಪ್ರಿಯತೆಯ ಸೂತ್ರ! ಅಕ್ರಮ ಗಳಿಕೆ, ಉಳಿಕೆ, ಅವುಗಳ ಧ್ಯೇಯ. ರಾಜಕೀಯ ಅದಕ್ಕೆ ಇರುವ ಏಕೈಕ ಮಾರ್ಗ!

ಅದರ ಮೊದಲ ಹೆಜ್ಜೆ ಪಾದಯಾತ್ರೆ!

ಯಾತಕ್ಕಾಗಿ ಈ ಪಾದಯಾತ್ರೆ!



ಎಚ್.ಎಲ್.ಕೇಶವಮೂರ್ತಿ

ಅಣಕ

ಜನರ ಕಷ್ಟ ಅರಿಯಲು ಅಂತೆ!

ಶಾಸಕನಾಗಿ, ಮಂತ್ರಿಯಾಗಿ ಇದರ ಅರಿವು ಬರಲಿಲ್ಲವೇ ತಿಳಿಯದು. ಬುದ್ಧಿಜೀವಿಗಳ ಪ್ರಕಾರ ಇದ ‘ಪ್ರಾಯಶ್ಚಿತ್ತಕ್ಕಾಗಿ ಪಾದಯಾತ್ರೆ’ ಅಂತೆ!

ಪ್ರಾಯಶ್ಚಿತ್ತ ಯಾವಾಗ? ಅಕ್ರಮ ಗಳಿಕೆಯನ್ನೆಲ್ಲ ಬಡಬಗ್ಗರಿಗೆ ದಾನ ಮಾಡಿದಾಗ. ಇದು ಪುರಂದರದಾಸರ ಮಾದರಿ.

ಅದು ಬೇಡ! ಬಾಯಿಮಾತಿನ ಪ್ರಾಯಶ್ಚಿತ್ತ ಸಾಕು

ಇದು ಬುದ್ಧಿಜೀವಿಗಳ ಪ್ರಲಾಪ!

ಅವರು ಅಕ್ರಮವಾಗಿ ಹಣ ಗಳಿಸಿದ್ದಾರೆ. ಅದಕ್ಕೆ ಏನು ಕ್ರಮ?

ಜನತಾ ನ್ಯಾಯಾಲಯ ತೀರ್ಪು ನೀಡುವುದಂತೆ! ಅದು ತೀರ್ಪೇ ಅಂತಿಮ ಅಂತೆ!

ನ್ಯಾಯಾಲಯಗಳೇಕೆ ಬೇಕು? ಜನತಾ ನ್ಯಾಯಾಲಯವೆ ಸಾಕು!

ಸತ್ಯ ಹೇಳಬಾರದು ಕಣ್ರಿ!

ಇದ್ದದ್ದ ಇದ್ದ ಹಾಗೆ ಹೇಳಿದರೆ ಸಿದ್ದಪ್ಪನಿಗೆ ಸಿಡಿಲು ಬಡಿದಂಗಾಯಿತಂತೆ. ಪಾಪ ಈಶ್ವರಪ್ಪನೋರು ‘ನಾವು ಆಪರೇಷನ್ ಕಮಲ ಮಾಡಿ ಹಾದಿಬೀದಿಲಿದ್ದೋರನ್ನೆಲ್ಲ ಎಳ್ಕೊಂಬಂದು ನಮ್ಮ ಪಕ್ಷಕ್ಕೆ ಸೇರಿಸಿಕೊಂಡೊ. ಬರೋರು ಬಂದ್ರು ಅವರೇನು ಸುಮ್‌ಸುಮನೆ ಬಂದ್ರಾ. ಹಣ ಕೊಟ್ಟೊ ಬರೀ ಹಣಾನೂ ಸಾಲದು ಅನ್ನೋವಕೆ ಜಾತಿ ಹುಚ್ಚು ಹಿಡಿಸಿದೊ. ಹಿಂಗಾಗಿ ನಾವು ಆಡಳಿತ ನಡೆಸೋಕೆ ಸಾಧ್ಯ ಆಯಿತು’ ಅಂತಾವ ಹೇಳಿದ್ರು ನೋಡಿ. ಎಂಜಲು ಕಾಸಿಗೆ ಜಾತಿಪ್ರೀತಿಗೆ ಹೋಗಿ ಕಮಲದ ಕೆಸರಲ್ಲಿ ಬಿದ್ದವಲ್ಲ ಅವೆ ಏನ್ ಮಾಡ್ತಾ ಅವೆ. ‘ನಾನು ದುಡ್ಡು ತಗಂಡಿಲ್ಲ’, ‘ತಾನ್ ದುಡ್ಡು ತಗಂಡಿಲ್ಲ’ ಅಂತ ಒಬ್ಬರಾದ ಮೇಲೊಬ್ಬರು ಹೇಳ ಬಿದ್ದವ್ರೆ.. ಅಲ್ಲ ಮಾರಾಯ್ರು ಹಂಗಾರೆ ನೀವ್ಯಾಕೋದ್ರಿ ದುಡ್ಡೇ ತಗಂಡಿಲ್ಲ ಅಂತೀರಿ. ಅಧಿಕಾರ ಹಿಡೀಬೇಕು ಅಂ ಹಣ ನಿಮ್ಮ ಬಾಯಿಗೆ ಹಾಕಿರೋರು ಈಶ್ವರಪ್ಪನೋರು ಅವರೇಯ ಇವರೆಲ್ಲರ ಬಾಯಿಗೂ ಹಾಕ್ದೆ ಅಂದವ್ರೆ. ನೀವ ಇಲ್ಲ ಅಂತೀರಿ. ಹಂಗಾರೆ ಅವರಿಗೆ ಕೊಡು, ಇವರಿಗೆ ಕೊಡು ಅಂತ ಹಂಚಕ್ಕೆ ಕೊಟ್ಟಿದ್ದ ಹಣಾನೆಲ್ಲ ಈಶ್ವರಪ್ನೋರೆ ಮಡಿಕ್ಕಂಡವ್ರೆ ಅಂತಾಯ್ತದಲ್ಲಾ.....

‘ಆರ್ಟ್ ಆಫ್ ಅರೆಸ್ಟ್’ಗೆ ಧನ್ಯವಾದಗಳು


‘ಆರ್ಟ್ ಆಫ್ ಅರೆಸ್ಟ್’ ನೋಡಿ ಸಮಾಧಾನ ವಾಯಿತು. ಮಾಧ್ಯಮಗಳು ಸರಿಯಿದ್ದರೆ ನೂರುಜನ ನಿತ್ಯಾನಂದರು ಇದ್ದರೂ ಓಡಿಸಬಹುದು. ಆದರೆ ನಿತ್ಯಾನಂದನಷ್ಟೇ ಅಥವಾ ಆತನಿಗಿಂತ ಅಪಾಯಕಾರಿ ಯಾಗುತ್ತಿರುವ ಮಾಧ್ಯಮದವರ ವಿರುದ್ಧ ನಮ್ಮಂತವರಿಗೆ ಅಂತರ್ಜಾಲದಲ್ಲಿ ಮೈ ಪರಚಿಕೊಳ್ಳುವುದು ಬಿಟ್ಟು ಬೇರೇನೂ ಸಾಧ್ಯವಾಗದಿದ್ದಾಗ ನೀವು ದನಿಯೆತ್ತಿದ್ದೀರಿ. ಧನ್ಯವಾದಗಳು.

- ಪ್ರಸಾದ್ ರಕ್ಷಿದಿ, ಸಕಲೇಶಪುರ

ಪೇಜಾವರರು ಮೊದಲು ಮಾನವೀಯತೆಯ ಪಾಠ ಕಲಿಯಲಿ

ಇತ್ತೀಚೆಗೆ ಉಡುಪಿಯ ಪೇಜಾವರ ಶ್ರೀಗಳು ಮಾಂಸ, ಮದ್ಯ ಸೇವಿಸುವವರ ಜೊತೆ ಕುಳಿತು ಊಟ ಮಾಡಿದರೆ ವೆಜ್ ಆಹಾರ ಸೇವಿಸುವವರು ನಂತರದ ದಿನಗಳಲ್ಲಿ ಮಾಂಸ-ಮದ್ಯ ಸೇವನೆಗೆ ಆಕರ್ಷಿತರಾಗು ತ್ತಾರೆಂದೂ, ಆ ಕಾರಣಕ್ಕೇ ತಾನು ಸಹಪಂಕ್ತಿ ಭೋಜನವನ್ನು ವಿರೋಧಿಸುತ್ತೇನೆಂದೂ ಹೇಳಿದ್ದಾರೆ. ಅವರ ಮಾತು ನಿಜಕ್ಕೂ ಹಾಸ್ಯಾಸ್ಪದವಾಗಿವೆ.

ಪುರಾಣಗಳ ಪ್ರಕಾರ ದೇವಾನುದೇವತೆಗಳೇ ಮಾಂಸಾಹಾರ, ಮದ್ಯಪಾನ ಮಾಡುತ್ತಿದ್ದರು ಅಂದರೆ ನಾವುಗಳು ಮಾಡೋದು ತಪ್ಪಾ! ಮಾಂಸ ತಿನ್ನುವುದು ನಮ್ಮ ಬದುಕುವ ರೀತಿ, ಮದ್ಯಪಾನ ಒಂದು ವ್ಯಸನ ಎಂಬುದು ಶ್ರೀಗಳಿಗೆ ತಿಳಿದಿರಲಿ.



ಶ್ರೀಕೃಷ್ಣ ಯಾದವ ಕುಲದಲ್ಲಿ ಜನಿಸಿದವನು. ಆದರೆ ಆತ ಗೊಲ್ಲರ ಜಾತಿಗೆ ಸೇರಿದವನು. ಅಂತಹ ಕೃಷ್ಣನನ್ನು ಬ್ರಾಹ್ಮಣರು ಭಕ್ತಿಯಿಂದ ಪೂಜಿಸುವುದೇಕೆ, ಆರಾಧಿಸು ವುದೇಕೆ? ಅವರು ಆತನನ್ನು ಖಂಡಿತವಾಗಿಯೂ ಶ್ರದ್ಧೆಯಿಂದ, ಭಕ್ತಿಯಿಂದ ಪೂಜಿಸು ವುದಿಲ್ಲ, ಕೇವಲ ದೇವಸ್ಥಾನದ ಹುಂಡಿಗೆ ಬೀಳುವ ಕಾಸಿಗೆ ಬ್ರಾಹ್ಮಣರು ಆತನನ್ನು ಪೂಜಿಸುತ್ತಾರೆ ಎಂದು ನನಗನ್ನಿಸುತ್ತದೆ.

ವಿಶ್ವ ಹಿಂದೂ ಪರಿಷತ್, ಭಜರಂಗದಳ, ಸಂಘ ಪರಿವಾರದಲ್ಲಿ ಪ್ರಮುಖರಾಗಿ ಸಕ್ರಿಯರಾಗಿರುವ ಶ್ರೀಗಳು ಸಮಾಜವನ್ನು ಒಡೆಯುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಾ ಬಂದಿದ್ದಾರೆ. ಸಮಾಜದ ಒಳಿತಿ ಗಾಗಿ, ಏಳಿಗೆಗಾಗಿ, ನೆಮ್ಮದಿಗಾಗಿ ಶ್ರೀಗಳು ಚಿಂತನೆ ನಡೆಸಬೇಕೇ ಹೊರತು ಇಂತಹ ಉಡಾಫೆ ಹೇಳಿಕೆಗಳನ್ನು ನೀಡಬಾರದು. ಇದೆಲ್ಲಕ್ಕಿಂತ ಮೊದಲು ಶ್ರೀಗಳು ಮಾನವೀಯತೆಯ ಪಾಠ ಕಲಿಯಬೇಕಾಗಿದೆ.

ಆದ್ದರಿಂದ ಶ್ರೀಗಳು ಇಂತಹ ಹೇಳಿಕೆ ಗಳನ್ನು ನೀಡುವುದನ್ನು ಸಂಪೂರ್ಣವಾಗಿ ವರ್ಜಿಸಬೇಕು. ಇಲ್ಲದಿದ್ದರೆ ಇತ್ತೀಚೆಗೆ ಸೋಸಲೆ ಮಠವನ್ನು ರಾಜ್ಯ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಂತೆ ಉಡುಪಿಯ ಅಷ್ಟಮಠಗಳನ್ನು ಸಹ ಮುಂಬರುವ ದಿನಗಳಲ್ಲಿ ರಾಜ್ಯ ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳುವ ಕಾಲ ದೂರವೇನಿಲ್ಲ.

ಶ್ರೀಗಳ ನೇತೃತ್ವದಲ್ಲಿ ಇನ್ನು ಮುಂದಾದರೂ ಶ್ರೀಕೃಷ್ಣನ ದೇವಸ್ಥಾನದಲ್ಲಿ ಎಲ್ಲಾ ಸಮಾಜದ ಭಕ್ತರು ಸಹಪಂಕ್ತಿಯಲ್ಲಿ ಕುಳಿತು ಭೋಜನ ಮಾಡುವ ವ್ಯವಸ್ಥೆ ಜಾರಿಗೆ ಬರುವಂತಾಗಲಿ.

- ಮಸ್ರೂರ್ ಮೊಹಿಯುದ್ದೀನ್, ಚಿತ್ರದುರ್ಗ

ಮಾಂಸಾಹಾರಿಗಳ ಸಹವಾಸ ಬೇಡವೆಂದ ಮನುಷ್ಯನಿಗೆ ಮಾಂಸಾಹಾರಿ ಗಳಾದ ಅಸ್ಪೃಶ್ಯ ವಾಲ್ಮೀಕಿ ಬರೆದ ರಾಮಾಯಣ, ಶೂದ್ರ ವ್ಯಾಸ ಬರೆದ ಮಹಾಭಾರತಗಳ ಸಹವಾಸ ಬೇಕೆ?

- ಎಸ್‌ಎಂಎಸ್ ಮೂಲಕ

ಆಮೀರ್‌ಖಾನ್‌ನದ್ದು ಬುರುಡೆ ಪುರಾಣವಲ್ಲ

ಇತ್ತೀಚೆಗೆ ಪ್ರಜಾವಾಣಿಯಲ್ಲಿ ಮೊದಲಿಯಾರ್ ಎಂಬ ಲೇಖಕರು ‘ಸತ್ಯಮೇವ ಜಯತೆ’ ಕಾರ್ಯಕ್ರಮ ವನ್ನು ಬುರುಡೆ ಪುರಾಣ ವೆಂದಿದ್ದಾರೆ.




ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

ದಿನಬೆಳಗಾದರೆ ದೃಶ್ಯ ಮಾಧ್ಯಮಗಳಲ್ಲಿ ಮಿರರ್ ಜ್ಯೋತಿಷಿ, ಸೈಂಟಿಫಿಕ್ ಜ್ಯೋತಿಷಿ, ಹಸ್ತರೇಖೆ ಜ್ಯೋತಿಷಿ, ಸೈಲೆಂಟ್ ಜ್ಯೋತಿಷಿ, ಮಗಪ್ (ಕಂಠಪಾಠ) ಜ್ಯೋತಿಷಿಗಳನ್ನು ನೋಡಿನೋಡಿ ಸಾಕಾಗಿದೆ. ಇವರುಗಳು ಹೇಳುವ ಸುಳ್ಳುಗಳನ್ನು ನಂಬುವ ಜನರನ್ನು ನೋಡಿದರೆ ಪಾಪವೆನಿಸುತ್ತದೆ. ಇಂತಹ ಕಾರ್ಯ ಕ್ರಮಗಳು ಭಾರತೀಯರನ್ನು ಗುಲಾಮರನ್ನಾಗಿಸುವುದರಲ್ಲಿ ಎರಡು ಮಾತಿಲ್ಲ, ರಾತ್ರಿ ಯಾಯಿತೆಂದರೆ ದೈವದ, ದೆವ್ವದ ನಿಗೂಢಗಳನ್ನು ತಿಳಿಸುವ ಕಾರ್ಯಕ್ರಮಗಳು. ಹಳ್ಳಿಗಳಲ್ಲಿ ನಡೆಯುವ ಚಿಕ್ಕ ಬದಲಾವಣೆಗಳಿಗೂ ಕಾರಣ ದೇವರು ಅಥವಾ ದೆವ್ವವೆಂದು ಬಿಂಬಿಸಿ ಬುರುಡೆ ಬಿಡುತ್ತಾರೆ.

ಇನ್ನು ಮಿಕ್ಕ ಕಾರ್ಯಕ್ರಮಗಳಲ್ಲಿ ಪ್ರಮುಖವಾದವುಗಳು ಐಶ್ವರ್ಯ ಗರ್ಭಿಣಿಯಾದದ್ದು, ಅವಳಿಗೆ ಮಗು ಹುಟ್ಟಿದ್ದು ಅವಳು ದಪ್ಪವಾಗಿದ್ದು ಮುಂದೆ ಸಣ್ಣವಾಗುವುದು ಇತ್ಯಾದಿ ಇದೀಗ ಬಂದ ಸುದ್ದಿ ಶಿಲ್ಪಾ ಶೆಟ್ಟಿಗೆ ಮಗುವಾಗಿರುವುದು ಇದನ್ನು ಕೂಡ ಅರ್ಧ ಗಂಟೆ ಕಾರ್ಯಕ್ರಮ ಮಾಡುವುದರಲ್ಲಿ ಯಾವುದೇ ಅನುಮಾನವಿಲ್ಲ, ಜೊತೆಜೊತೆಗೆ ಸನ್ನಿ ಲಿಯೋನ್ ಎಂಬ ನೀಲಿ ಕನ್ಯೆ ಈಗ ಮಾಧ್ಯಮಗಳಲ್ಲಿ ಮಿಂಚುತ್ತಿದ್ದಾಳೆ. ಇಂತಹ ಕಾರ್ಯಕ್ರಮಗಳಿಂದ ಯಾರಿಗೆ ಲಾಭ? ಪ್ರೇಕ್ಷಕರಿಗೆ ಖಂಡಿತವಾಗಿಯೂ ಅಲ್ಲ, ಟಿಆರ್‌ಪಿ ರೇಟ್ ಹೆಚ್ಚಿಸಿಕೊಂಡ ಚಾನಲ್‌ಗಳಿಗೆ. ವೀಕ್ಷಕ ನೋಡಿ ಸಮಯ ಕಳೆದುಕೊಳ್ಳುತ್ತಾನೆ ಅಷ್ಟೆ.


ಲೇಖಕರು ‘ಸತ್ಯಮೇವ ಜಯತೆ’ ವಿಷದಪಡಿಸುತ್ತಿರು



ವಿಚಾರಗಳನ್ನು ಆದಾಗಲೆ ಹಲವು ಪತ್ರಿಕೆಗಳ ಕವರ್ ಸ್ಟೋರಿಗಳು ಬಿಂಬಿಸಿವೆ ಇದೇನು ಹೊಸತಲ್ಲ, ಇದ ಅಷ್ಟೊಂದು ಪ್ರಚಾರ ಕೊಡುವ ಅಗತ್ಯವಿಲ್ಲ ಎಂದ ಹೇಳಿದ್ದಾರೆ. ಇಂತಹ ಕಾರ್ಯಕ್ರಮಗಳಿಗೆ ಪ್ರಚಾರ ಕೊಡ ಅದ್ಯಾವಳೊ ಭಾರತದ ಕ್ರಿಕೆಟ್ ತಂಡ ವಿಶ್ವ ಕಪ್ ಗೆದ್ದ ತಾನು ಬೆತ್ತಲಾಗುತ್ತೇನೆ ಎಂದಿದ್ದಳಲ್ಲ, ಆಕೆಗೆ ಪ್ರಚಾ ನೀಡಬೇಕೆ?

ನಮ್ಮ ದೇಶದಲ್ಲಿ ಸಾಕ್ಷರತೆ ಸರ್ಕಾರ ಹೇಳಿರುವುದಕ್ಕಿಂ ಕಡಿಮೆ ಇದೆ. ಇಲ್ಲಿ ಅನಕ್ಷರಸ್ಥರೆ ಹೆಚ್ಚು, ಅವರುಗಳಿ ದಿನಪತ್ರಿಕೆಗಳ ಸುದ್ದಿ ತಲುಪುವುದೇ ಇಲ್ಲ, ಇಂತ ಪರಿಸ್ಥಿತಿಯಲ್ಲಿ ‘ಸತ್ಯಮೇವ ಜಯತೆ’ ತನ್ನ ಕೈಲಾದಷ್ಟು ಕೆಲಸ ಮಾಡುತ್ತಿರುವುದು ಪ್ರಶಂಸನೀಯ. ಬಸಿಯನ

ನವರಸನಾಯಕನ ಹತ್ತನೇ ಅವತಾರ



ನವರಸನಾಯಕ ಜಗ್ಗೇಶ್ ...ಮಾ ನಿರ್ದೇಶಿಸುವ ಸಾಹಸಕ್ಕೆ ...ಹಾಕಿದ್ದಾರೆ. ಅವರ ಆತ್ಮೀ...ರು ಈ ಸಾಹಸವನ್ನು ...ಗ್ಗೇಶರ ಹತ್ತನೆ ಅವತಾರ" ...ದು ತಮಾಷೆಗಾಗಿ ಹೇಳು...ತ್ತಾರೆ. ಅಂದಹಾಗೆ ಅವರ ನಿರ್ದೇಶನದ ಚಿತ್ರದ ಹೆಸರು ...ರು'. ಈ ಚಿತ್ರದ ನಾಯಕ ಮತ್ಯಾರೂ ಅಲ್ಲ, ಅವರ ...ಯ ಮಗ ಗುರುರಾಜ್. ಗುರು ರಾಘವೇಂದ್ರರ ...ಟ್ಟ ಭಕ್ತ ಜಗ್ಗೇಶ್ ಆಗಿರುವುದರಿಂದ ತನ್ನ ಮೊದಲ ...ಗುವಿಗೆ ಗುರುರಾಜ ಎಂದು ಹೆಸರಿಟ್ಟಿದ್ದರು. ಈಗ ...ನ್ನ ನಿರ್ದೇಶನದ ಮೊದಲ ಚಿತ್ರಕ್ಕೆ 'ಗುರು' ಎಂದು ...ರಿಡುವ ಮುಖಾಂತರ ಮತ್ತೊಮ್ಮೆ ರಾಘವೇಂದ್ರ ...ಮಿಯನ್ನು ಪರೋಕ್ಷವಾಗಿ ನೆನಪಿಸಿಕೊಂಡಿದ್ದಾರೆ.

...ಹೀಗೆಂದ ಮಾತ್ರಕ್ಕೆ ಈ ಚಿತ್ರ ರಾಘವೇಂದ್ರ ಸ್ವಾಮಿಗೆ ...ಬಂಧಪಟ್ಟದ್ದು ಎಂದು ನೀವು ಊಹಿಸಿದರೆ ಅದು ...ಮ್ಮ ತಪ್ಪು, ಇದು ಅಪ್ಪಟ ಕಮರ್ಷಿಯಲ್ ಚಿತ್ರ. ...ಶರಲ್ಲಿ ಹೊಡಿ-ಬಡಿ-ಕಡಿ ಹಿತಮಿತವಾಗಿದ್ದು ...ರೊಮ್ಯಾಂಟಿಕ್ ದೃಶ್ಯಗಳು ಸ್ವಲ್ಪ ಜಾಸ್ತಿಯೇ ಇವೆಯಂತೆ. ...ಮ ತಮಿಳಿನ ಕಥೆಯಾಗಿದ್ದು ಅಲ್ಪಸ್ವಲ್ಪ ಬದಲಾವಣೆ ...ಡಿ ತನ್ನ ಮಗನನ್ನು ಈ ಚಿತ್ರದಲ್ಲಿ ಹೀರೋ ...ಡಿದ್ದಾರೆ ಜಗ್ಗೇಶ್.

...ಸುಮಾರು 28 ವರ್ಷಗಳ ಕಾಲ ನಟನಾಗಿರುವ ...ಗ್ಗೇಶ್‌ಗೆ ಇದ್ದಕ್ಕಿದ್ದಂತೆ ಅದ್ಯಾಕೆ ನಿರ್ದೇಶನ ಮಾಡುವ ...ಚ್ಚು ಬಂತು ಎಂದು ನೀವು ಕೇಳಬಹುದು. ಆದರೆ ...ಮ ದಿಢೀರನೆ ಹುಟ್ಟಿಕೊಂಡ ಕ್ರೇಜ್ ಅಲ್ಲ, ಜಗ್ಗೇಶ್ ...ರಂಗಕ್ಕೆ ಬಂದಿದ್ದೇ ನಿರ್ದೇಶಕನಾಗಬೇಕೆಂಬ ಕನಸು ...ತ್ತುಕೊಂಡು. ಮೊದಲಿಗೆ ಅವರು ಭೇಟಿಯಾಗಿದ್ದು ...ತ್ರಬ್ರಹ್ಮ' ಎನಿಸಿಕೊಂಡಿದ್ದ ಪುಟ್ಟಣ್ಣ ಕಣಗಾಲ್ ...ವರನ್ನು. ಆಗ ಪುಟ್ಟಣ್ಣ ಬಳಿ ಸಾಕಷ್ಟು ಸಹಾಯಕ ...ರ್ದೇಶಕರು ಇದ್ದುದರಿಂದ ಜಗ್ಗೇಶ್‌ಗೆ ಅವಕಾಶ ಸಿಗಲಿಲ್ಲ. ...ನಂತರ ಹಾಗೆಯೇ ಗಾಂಧಿನಗರದಲ್ಲಿ ಒಂದು ಸುತ್ತು ...ಕಿದಾಗ ರಾಜ್‌ಕಿಶೋರ್, ರೆಡ್ಡಿ ಮೊದಲಾದ ...ರ್ದೇಶಕರು ಜಗ್ಗೇಶ್‌ಗೆ ತಮ್ಮೊಂದಿಗೆ ಸಹ ನಿರ್ದೇಶಕರಾಗಿ ...ಲಸ ಕಲಿಯಲು ಅವಕಾಶ ಮಾಡಿಕೊಟ್ಟರು.

ಆದರೆ ಒಂದು ಕಹಿ ಘಟನೆ ಅವರ ಜೀವನದ ದಿಕ್ಕನ್ನೇ ಬದಲಿಸಿತು. ಒಮ್ಮೆ ಸಹ ನಿರ್ದೇಶಕರಾಗಿ ಜಗ್ಗೇಶ್ ಕೆಲಸ ಮಾಡುತ್ತಿದ್ದಾಗ ಕಲಾವಿದರಾದ ಕೃಷ್ಣವೇಣಿ ಮತ್ತು ಮುಸುರಿ ಕೃಷ್ಣಮೂರ್ತಿ ಅವರು ತಮ್ಮ ಚಪ್ಪಲಿಗಳನ್ನು ತಂದುಕೊಡಲು ಜಗ್ಗೇಶ್‌ಗೆ ಹೇಳಿದರಂತೆ.

ಮನಸ್ಸಿಲ್ಲದ ಮನಸ್ಸಿನಿಂದ ಒಂದೆರಡು ಬಾರಿ ಈ ಕೆಲಸ ಮಾಡಿದ ಜಗ್ಗೇಶ್ ಕೊನೆಗೊಮ್ಮೆ ಕೋಪಗೊಂಡು "ನಾನು ಇಲ್ಲಿಗೆ ಬಂದಿರುವುದು ನಿರ್ದೇಶನ ಮಾಡುವುದನ್ನು ಕಲಿಯಲು; ನಿಮ್ಮ ಚಪ್ಪಲಿ ತರಲು ಅಲ್ಲ" ಎಂದು ಬಂಡಾಯವೆದ್ದರಂತೆ. ಅವತ್ತಿನ ಘಟನೆಯಿಂದಾಗಿ ಜಗ್ಗೇಶ್ ಇನ್ನು ಮುಂದೆ ತಾನು ಕಲಾವಿದನಾಗಬೇಕು ಎಂದು ಪಣ ತೊಟ್ಟರಂತೆ.

ಆ ಕೆಟ್ಟ ಘಟನೆಯ ನಂತರ ಜಗ್ಗೇಶ್ ಅವರ ವೃತ್ತಿ ಬದುಕು ಹಲವಾರು ಆಯಾಮಗಳನ್ನು ಪಡೆದಿದೆ. ಪೋಷಕ ನಟ, ಖಳನಟ, ಹಾಸ್ಯ ನಟ, ನಾಯಕ ನಟ ಕೊನೆಗೆ ನಿರ್ಮಾಪಕ ಕೂಡ ಆದ ಜಗ್ಗೇಶ್ ರಾಜಕೀಯವನ್ನೂ ಪ್ರವೇಶಿಸಿ ಎಂಎಲ್‌ಎ ಮತ್ತೀಗ ಎಂಎಲ್‌ಸಿ ಆಗಿರುವವರು.

ಇಂತಹ ಜಗ್ಗೇಶ್ ತಮ್ಮ ಮಗ ಗುರುರಾಜ್‌ನನ್ನು ನೋಡಿದಾಗ "ಇವನ ಪ್ರತಿಭೆಯನ್ನು ನಮ್ಮ ಯಾವ ನಿರ್ದೇಶಕರೂ ಸರಿಯಾಗಿ ಬಳಸಿಕೊಂಡಿಲ್ಲ. ಹೀಗಾಗಿ ನಾನೇ ಯಾಕೆ ನಿರ್ದೇಶಕನಾಗಿ ಆಖಾಡಕ್ಕೆ ಇಳಿಯಬಾರದು?" ಅನ್ನಿಸಿತಂತೆ. ಎಷ್ಟಾದರೂ ಪುತ್ರವ್ಯಾಮೋಹ ಕನ್ನಡ ಚಿತ್ರರಂಗದಲ್ಲಿ ಯಾರನ್ನು ತಾನೇ ಬಿಟ್ಟಿದೆ?

ಈಗ 50ರ ಆಜುಬಾಜಿನಲ್ಲಿರುವ ಜಗ್ಗೇಶ್ ನಿರ್ದೇಶನಕ್ಕೆ ಕೈಹಾಕಿರುವುದು ಮೆಚ್ಚಬೇಕಾದ್ದು. ಆದರೆ 25 ವರ್ಷಗಳ ಹಿಂದೆ ಅವರಲ್ಲಿ ನಿರ್ದೇಶಕನಾಗಬೇಕೆಂಬ ಹಸಿವು ಈಗ ಮಾಯವಾದಂತಿದೆ. ಈಗ ಏನಿದ್ದರೂ ಪುತ್ರವ್ಯಾಮೋಹದ ಕಾರಣಕ್ಕಾಗಿ ಅವರು ನಿರ್ದೇಶನಕ್ಕೆ ಇಳಿದಿದ್ದಾರೆ.

ಯಾವಾಗಲೂ ಒಂದಲ್ಲ ಒಂದು ಆಶ್ಚರ್ಯವನ್ನು ತನ್ನ ವೃತ್ತಿಜೀವನದುದ್ದಕ್ಕೂ ನೀಡುತ್ತಾ ಬಂದಿರುವ ಜಗ್ಗೇಶ್ ಈ ಬಾರಿಯೂ ಎಲ್ಲರನ್ನು ಅಚ್ಚರಿ ಪಡಿಸುತ್ತಾರೆಯೇ? ಜಗ್ಗೇಶ್‌ರ 10ನೇ ಅವತಾರದ ಬಗ್ಗೆ ಅವರ ಅಭಿಮಾನಿಗಳಿಗಷ್ಟೇ ಅಲ್ಲ, ಗಾಂಧಿನಗರದವರಲ್ಲೂ ಅಷ್ಟೇ ಕುತೂಹಲವನ್ನು ಮೂಡಿಸಿದೆ.

–ಶೆಣೈ

ತೆಂಗಿನಮರದೊಂದಿಗೆ ರಾಧಿಕಾ ನೃತ್ಯ?



'ಊರಿಗೆ ಬಂದವಳು ನೀರಿಗೆ ಬಾರದೇ ಇರುತ್ತಾಳೆಯೇ?' ಎಂಬ ಮಾತು ರಾಧಿಕಾ ಕುಮಾರಸ್ವಾಮಿ ವಿಷಯದಲ್ಲಿ ನಿಜವಾಗಿದೆ. ಏಳು ವರ್ಷಗಳ ಹಿಂದೆ ಚಿತ್ರರಂಗಕ್ಕೆ ಅಘೋಷಿತ ವಿದಾಯ ಹೇಳಿದ್ದ ರಾಧಿಕಾ ಕಳೆದ ವರ್ಷ ನಿರ್ಮಾಪಕಿಯಾಗಿ ಚಿತ್ರಂಗಕ್ಕೆ ವಾಪಸ್ ಬಂದಿದ್ದಳು. ಆಗ ಆಕೆ "ಯಾವುದೇ ಕಾರಣಕ್ಕೆ ನಾನು ಮತ್ತೊಮ್ಮೆ ನಟಿಸುವುದಿಲ್ಲ, ನಾನೇನಿದ್ದರೂ ನಿರ್ಮಾಪಕಿಯಾಗಿ ವರ್ಷಕ್ಕೆ ಒಂದೆರಡು ಚಿತ್ರ ನಿರ್ಮಿಸುತ್ತೇನೆ" ಎಂದು ಹೇಳಿದ್ದರು.

ಆದರೆ ಅದೇ ರಾಧಿಕಾ ಇವತ್ತು ಮತ್ತೆ ತನ್ನ ಮುಖಕ್ಕೆ ಬಣ್ಣ ಹಚ್ಚಿಕೊಂಡು ಸಿನಿಮಾದಲ್ಲಿ ನಟಿಸಲು ಮುಂದಾಗಿದ್ದಾಳೆ. ರಾಧಿಕಾ ಮತ್ತೆ ಚಿತ್ರರಂಗಕ್ಕೆ ಮರಳಲು ಆಕೆಯ ಪತಿ ಕುಮಾರಸ್ವಾಮಿ ಅನುಮತಿ ಮಾಡಿಕೊಟ್ಟಿದ್ದಾರಂತೆ. ರಾಧಿಕಾ ಹೇಳುವ ಪ್ರಕಾರ ಈಗಾಗಲೇ ಮೂರ್‍ನಾಲ್ಕು ನಿರ್ಮಾಪಕರು ಆಕೆಯನ್ನು ನಟನೆಗಾಗಿ ಸಂಪರ್ಕಿಸಿದ್ದಾರಂತೆ. ಆದರೆ ರಾಧಿಕಾ ಯಾರಿಗೂ ಇನ್ನೂ ಅಂತಿಮವಾದ ಒಪ್ಪಿಗೆಯನ್ನು ನೀಡಿಲ್ಲವಂತೆ.

ಏಳು ವರ್ಷಗಳ ಹಿಂದೆ ತನ್ನ ಯೌವ್ವನದ ಪರಾಕಾಷ್ಠೆಯಲ್ಲಿದ್ದ ರಾಧಿಕಾ ನಾಯಕಿಯಾಗಿಯೂ ಆಗ ಅತ್ಯಂತ ಉನ್ನತಸ್ಥಾನದಲ್ಲಿದ್ದಳು. ಹಾಲಿನ ಮೈಬಣ್ಣದ ರಾಧಿಕಾ ಸುಂದರಿ ಮಾತ್ರವಲ್ಲ, ಪ್ರತಿಭಾವಂತೆ ಕೂಡ. ಆಕೆಯ ನಗುವಿನಲ್ಲಿ ಒಂದು ರೀತಿಯ ಆಕರ್ಷಣೆಯೇ ಇತ್ತು. ಆಕೆ ನೃತ್ಯದಿಂದಲೇ ಅಪಾರ ಅಭಿಮಾನಿಗಳನ್ನು ಸಂಪಾದಿಸಿದ್ದರು. ಆದರೂ ಆಕೆ ದಿಢೀರನೆ ಗೃಹಸ್ಥಾಶ್ರಮಕ್ಕೆ ಕಾಲಿಟ್ಟು ಸಾರ್ವಜನಿಕ ಬದುಕಿನಿಂದ ಕಣ್ಮರೆಯಾಗಿದ್ದಳು.

ಈಗಲೂ ರಾಧಿಕಾ ತನ್ನ ಮೈಮಾಟವನ್ನು ಉಳಿಸಿಕೊಂಡಿದ್ದಾಳೆ. ಆದರೆ ರಾಧಿಕಾಳನ್ನು ಆಕೆಯ ಅಭಿಮಾನಿಗಳು ಅದೇರೀತಿಯಲ್ಲಿ ಸ್ವಾಗತಿಸುತ್ತಾರೋ ಎಂಬುದೇ ಸದ್ಯಕ್ಕಿರುವ ಸಸ್ಪೆನ್ಸ್. "ನಾನು ನಾಯಕಿಯಾಗಿ ನಟಿಸಿದರೆ ಪ್ರೇಮಗೀತೆಗಳಲ್ಲಿ ನಾಯಕ ನಟ ನನ್ನನ್ನು ಆಲಿಂಗನ ಮಾಡಬಾರದು" ಈ ತರಹದ ಕಂಡೀಷನ್‌ಗಳನ್ನು ಈಕೆ ಹಾಕಿರುವುದರಿಂದ ಇನ್ನು ಮುಂದೆ ರಾಧಿಕಾ ತೆಂಗಿನ ಮರದ ಸುತ್ತ ನೃತ್ಯ ಮಾಡಬೇಕೇ ವಿನಃ ಈಕೆಗೆ ನಾಯಕ ನಟ ಯಾರು ಸಿಗುತ್ತಾರೆ ಎಂದು ಕೆಲವರು ಆಡಿಕೊಳ್ಳುತ್ತಿರುವುದು ಸುಳ್ಳಲ್ಲ!

...ಡರ್‌ವೇರ್‌ಗಳ ಜಾಹಿರಾತಿಗೆ ಮುಗಿಬೀಳುವ ಹೀರೋಗಳ ...ಳವೆ ಆಮಿರ್ ಖಾನ್ ನಿಜಕ್ಕೂ ವಿಭಿನ್ನವಾಗಿ ನಿಲ್ಲುತ್ತಾರೆ. ...ಖಕರು 'ಸತ್ಯಮೇವ ಜಯತೆ'ಯ ಮೊದಲ ಮೂರು ...ಪಿಸೋಡ್‌ಗಳನ್ನು ಕಣ್ಣೀರಿನ ಕಥೆಗಳು ಎಂದು ...ಳಿರುವುದು ಆಕ್ಷೇಪಾರ್ಹ. ನಮ್ಮ ದೇಶದಲ್ಲಿ ...ಂಡವಾಡುತ್ತಿರುವ ವರದಕ್ಷಿಣೆ, ಹೆಣ್ಣು ಭ್ರೂಣ ಹತ್ಯೆ ...ಹದ ಪಿಡುಗುಗಳ ವಿರುದ್ಧ ಒಬ್ಬ ಹೀರೊ ...ರ್ಯಕ್ರಮವನ್ನು ರೂಪಿಸಿರುವುದು ನಿಜಕ್ಕೂ ಸ್ವಾಗತಾರ್ಹ. ...ತಹ ಕಾರ್ಯಕ್ರಮಗಳು ತಿಂಗಳು ಪೂರ್ತಿ ...ಸಾರವಾದರೂ ತಪ್ಪಲ್ಲ. ನಿಜವಾಗಿ ಪ್ರಚಾರ ...ಬೇಕಾಗಿರುವುದು ಇಂತಹ ಕಾರ್ಯಕ್ರಮಗಳಿಗೆ ಹೊರತು ...ರುಡೆ ಬಡುವ ಜ್ಯೋತಿಷಿಗಳಿಗಲ್ಲ, ಹೀಗೂ ...ಂಟೆಗಳಿಗಲ್ಲ, ಐಶ್ವರ್ಯ ಶಿಲ್ಪಾರಿಗಲ್ಲ, ದಂಡುಪಾಳ್ಯ ...ಮಾತೀರದವರಿಗಲ್ಲ, ಸನ್ನಿ ಲಿಯೋನ್‌ಗಳಿಗಲ್ಲ.

- ವಿ.ಆರ್. ಮೌರ್ಯ,
ಬೆಂಗಳೂರು



ರೈಲಿನಲ್ಲಿ ಮಾನವೀಯತೆ ಮೆರೆದ ರಹೀಮ್ ಭಾಯ್ ಅವರಿಗೆ ಕೋಟಿ ಕೋಟಿ ವಂದನೆ.

- ಸುರೇಶ್ ಅರಸಲು,
ಶಿವಮೊಗ್ಗ

...ತ್ಯಾನಂದ ಸ್ವಾಮಿ ಕಾವಿ ತೊಟ್ಟು ಮಾಡುವ ದಂಧೆಗೆ ...ಡ್ಡ ದೊಡ್ಡ ರಾಜಕಾರಣಿಗಳ ಬೆಂಬಲ ಇದೆ. ಮೊದಲು ...ಸಾಮಾನ್ಯರುತ್ತಿರುವ ಜನ ಮಠಗಳಿಂದ ದೂರವಾದರೆ ...ಸ್ವಾಮಿಗಳ ಚೆಲ್ಲಾಟಗಳು ನಿಲ್ಲಬಹುದು.

- ಬಿ.ಬಿ.ರಾಜ್, ಹಂಪಸಾಗರ, ಹೆಚ್.ಬಿ.ಹಳ್ಳಿ

...ಲ್ಲಿಯವರೆಗೂ ಸಿನಿಮಾಗಳಲ್ಲಿ ಮತ್ತು ಧಾರಾವಾಹಿಗಳಲ್ಲಿ ...ನ್ಯಾಯಾಧೀಶರು ಲಂಚ ಸ್ವೀಕರಿಸುವುದನ್ನು ನೋಡಿದ್ದೆವು. ...ವರೀಗ ಬಳ್ಳಾರಿಯ ಭ್ರಷ್ಟ ಗಣಿಕಳ್ಳ ರೆಡ್ಡಿಗಳಿಂದಾಗಿ ...ಜೀವನದಲ್ಲೂ ನ್ಯಾಯಾಧೀಶನೊಬ್ಬ ಲಂಚ ತಿಂದು ...ಜೈಲುಪಾಲಾಗಿರುವುದನ್ನು ನೋಡುತ್ತಿದ್ದೇವೆ.

- ಎಸ್‌ಎಂಎಸ್ ಮೂಲಕ

ಹಿಂದೂ ಧರ್ಮದ ವೈರುಧ್ಯಗಳೇ ಸ್ವಾಮಿಗಳಿಗೆ ಅಸ್ತ್ರ

ಒಂದು ಪತ್ರ

ಹಿಂದೂ ಧರ್ಮ ಸೆಮೆಟಿಕ್ ಧರ್ಮಗಳಂತೆ ರಿಜಿಡ್ ಆಗಿಲ್ಲ ನಿಜ. ಆದರೆ ಹಿಂದೂ ಧರ್ಮದ ಈ 'ಫ್ಲೆಕ್ಸಿಬಿಲಿಟಿಯೇ' ಅದಕ್ಕೆ ಮಾರಕವಾಗಿರುವುದು. ಹಿಂದೂ ಧರ್ಮವನ್ನು ಯಾರು ಬೇಕಾದರೂ ತಮಗೆ ಬೇಕಾದಂತೆ ತಿರುಚಬಹುದು. ಇದನ್ನು ಪ್ರಶ್ನಿಸುವವರು ಯಾರೂ ಇಲ್ಲ, ಹಾಗಾಗಿ ಜನರನ್ನು ಧ್ಯಾನ, ಯೋಗ, ಭಕ್ತಿ, ಮುಕ್ತಿ, ಕುಂಡಲಿನಿ, ಸುದರ್ಶನ ಕ್ರಿಯೆ ಮುಂತಾದವುಗಳ ಹೆಸರಲ್ಲಿ ಮೋಸ ಮಾಡಲು ಹಿಂದೂ ಧರ್ಮದಲ್ಲಿ ಸಿಕ್ಕಷ್ಟು ಅವಕಾಶಗಳು ಜಗತ್ತಿನ ಇತರ ಯಾವುದೇ ಧರ್ಮಗಳಲ್ಲಿ ಲಭ್ಯವಿಲ್ಲ. ಇದೆ' ನಿತ್ಯಾನಂದ, ವೈಯಾರಿ ಸ್ವಾಮಿ, ನಿರ್ಮಲ ಬಾಬಾ, ಅಮ್ಮಾ, ಭಗವಾನ್ ಮುಂತಾದವರ ಯಶಸ್ಸಿನ ಗುಟ್ಟು. ದೇವರು ಆಗಾಗ ಮನುಷ್ಯರೂಪದಲ್ಲಿ ಅಥವಾ ಪ್ರಾಣಿರೂಪದಲ್ಲಿ ಅವತಾರ ಎತ್ತುತ್ತಾನೆ, ಸಂತರು ಪ್ರವಾದಿಗಳು ಮರುಜನ್ಮ ಪಡೆಯುತ್ತಲೇ ಇರುತ್ತಾರೆ ಎಂಬ ಜನರ ಮೂರ್ಖ ನಂಬಿಕೆಗಳೇ 'ದೇವ ಮಾನವರ' ಮೂಲ ಬಂಡವಾಳ. ಎಲ್ಲದನ್ನೂ ಸಂಶಯಿಸುವ, ಕೋರ್ಟಿನಲ್ಲಿ ಸಾವಿರಾರು ತರ್ಕಬದ್ಧ ಪ್ರಶ್ನೆಗಳನ್ನು ಕೇಳುವ ವಕೀಲನೂ 'ದೇವಮಾನವರ' ಬಗ್ಗೆ ಏನೆಂದೂ ಪ್ರಶ್ನೆ ಕೇಳದೆ, ಸಂಶಯಿಸದೇ ನಂಬಿ ಬಿಡುತ್ತಾನೆ. ಸಮಾಜದಲ್ಲಿ ಇಂತಹ ಮಾನಸಿಕತೆ ಇರುವಾಗ ಒಬ್ಬ ನಿತ್ಯಾನಂದ ಬಯಲಾದರೂ ಬೇರೆ ನೂರಾರು ನಿತ್ಯಾನಂದರು ಅಭಿವೃದ್ಧಿ ಹೊಂದುತ್ತಲೇ ಇರುತ್ತಾರೆ. ನಾಸ್ತಿಕರು ದೇವರ ಅಸ್ತಿತ್ವವನ್ನು ಗೌರವಯುತವಾಗಿ ನಿರಾಕರಿಸುತ್ತಾರೆಯೇ ಹೊರತು ಆಸ್ತಿಕರಂತೆ ದೇವರನ್ನು ಮೂರ್ಖ, ಚಪ್ಪ, ಲಂಚಕೋರ, ಆಸೆಬುರುಕ, ಹಗೆ ಸಾಧಿಸುವವ, ಸೇಡಿನ ಮನೋಭಾವದವ ಎಂದು ಅಡಿಗಡಿಗೆ ಭಾವಿಸುವುದಿಲ್ಲ, ಪೂಜೆ-ಹರಕೆಯ ರೂಪದಲ್ಲಿ ನಾಸ್ತಿಕರು ದೇವರಿಗೆ ಲಂಚ ಕೊಡಲು ಪ್ರಯತ್ನಿಸುವುದಿಲ್ಲ, ನಾಸ್ತಿಕರು ದೇವರ ಹೆಸರನ್ನೇ ಉಪಯೋಗಿಸುವುದಿಲ್ಲವಾದುದರಿಂದ ದೇವರ ಹೆಸರಿನ ದುರುಪಯೋಗದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದರೆ ಆಸ್ತಿಕರು ದೇವರ ಹೆಸರನ್ನು ಅತಿಯಾಗಿ ಉಪಯೋಗಿಸುತ್ತಾರೆ. ಆದುದರಿಂದ ದೇವರ ಹೆಸರಿನ ದುರುಪಯೋಗ ಆಸ್ತಿಕರಿಂದಲೇ ಜಾಸ್ತಿ. ಪೇಜಾವರರ 'ಇಬ್ಬಂದಿತನ' ಈ ದೃಷ್ಟಿಯಿಂದ ನೋಡಬಹುದು (ಲಂಕೇಶ್ 20.6.12).

ಮೂಲದಲ್ಲಿ ಹಿಂದೂ ಧರ್ಮದ ದೇವರ ಕಲ್ಪನೆ



ಹಾಗೂ ಪೌರಾಣಿಕ ಕಥೆಗಳಲ್ಲೇ ಇಬ್ಬಂದಿತನ ತುಂಬಿದೆ. ದೇವರಾದ ಕೃಷ್ಣನೇ ಮಾಂಸಾಹಾರಿ, ಆದರೆ ಅವನ ಪೂಜಾರಿಗಳು ಶಾಖಾಹಾರಿಗಳೇ ಆಗಿರಬೇಕಂತೆ. ಕೃಷ್ಣನಿಗೆ ಸಾವಿರಾರು ಪತ್ನಿಯರು, ಆದರೆ ಆತನ ಮಠಾಧೀಶರು ಬ್ರಹ್ಮಚಾರಿಗಳಾಗಿರಬೇಕು. ಹಿಂದೂ ಧರ್ಮದ ಅತ್ಯುಚ್ಚ ಮಂತ್ರವಾದ 'ಗಾಯತ್ರಿ ಮಂತ್ರ' ರಚಿಸಿದ ಕ್ಷತ್ರಿಯ ವಿಶ್ವಾಮಿತ್ರನು ಮಾಂಸಾಹಾರಿ, ಆದರೆ ಈ ಮಂತ್ರವನ್ನು ಕೇವಲ ಸಸ್ಯಾಹಾರಿಗಳು ಮಾತ್ರ ಪಠಿಸಲು ಯೋಗ್ಯರು. ದೇವಸ್ಥಾನಗಳ ಹೊರಗೋಡೆಗಳ ಮೇಲೆ ವಿಕೃತ ಕಾಮದ ಶಿಲ್ಪಗಳನ್ನು, ಶಿಲಾಬಾಲಿಕೆಗಳನ್ನು ಕೆತ್ತುತ್ತಾರೆ ಆದರೆ ಒಳಗೆ ಪೂಜೆ ಮಾಡಿಸುವಾತ ಪರಿಶುದ್ಧ ಮನಸ್ಸಿನವನಾಗಿರಬೇಕಂತೆ.

ದೇವರು ಮತ್ತು ಋಷಿಗಳು ಹಲವಾರು ಮದುವೆಯಾಗಬಹುದು ಆದರೆ ಭಕ್ತರು ಮಾತ್ರ ಏಕಪತ್ನೀವ್ರತಸ್ಥರಾಗಿರಬೇಕು. ದೇವೇಂದ್ರನ ಆಸ್ಥಾನದಲ್ಲಿ ರಂಭೆ, ಊರ್ವಶಿ, ಮೇನಕೆಯಂತಹ ಹಲವಾರು ವೇಶ್ಯೆಯರು ಇರಬಹುದು. ಮಾನವರಿಗೆ ಮಾತ್ರ ಇದು ನಿಷಿದ್ಧ. ಮಹಾಭಾರತ ಹಾಗೂ ಭಗವದ್ಗೀತೆ ಬರೆದ ವೇದವ್ಯಾಸ ಮುನಿಯು ಮಾಂಸಾಹಾರಿ ಮೀನುಗಾರ ಜಾತಿಯವನು. ಅವನು ಸೃಷ್ಟಿಸಿದ ಪಾತ್ರವಾದ ಕೃಷ್ಣನೂ ಮಾಂಸಾಹಾರಿ. ಆದರೆ ಇಂದು ಇವೆಲ್ಲಾ ಸಸ್ಯಾಹಾರಿಗಳ ಖಾಸಗಿ ಸೊತ್ತು. ಬೇಟೆಗಾರ ವಾಲ್ಮೀಕಿ ಮುನಿಯು ಮಾಂಸಾಹಾರಿ. ರಾಮಾಯಣದ ಮುಖ್ಯ ಪಾತ್ರವಾದ ರಾಮ, ಹನುಮಂತರೂ ಮಾಂಸಾಹಾರಿಗಳು. ಆದರೆ ಇಂದು ಇವರೆಲ್ಲಾ ಸಸ್ಯಹಾರಿಗಳ ಕೈಯಲ್ಲಿ ಬಂಧಿಗಳು. ಎಲ್ಲಾ ದೇವರ ಕೈಯಲ್ಲಿ ಭಯಂಕರ ತಾಮಸಿಕ ಶಸ್ತ್ರಗಳಿವೆ, ಆದರೂ ಸಾತ್ವಿಕನಿಗೆ ಮಾತ್ರ ದೇವರು ಒಲಿಯುವುದಂತೆ. ಹರಕೆ ಪೂರೈಸದಿದ್ದರೆ ದೇವರು ಹಗೆತನ ಸಾಧಿಸುತ್ತಾನಂತೆ ಆದರೂ ಅವನಿಗೆ ಕರುಣಾಮಯಿ, ಭಕ್ತವತ್ಸಲನೆಂಬ ಬಿರುದು. ಬಿಡದಿಯ ನಿತ್ಯಾನಂದನು ಹಿಂದೂ ಧರ್ಮದ ಹೆಸರಲ್ಲಿ, ಕುಂಡಲಿನಿ ಜಾಗೃತಿಯ ನೆಪದಲ್ಲಿ, ಹೆಣ್ಣುಮಕ್ಕಳ ಬ್ರೇನ್‌ವಾಶ್ ಮಾಡಿ ಲೈಂಗಿಕ ಶೋಷಣೆ ಮಾಡಿದ. ಅಹಲ್ಯೆ, ತುಳಸಿ ಇವರ ವಿಷಯದಲ್ಲೂ ದೇವರು ಇಂದ್ರ ಮಾಡಿದ್ದೂ ಇದನ್ನೇ! ಆದರೂ ದೇವರ, ಇಂದ್ರನ ಪವಿತ್ರತೆಗೆ ಚ್ಯುತಿಯಿಲ್ಲ. ಹೀಗೆ ಪುರಾಣದ ತುಂಬೆಲ್ಲಾ ವೈರುಧ್ಯಗಳೇ ತುಂಬಿವೆ. ಇದರ ಲಾಭವನ್ನೇ ಸ್ವಾಮೀಜಿಗಳೆಲ್ಲಾ ಪಡೆಯುವುದು. ಹಿಂದೂ ಧರ್ಮದ ರಕ್ಷಕ ಬ್ರಹ್ಮಚಾರಿ ಪ್ರಮೋದ್ ಮುತಾಲಿಕ್ ಅತ್ಯಾಚಾರಿ ನಿತ್ಯಾನಂದನ ಬೆಂಬಲಕ್ಕಿಳಿದದ್ದು ಧರ್ಮದ ರಕ್ಷಣೆಗಲ್ಲ, ನಿತ್ಯಾನಂದನ ಹಣದ ಆಸೆಗಂತೆ. ತಮಿಳರ ರವಿಶಂಕರ ಜೊತೆ ಕೈಗೂಡಿಸಿ ಕನ್ನಡ ಚಾನಲ್‌ವೊಂದು ತಮಿಳು ನಿತ್ಯಾನಂದನನ್ನು ಹಣಿದದ್ದು ಪೀಡಿತ ಕನ್ನಡ ಹೆಣ್ಣುಮಕ್ಕಳಿಗೆ ನ್ಯಾಯವೊದಗಿಸಲು ಮಾತ್ರವಲ್ಲ ರವಿಶಂಕರ ಗುರೂಜಿಗೆ ಶ್ರೀಮಂತ ಬೆಂಗಳೂರಿನ "ಧಾರ್ಮಿಕ ಮಾರುಕಟ್ಟೆಯಲ್ಲಿ" ಸ್ಪರ್ಧಿಯೊಬ್ಬ ಇರಬಾರದೆಂದು!

ಎಲ್ಲಿಡೆಯೂ ಜನರಿಗೆ ಎರಡೆರಡು ಮುಖಗಳು. ಹೀಗಿರುವಾಗ ಧರ್ಮದ ಉದ್ಧಾರ ಹೇಗೆ ಸಾಧ್ಯ?

-ಪ್ರಮೋದ್ ಎಸ್. ಶೆಟ್ಟಿ, ಮಂಗಳೂರು

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 04-07-2012 RNI No. KARKAN2003/



ರಮ್ಯಾಳಿಗೆ ರಮ್ಯ ಅವಕಾಶ

ಮೊನ್ನೆಮೊನ್ನೆಯಷ್ಟೇ ರೂಪಾ ಅಯ್ಯರ್ ನಿರ್ದೇಶನದ 'ಚಂದ್ರ' ಚಿತ್ರದಿಂದ ಹೊರಬಂದು ಸುದ್ದಿ ಮಾಡಿದ್ದ ರಮ್ಯಾ ಈಗ ಮತ್ತೊಂದು ಕಾರಣಕ್ಕೆ ಸುದ್ದಿ ಮಾಡಿದ್ದಾರೆ. ಅದೇನೆಂದರೆ ತೆಲುಗಿನ ಖ್ಯಾತ ನಿರ್ದೇಶಕ ಕೋಡಿ ರಾಮಕೃಷ್ಣ ನಿರ್ದೇಶಿಸುತ್ತಿರುವ ಹೊಸ ಚಿತ್ರದಲ್ಲಿ ನಾಯಕಿಯಾಗಿ ನಟಿಸಲು ರಮ್ಯಾಗೆ ಅವಕಾಶ ಸಿಕ್ಕಿದೆ. ಈಗಾಗಲೇ ಹಲವಾರು ಯಶಸ್ವೀ ಚಿತ್ರಗಳನ್ನು ನೀಡಿರುವ ಕೋಡಿ ಇದೇ ಮೊದಲ ಬಾರಿಗೆ ಕನ್ನಡ ಚಿತ್ರವೊಂದನ್ನು ನಿರ್ದೇಶಿಸಲು ಗಾಂಧಿನಗರಕ್ಕೆ ಬರುತ್ತಿದ್ದಾರೆ. ಅಷ್ಟೇ ಅಲ್ಲ, ಈ ಚಿತ್ರವನ್ನು ಕನ್ನಡ, ತಮಿಳು ಮತ್ತು ತೆಲುಗು ಹೀಗೆ ಮೂರು ಭಾಷೆಗಳಲ್ಲಿ ಕೋಡಿ ನಿರ್ದೇಶಿಸುತ್ತಿದ್ದು ಈ ಮೂರೂ ಭಾಷೆಗಳಿಗೂ ರಮ್ಯಾಳೇ ನಾಯಕಿಯಾಗಿ ಆಯ್ಕೆಯಾಗಿದ್ದಾರೆ!

ಈಗ ಗೊತ್ತಾಯಿತಲ್ಲ ರೂಪಾ ಅಯ್ಯರ್ ನಿರ್ದೇಶನದ ಕನ್ನಡ-ತಮಿಳು ಅವತರಣಿಕೆಯ 'ಚಂದ್ರ' ಚಿತ್ರವನ್ನು ರಮ್ಯಾ ಯಾಕೆ ಕೈಬಿಟ್ಟಳೆಂದು? ಸಾಧಾರಣವಾಗಿ ಈ ತರಹದ ಲಾಭ-ನಷ್ಟದ ಲೆಕ್ಕಾಚಾರವನ್ನು ಹಾಕಿಯೇ ರಮ್ಯ ತನ್ನ ವೃತ್ತಿಜೀವನದಲ್ಲಿ ಒಂದೊಂದೇ ಹೆಜ್ಜೆಯನ್ನು ಇಡುತ್ತಾಳೆ. ಈ ಹಿನ್ನೆಲೆಯಲ್ಲಿ ನೋಡಿದರೆ, ತನ್ನ ವೃತ್ತಿಜೀವನದ ಎರಡನೇ ಚಿತ್ರವನ್ನು ನಿರ್ದೇಶಿಸುತ್ತಿರುವ ರೂಪಾ ಅಯ್ಯರ್ ಅವರ ಚಿತ್ರಕ್ಕಿಂತ, ದಕ್ಷಿಣ ಭಾರತದಲ್ಲಿ ನಿರ್ದೇಶಕನಾಗಿ ದೊಡ್ಡ ಹೆಸರು ಮಾಡಿರುವ ಕೋಡಿ ರಾಮಕೃಷ್ಣರವರ ಚಿತ್ರ ಖಂಡಿತವಾಗಿಯೂ ರಮ್ಯಾಳ ಪಾಲಿಗೆ ಬಂಪರ್ ಲಾಟರಿ ಹೊಡೆದಂತೆ. ಆದರೆ ಇಲ್ಲಿಯ ಪ್ರಶ್ನೆ ಇಷ್ಟೇ: ಒಂದು ಒಳ್ಳೆಯ ಚಿತ್ರ ಸಿಕ್ಕಿತು ಎಂಬ ಕಾರಣಕ್ಕೆ ಮೊದಲೇ ಒಪ್ಪಿಕೊಂಡಿದ್ದ ಚಿತ್ರವನ್ನು ಅರ್ಧಕ್ಕೆ ಕೈಬಿಡುವುದು ಎಷ್ಟು ಸರಿ? ನಾಯಕ-ನಾಯಕಿಯರು ವೃತ್ತಿಪರತೆ ತೋರಿಸದಿದ್ದರೆ ಉದ್ಯಮ ಹೇಗೆ ಅಭಿವೃದ್ಧಿ ಹೊಂದಲು ಸಾಧ್ಯ, ಅಲ್ಲವೇ?

ಅದ್ದೂರಿಯಾಗಿ ಗೆದ್ದ ಅರ್ಜುನ್ ಮತ್ತು ಧ್ರು



ಅರ್ಜುನ್ ನಿರ್ದೇಶನದ 'ಅದ್ದೂರಿ' ಎಂಬ ಚಿತ್ರದಿಂದ ಧ್ರುವ ಸರ್ಜ ಎಂಬ ಹೊಸ ನಾಯಕನ ಆಗಮನ ಕನ್ನಡ ಚಿತ್ರರಂಗದಲ್ಲಿ ಆಗಿದೆ. ಈ ಧ್ರುವ ಸರ್ಜ ಬೇರೆ ಯಾರೂ ಅಲ್ಲ, ಈಗಾಗಲೇ ನಾಯಕ ನಟನಾಗಿ ನಟಿಸುತ್ತಿರುವ ಚಿರಂಜೀವಿ ಸರ್ಜನ ಕಿರಿಯ ಸಹೋದರ. 'ವಾಯುಪುತ್ರ' ಎಂಬ ಚಿತ್ರದ ಮುಖಾಂತರ ಚಿರಂಜೀವಿ ಸರ್ಜ ಮೂರ್ನಾಲ್ಕು ವರ್ಷಗಳ ಹಿಂದೆಯೇ ಗಾಂಧಿನಗರಕ್ಕೆ ಎಂಟ್ರಿಕೊಟ್ಟಿದ್ದರು. ಇವರ ಮಾವ ತಮಿಳಿನ ಸೂಪರ್ ಸ್ಟಾರ್ ಅರ್ಜುನ್ ಸರ್ಜ ಸ್ವತಃ ಮುತುವರ್ಜಿ ವಹಿಸಿ, ಚಿರಂಜೀವಿಯನ್ನು ಉದ್ಯಮದ ಎಲ್ಲಾ ಕಲಾವಿದರಿಗೆ ಪರಿಚಯಿಸಿದ್ದರು. ಆದರೆ ಚಿರಂಜೀವಿ ನಿರೀಕ್ಷಿಸಿದ ಮಟ್ಟದಲ್ಲಿ ಕನ್ನಡ ಚಿತ್ರರಂಗದಲ್ಲಿ ಮೆರೆಯಲಿಲ್ಲ ಎಂಬುದು ಬೇರೆ ವಿಷಯ.

ಚಿರಂಜೀವಿ ಹಾದಿಯಲ್ಲೇ ಆತನ ಕಿರಿಯ ಸಹೋದರ ಧ್ರುವ ಸರ್ಜ ಕೂಡ ಸಾಗುತ್ತಾನೋ ಎಂದು ಭಾವಿಸಿದವರಿಗೆ 'ಅದ್ದೂರಿ' ಅಚ್ಚರಿ ನೀಡಿದೆ. ಏಕೆಂದರೆ 'ಅದ್ದೂರಿ' ಚಿತ್ರದಲ್ಲಿ ಧ್ರುವನ ನೃತ್ಯ ನೋಡಿ ಬೆರಗಾಗದವರೇ ಇಲ್ಲ, ಫೈಟಿಂಗ್‌ನಲ್ಲೂ ಧ್ರುವ ಸಖತ್ತಾಗಿ ಮಿಂಚಿದ್ದಾನೆ. ಅದೇರೀತಿ ಡೈಲಾಗ್ ಡೆಲಿವರಿ ಶೈಲಿಯಲ್ಲಿ ತನ್ನದೇ ಆದ ಛಾಪನ್ನು ತಂದಿದ್ದಾನೆ. ಹೀಗೆ ಎಲ್ಲ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ನೋಡಿದರೆ ಧ್ರುವ ತನ್ನ ಮೊದಲ ಪ್ರಯ ಗೆದ್ದಿದ್ದಾನೆ ಎಂದು ಹೇಳಬಹುದು. ಈತನ ನಟನೆಯನ್ನು ನೋಡಿ ಈಗಾಗಲೇ ರಾ ವೆಂಕಟೇಶ್‌ರಂತಹ ದೊಡ್ಡ ನಿರ್ಮಾಪಕರು ಕಾಲ್‌ಶೀಟ್ ಪಡೆಯಲು ಆತನನ್ನು ಸಂಪರ್ಕಿ ಒಂದು ಮೂಲದ ಪ್ರಕಾರ ಕೆಲವು ನಿರ್ಮಾಪಕರು ಆತನಿಗೆ 54 ಲಕ್ಷ ರೂ. ಸಂ ಕೊಡುವ ಆಸೆಯನ್ನೂ ತೋರಿಸಿದ್ದಾರೆ. ಆದರೆ ಧ್ರುವ ಅದಕ್ಕಿಂತಲೂ ಹೆಚ್ಚು ಸಂಭಾವ ಅಪೇಕ್ಷಿಸುತ್ತಿರುವುದರಿಂದಲೋ ಏನೋ ಆತ ಯಾವ ಹೊಸ ಚಿತ್ರಕ್ಕೂ ಸಹಿ ಹಾಕಿ

ಅಂದಹಾಗೆ, ಧ್ರುವನಿಗೆ ಕಳೆದ ಒಂದು ವರ್ಷದಿಂದ ನಟನಾ ತರಬೇತಿಯನ್ನು ಆತನಿಂದ ಒಳ್ಳೆಯ ನಟನೆಯನ್ನು ಪಡೆದ ನಿರ್ದೇಶಕ ಅರ್ಜುನ್‌ಗೆ ಧ್ರುವನ ಯಶಸ್ಸಿನಲ್ಲಿ ಪಾಲು ಸಿಗಬೇಕು. ಏಕೆಂದರೆ ಅರ್ಜುನ್ ಪಾಲಿಗೆ 'ಅಂಬಾರಿ' ನಂತರ ಇದು ಚಿತ್ರವಾಗಿತ್ತು, ಕನ್ನಡ ಚಿತ್ರರಂಗದಲ್ಲಿ ಒಂದು ಸಿನಿಮಾ ಗೆದ್ದರೆ ಅದರ ನಾಯಕ ನಟನನ್ನು ಅವಕಾಶಗಳು ಹುಡುಕಿಕೊಂಡು ಬಂದರೂ ನಿರ್ದೇಶಕನಿಗೆ ಹೆಚ್ಚೆಂದರೆ ಒಂದೆರಡು ಮೆಚ್ಚು ಹೊರತಾಗಿ ಹೊಸ ಅವಕಾಶಗಳು ಸಿಗುವುದು ಬಹಳ ಕಡಿಮೆ.

ವಿಪರ್ಯಾಸ ನೋಡಿ, ಈ ಚಿತ್ರದ ನಟ ಧ್ರುವನ ಮನೆ ಮುಂದೆ ನಿರ್ಮಾಪಕರು ಸಾಲುಗಟ್ಟಿ ನಿಲ್ಲಲು ಸಜ್ಜಾಗಿದ್ದರೂ ಆ ಚಿತ್ರದ ಗೆಲುವಿಗೆ ಮುಖ್ಯ ಕಾರಣಕರ್ತರಾದ ನಿರ್ದೇಶಕ ಅರ್ಜುನ್ ಅವರಿಗೆ ಇವತ್ತಿಗೂ ಹೊಸ ಅವಕಾಶಗಳು ಬಂದಿಲ್ಲ, ಇದು ನಿಜಕ್ಕೂ ಬೇಸರದ ವಿಷಯ.



ದೀಪಾಳಿಗೆ ಶಶಾಂಕ್ ಕೊಟ್ಟ ಶಾಕ್!

ಭಾರತದ ಪ್ರಜೆಗಳು ಈಗ ಬೆಲೆ ಏರಿಕೆ, ರಾಷ್ಟ್ರಪತಿ ಅಭ್ಯರ್ಥಿ, ಯಡ್ಡಿ-ರೆಡ್ಡಿಗಳ ಬಂಧನದ ಬಗ್ಗೆ ಚರ್ಚೆ ಮಾಡುತ್ತಿದ್ದರೆ ನಮ್ಮ ಗಾಂಧಿನಗರದ ಜನ ಮಾತ್ರ ನಾಯಕಿ ದೀಪಾ ಸನ್ನಿಧಿ ಬಗ್ಗೆ ತಲೆ ಕೆಡಿಸಿಕೊಂಡಿದ್ದಾರೆ.

ಇದಕ್ಕೆ ಕಾರಣ: ಸುದೀಪ್ ನಾಯಕನಾಗಿ ನಟಿಸಲಿರುವ 'ಬಚನ್' ಚಿತ್ರದಿಂದ ನಿರ್ದೇಶಕ ಶಶಾಂಕ್ ದೀಪಾ ಸನ್ನಿಧಿಗೆ ಗೇಟ್‌ಪಾಸ್ ಕೊಟ್ಟಿರುವುದು. ಈ ಚಿತ್ರದ ಮುಹೂರ್ತದ ಮುನ್ನಾದಿನ ಕರೆದ ಸಂತೋಷಕೂಟದಲ್ಲಿ ತಮ್ಮ ಚಿತ್ರದಲ್ಲಿ ದೀಪಾ ಸನ್ನಿಧಿ, ಭಾವನಾ ಮತ್ತು 'ಪ್ಯಾರ್ ಆಗ್ಬಿಟ್ಟೈತೆ' ಖ್ಯಾತಿಯ ಪರೂಲ್ ನಾಯಕಿಯರಾಗಿ ನಟಿಸಲಿದ್ದಾರೆ ಎಂದು ಶಶಾಂಕ್ ಅನೌನ್ಸ್ ಮಾಡಿದ್ದರು.



ಆದರೆ ಅದಾದ ನಾಲ್ಕೇ ದಿನಕ್ಕೆ ಈ ಮೂವರಲ್ಲಿ ಏಕೈಕ ಕನ್ನಡತಿಯಾಗಿದ್ದ ದೀಪಾಳನ್ನು ಶಶಾಂಕ್ ತೆಗೆದುಹಾಕಿದ್ದಾರೆ. ಇದಕ್ಕೆ ಕಾರಣವೇನೆಂದು ಕೇಳಿದರೆ "ನಾನು ಚಿತ್ರಕಥೆ ಬರೆಯುವಾಗ ಆಕೆಯ ಪಾತ್ರ ಬದಲಾಗುತ್ತಾ ಹೋಯಿತು. ಈ ಪಾತ್ರಕ್ಕೆ ಆಕೆ ನ್ಯಾಯ ಒದಗಿಸಲು ಸಾಧ್ಯವಿಲ್ಲ, ಅದನ್ನು ಆಕೆಗೆ ಮನವರಿಕೆ ಮಾಡಿದ್ದೇನೆ" ಎಂದು ಶಶಾಂಕ್ ಬಡಾಯಿ ಬಿಡುತ್ತಿದ್ದಾರೆ.

ಅಂದಹಾಗೆ ಚಿತ್ರದ ಮುಹೂರ್ತ ಆದನಂತರವೂ ಚಿತ್ರಕಥೆ ಬದಲಾಯಿಸುವ ಈ ನಿರ್ದೇಶಕರ ಕಾರ್ಯತತ್ಪರತೆಗೆ ಏನೆನ್ನಬೇಕೋ ಗೊತ್ತಿಲ್ಲ, ನಾಯಕಿಯನ್ನು ಬದಲಾಯಿಸುವುದು ಶಶಾಂಕ್‌ಗೆ ಅಂಟಿಕೊಂಡಿರುವ ಹೊಸ ಚಾಳಿಯೇನೂ ಅಲ್ಲ, ಈ ಹಿಂದೆ ಅವರ ನಿರ್ದೇಶನದ 'ಜರಾಸಂಧ' ಚಿತ್ರದಲ್ಲೂ ಹೀಗೇ ಆಗಿತ್ತು, ದುನಿಯಾ ವಿಜಿ ಮತ್ತು ಐಂದ್ರಿತಾ ರೈ ಆ ಚಿತ್ರದಲ್ಲಿ ನಟಿಸಲಿದ್ದಾರೆ ಎಂದು ಭಾರೀ ಪ್ರಚಾರ ಮಾಡಿದ್ದ ಶಶಾಂಕ್ ಕೊನೆಗೆ ದುನಿಯಾ ವಿಜಿಯ ಒತ್ತಡಕ್ಕೆ ಮಣಿದು ಐಂದ್ರಿತಾ ರೈ ಬದಲು ಪ್ರಣತಿಯನ್ನು ನಾಯಕಿಯನ್ನಾಗಿ ತೆಗೆದುಕೊಂಡಿದ್ದರು.

ಸದ್ಯ ಗಾಂಧಿನಗರದಲ್ಲಿ ಅದೃಷ್ಟದ ತಾರೆಯೆಂದೇ ಪರಿಗಣಿಸಲಾಗಿರುವ ದೀಪಾ ಸನ್ನಿಧಿಯನ್ನು ಯಾಕೆ ಬದಲಾಯಿಸಿದರು ಎಂಬುದು ಗಾಂಧಿನಗರದಲ್ಲಿ ಚರ್ಚೆಯಾಗುತ್ತಿದೆ. ಸರಿಸುಮಾರು ಆರಡಿ ಎತ್ತರದ ದೀಪಾ ಈಗಾಗಲೇ ಚಾಲೆಂಜಿಂಗ್ ಸ್ಟಾರ್ ದರ್ಶನ್ ಮತ್ತು ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಜೊತೆ ನಟಿಸಿ ತನ್ನ ಪ್ರತಿಭೆ ಮತ್ತು ಮೈಸಿರಿಯ ಮೂಲಕ ಜನರ ಮನಸ್ಸನ್ನು ಗೆದ್ದಿದ್ದಾಳೆ. ಆದರೂ ಈಕೆಯನ್ನು ಕೈಬಿಟ್ಟದ್ದೇಕೆ?

ಗಾಂಧಿನಗರದಲ್ಲಿ ಹರಡಿರುವ ಸುದ್ದಿಯ ಪ್ರಕಾರ ಇದು ಸುದೀಪ್ ಕೆಲಸ ಎಂಬುದು ಕೆಲವರ ಅಭಿಪ್ರಾಯ. ಇನ್ನು ಕೆಲವರ ಪ್ರಕಾರ ಸುದೀಪ್ ಗೆಳೆಯ ದರ್ಶನ್ ಕೈವಾಡ ಇದೆಯಂತೆ. ಬೇರೆಯವರ ಪ್ರಕಾರ ಈಕೆ ಸುದೀಪ್ ಜೊತೆ ನಟಿಸಿ ಗೆದ್ದರೆ ಈಕೆ ನಂಬರ್‌ಒನ್ ಪಟ್ಟ ಅಲಂಕರಿಸುವುದು ಗ್ಯಾರಂಟಿ ಎಂದು ಕೆಲವು ನಟಿಯರೆಲ್ಲ ಒಟ್ಟು ಸೇರಿ ದೀಪಾಗೆ ಗೇಟ್‌ಪಾಸ್ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರಂತೆ.

ಇಂತಹ ಅಂತೆಕಂತೆಗಳ ನಡುವೆ ತಾನೊಬ್ಬ ಶ್ರೇಷ್ಠ ನಿರ್ದೇಶಕ ಎಂಬ ಅಹಂನಲ್ಲಿರುವ ಶಶಾಂಕ್ ಉದ್ದೇಶಪೂರ್ವಕವಾಗಿಯೇ ಈ ರೀತಿ ಮಾಡಿದ್ದಾರೆ ಎಂಬ ಮಾತೂ ಕೇಳಿಬರುತ್ತಿದೆ. ಒಟ್ಟಾರೆಯಾಗಿ ಇದರಲ್ಲಿ ಯಾವುದು ಸತ್ಯ ಯಾವುದು ಸುಳ್ಳು ಎಂಬುದು ಮಾತ್ರ ಯಾರಿಗೂ ಗೊತ್ತಿಲ್ಲ.

ಆದರೆ ಇಂತಹ ಯಾವುದೇ ಮಾತಿನ ಬಗ್ಗೆ ತಲೆ ಕೆಡಿಸಿಕೊಳ್ಳದ ದೀಪಾ ಸನ್ನಿಧಿ "ನಿಜ, ನಿರ್ದೇಶಕ ಶಶಾಂಕ್ ನಮ್ಮ ಮನೆಗೆ ಬಂದು ನಾನು ಚಿತ್ರದಲ್ಲಿಲ್ಲ ಎಂಬ ವಿಷಯವನ್ನು ತಿಳಿಸಿದ್ದಾರೆ. ಅವರ ಮಾತಿಗೆ ನಾನು ಗೌರವ ಕೊಟ್ಟಿದ್ದೇನೆ" ಎಂದಷ್ಟೇ ಹೇಳಿ ಸುಮ್ಮನಾಗಿದ್ದಾರೆ. ಅದೇನೇ ಇದ್ದರೂ ಓರ್ವ ನಟಿಯನ್ನು ಆಯ್ಕೆ ಮಾಡಿದ ನಂತರ ಆಕೆಗೆ ಈ ರೀತಿ ಅವಮಾನ ಮಾಡಬಾರದಿತ್ತು ಎಂಬುದು ಮಾತ್ರ ನಮ್ಮ ಅನಿಸಿಕೆ.

● ಶೆಣೈ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4. Phone : 26676427
Fax : 26604536, E-mail : lankesh70@rediffmail.com